ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೫೮೩೨೭೬

೨೦೦೮

ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಪ್ರಬಂಧ

ಸಂಶೋಧಕಿ
ಕೃಷ್ಣವೇಣಿ

ಮಾರ್ಗದರ್ಶಕರು
ಡಾ. ಲಕ್ಷ್ಮೀದೇವಿ ಗವಾಯಿ







388

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

Shree Mahantesh
XEROX & BOOK BINDING
Near S.B.I., K.C.D. Road,
DWD, Ph : 0836 - 2447880

388

AKSHARA GRANTHALAYA
ACC.NO. 130025

388

ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ

ಎಂ.ಫಿಲ್. ಪದವಿಗಾಗಿ ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಪ್ರಬಂಧ

ಮಾರ್ಗದರ್ಶಕರು
ಡಾ. ಲಕ್ಷ್ಮೀದೇವಿ ಗವಾಯಿ
ಉಪನ್ಯಾಸಕರು

ಕನ್ನಡ ವಿಶ್ವವಿದ್ಯಾಲಯ, ಹಂಪಿ ಅಧ್ಯಯನಾಂಗ ವಿದ್ಯಾರಣ್ಯ-೫೮೩ ೨೭೬

ಸಂಶೋಧಕಿ
ಕೃಷ್ಣವೇಣಿ

ಕನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲಲಿತಕಲಾ ನಿಕಾಯ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೮

759.95487
KRI b
130025

ಪ್ರಮಾಣ ಪತ್ರ

ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ ಎಂಬ ಶೀರ್ಷಿಕೆಯ ಕಿರು ಸಂಶೋಧನಾ ಪ್ರಬಂಧಬವನ್ನು ಡಾ. ಲಕ್ಷ್ಮೀದೇವಿ ಗವಾಯಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಕೃಷ್ಣವೇಣಿ)
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ದೃಢೀಕರಣ ಪತ್ರ

ಕೃಷ್ಣವೇಣಿ ಇವರು ಬರೆದು ಸಾದರಪಡಿಸಿದ **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ** ಎಂಬ ಶೀರ್ಷಿಕೆಯ ಕಿರುಸಂಶೋಧನಾ ಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು, ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಈ ಕಿರು ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧ ಇಡಿಯಾಗಿ ಇಲ್ಲವೇ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಡಾ. ಲಕ್ಷ್ಮೀದೇವಿ ಗವಾಯಿ
ಉಪನ್ಯಾಸಕರು

ಪ್ರಮಾಣ ಪತ್ರ

ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ ಎಂಬ ವಿಷಯ ಕುರಿತು ಎಂ.ಫಿಲ್. ಪದವಿಗಾಗಿ ಕೃಷ್ಣವೇಣಿ ಅವರು ನನ್ನ ಸಹ ಮಾರ್ಗದರ್ಶನದಲ್ಲಿ ಸಿದ್ದಪಡಿಸಿರುವ ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೩೧-೧೦-೦೮
ಸ್ಥಳ : ವಿದ್ಯಾರಣ್ಯ

(ಸಹ ಮಾರ್ಗದರ್ಶಕರು)
ಡಾ. ಎಸ್.ಸಿ.ಪಾಟೀಲ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಿವಿಡಿ

ಜಗನ್ನಾಥ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈದಾನಿಕತೆ

ಕಲೆ ಮಾನವನ ಕ್ರೀಯಾಶಕ್ತಿಯ ಸೃಜನಾತ್ಮಕ ಅಭವ್ಯಕ್ತಿಕತೆ ಇದರ ಮೂಲಬೀಜ ಮನುಷ್ಯನ ಸ್ವಭಾವದಲ್ಲಿದ್ದರೂ ಇವು ತಾವಾಗಿಯೇ ಬರುವ ವಿಷಯಗಳಲ್ಲ. ಭಾವನೆಗೆ ಬಂದಿರುವುದನ್ನು ಅಭವ್ಯಕ್ತಗೊಳಿಸುವ ತನಗೆ ಸಂತೋಷ, ದುಃಖಕಾರಕ ಯಾವುದೇ ಒಂದು ಭಾವನೆಯನ್ನು ನಿರ್ಮಿಸುವ ಮೂಲಕ ಕಲಾತ್ಮಕವಾಗಿ ಭಾವನೆಯ ತೀವ್ರತೆಯನ್ನು ನಿರ್ಮಿಸಿ, ಆ ಭಾವ ತೀವ್ರತೆಯ ಭಾವನೆ ಸಮಾಧಾನ ಸಂತೋಷಗೊಳ್ಳುತ್ತದೆ. ಇದು ನಿಸರ್ಗದ ಕೊಡುಗೆಯೆಂದೇ ಹೇಳಬಹುದು. ಯಾವುದೇ ಒಂದು ಗೋಚರವಾದದ್ದನ್ನು ಕೆಲ ವೇಳೆ ಅಗೋಚರವಾದುದ್ದನ್ನು ನಿರ್ಮಿಸುವಲ್ಲಿಯೂ ಪ್ರಬುದ್ಧನಾಗಿರುತ್ತಾನೆ. ಅಭಿವ್ಯಕ್ತಿಸುವ ರೀತಿಗಳು ಹಲವಾರು ಇವುಗಳನ್ನು ಕಾಣುವ ಕಣ್ಣುಗಳು ಸಹ ಬೇರೆ ಬೇರೆ ದೃಷ್ಟಿಕೋನದಿಂದ ದೃಷ್ಟಿಯನ್ನು ಹರಿಬಿಡುತ್ತವೆ[1] ಇವುಗಳಲ್ಲಿ ಸಾಮಾನ್ಯವಾದ ಕೆಲವನ್ನು ಆಯ್ದುಕೊಂಡಾಗ 'ಲಲಿತಕಲೆ' ಎನ್ನಬಹುದು ಇದರಲ್ಲಿ ದೃಶ್ಯಕಲೆಯು ಒಂದು. ಈ ಕಲೆಯು ಮನಸ್ಸಿನಲ್ಲಿ ಉಗಮಿಸಿ ಇನ್ನೊಂದು ಮನಸ್ಸನ್ನು ತುಂಬುವದು, ಹಿಗ್ಗಿಸುವುದು ಇಲ್ಲವೇ ಪರಿವರ್ತಿಸುವುದೇ ಕಲೆಯ ಸಫಲತೆಯಾಗಿದೆ[2]

ಈ ದೃಶ್ಯಕಲಾ ಕ್ಷೇತ್ರವು ತುಂಬಾ ವಿಶಾಲವಾದದ್ದು ಅದು ಉಳಿದೆಲ್ಲಾ ಕ್ಷೇತ್ರಗಳಿಗಿಂತ ಭಿನ್ನ. ಇದು ತನ್ನದೇಯಾದ ರೀತಿಯಲ್ಲಿ ಶ್ರೇಷ್ಟತೆಯನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಆದಿ ಅಂತ್ಯಗಳಿಲ್ಲ. ಆದುದರಿಂದ ವಿಶ್ವವ್ಯಾಪಿ ವಿಶ್ವಭಾಷೆ ಮನುಷ್ಯ ಅನುವಂಶಿಕತೆ, ಪರಿಸರ ಪರಿಸ್ಥಿತಿಗಳ ಪ್ರಭಾವಕ್ಕೊಳಗಾಗಿರುತ್ತಾನೆ. ಕಲಾವಿದನು ಏನೆಲ್ಲವನ್ನು ಪಡೆದುಕೊಂಡರು. ಇವುಗಳಿಂದಲೇ ಪಡೆದುಕೊಂಡಿರುತ್ತಾನೆ. ಹಾಗೂ ಕಲೆಯ ಮೂಲಕ ಅದರ ಮೇಲೆ ಕಲಾವಿದ ತನ್ನ ವ್ಯಕ್ತಿತ್ವದ ಪಕ್ಕನ್ನು ಒಂದಲ್ಲ ಒಂದು ರೀತಿಯಲ್ಲಿ ಒತ್ತುತ್ತಾ ಬಂದಿದ್ದಾನೆ. ಹೀಗೆ ಕಲೆಗೆ ಅನೇಕ ಆಯಾಮಗಳಿವೆ. ಅನೇಕ

ದಿಕ್ಕುಗಳಿಂದ ಅನೇಕ ಉದ್ದೇಶ ಹಾಗೂ ವೈಶಿಷ್ಟ್ಯತೆಗಳಿವೆ ಕಲೆಯ ಮಾನವ ಕುಲದ ಜೀವಿತದಲ್ಲಿ ಅದರ ಸ್ಥಾನವೇನು? ಕಲೆಯ ಉಗಮವೆಲ್ಲಿ ? ಸಹಜವಾಗಿಯೇ ಪ್ರಶ್ನೆಗಳು ಕಲೋಪಾಸಕರನ್ನು ರಸಿಕರನ್ನು ಒಮ್ಮಿಲ್ಲೊಮ್ಮೆ ಕೆಣಕದೆ ಇಲ್ಲ[೩].ಇನ್ನೂ ಕೆಲವು ವಿದ್ವಾಂಸರು ತನ್ನ ಭಾವನೆಯ ತೀವ್ರತೆಯ ಅಭಿವ್ಯಕ್ತಿಯೊಂದೇ ಕಲಾ ಸೃಷ್ಟಿಗೆ ಕಾರಣವಲ್ಲ, ಆಗಿನ ಜನವರ್ಗಗಳ ಜೀವನದಲ್ಲಿ ಎರಡು ಪ್ರಧಾನ ಅಂಶಗಳು ಇವೆ. ಒಂದು ಜೀವನ ಯಶಸ್ಸಿನ ಆಹಾರ ಸಂಪಾದನೆ ಹಾಗೂ ಆಹಾರವಾಗುವ ಪಶು-ಪಕ್ಷಿಗಳು, ಗಿಡ-ಮರ-ಬಳ್ಳಿಗಳ ಸಮೃದ್ಧ ಬೆಳವಣಿಗೆಗೆ ಮತ್ತು ತಮ್ಮ ತಮ್ಮ ವಂಶಾಭಿವೃದ್ಧಿ[೪] ಎಂದು ವಿದ್ವಾಂಸರ ಅಭಿಪ್ರಾಯ. ಇವುಗಳೆಲ್ಲವನ್ನು ನೋಡಿದಾಗ ಕಲೆಯು ಬಹು ಪ್ರಾಚೀನವಾದದು ಎಂದು ತಿಳಿಯುತ್ತದೆ.

ಒಂದು ಸಲ ತಾನು ಅನುಭವಿಸಿದ ಅನಿಸಿಕೆಯನ್ನು ತನ್ನಲ್ಲಿಯೇ ಬರಮಾಡಿಕೊಳ್ಳುವುದು; ಹೀಗೆ ಬರಮಾಡಿಕೊಂಡ ಮೇಲೆ ಚಲನವಲನಗಳು ಗೆರೆಗಳು, ಬಣ್ಣಗಳು, ನಾದಗಳು, ಇಲ್ಲವೇ ಶಬ್ದಗಳಲ್ಲಿ ವ್ಯಕ್ತವಾದ ಭಾವನೆಯನ್ನು ಅನುಭವಿಸುವಂತೆ ಅದನ್ನು ಹರಿಬಿಡುವುದು ಇದೇ ಕಲೆಯ ಪ್ರಕ್ರಿಯೇಯಾಗಿದೆ. "ಎಂದು ಟಾಲಸ್ಟಾಯ್ ಹೇಳಿದ್ದಾನೆ. ಈ ಭಾವನೆಯು ಎಂದೆಂದಿಗೂ ಇದ್ದೆ ಇರುತ್ತದೆ. ಆದರೆ ಪರಿಸರದ ಪ್ರಭಾವ ಕಲೆಯಲ್ಲಿ ಇರುತ್ತದೆ.

ಅಧ್ಯಯನದ ಉದ್ದೇಶ :

ಇಂತಹ ಅಧ್ಯಯನಗಳಿಂದ ಕಲೆಯ ತಳಹದಿ ಗಟ್ಟಿಗೊಳ್ಳುವುದು ಈ ಆದಿಮಾನವನ ಕಲೆಯು ಹಲವು ಪ್ರಕಾರಗಳಲ್ಲಿ ಒಂದು ಕಲಾ ಪ್ರಕಾರಗಳು ಪ್ರತ್ಯೇಕವಾಗಿ ಗೋಚರವಾಗಿವೆ. ಮತ್ತು ಸ್ವತಂತ್ರ ಅಸ್ತಿತ್ವವನ್ನು ಹೊಂದಿವೆ. ಜನಸಾಮಾನ್ಯರ ಸೌಂದರ್ಯದ ಪ್ರಜ್ಞೆಯು ಮಣ್ಣಿನ ಗೊಂಬೆಗಳಲ್ಲಿ, ಕಲ್ಲಿನ ಆಯುಧಗಳಲ್ಲಿ ಮಡಿಕೆ-ಕುಡಿಕೆಗಳಲ್ಲಿ, ಕಲ್ಲಾಸರೆ ಗವಿವರ್ಣಚಿತ್ರಗಳಲ್ಲಿ ಸೂಚಿತವಾಗಿದೆ. ಇದರಲ್ಲಿ ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ ಕುರಿತು ಅಧ್ಯಯನಕ್ಕೆ ಒಳಪಡಿಸುವುದು ಮುಖ್ಯ ಉದ್ದೇಶವಾಗಿದೆ. ಈ ಪ್ರಾಗೈತಿಹಾಸಿಕ ಕಾಲದ ರೇಖಾ-ವರ್ಣ ಚಿತ್ರಕಲೆಯು ಹಲವು ಪ್ರದೇಶಗಳಲ್ಲಿ ಕಂಡು ಬರುತ್ತವೆ. ಉದಾಹರಣೆಗೆ ಬಳ್ಳಾರಿ ಕೋಟೆ (ಗುಡ್ಡ), ಸಂಜರಾಯನಕೋಟೆ, ಕುರುಗೋಡು, ಮತ್ತು ಹಂಪೆ ಇನ್ನು ಮುಂತಾದವುಗಳು.

ಪ್ರಾಗೈತಿಹಾಸಿಕ ಕಾಲದ ಸಾಂಸ್ಕೃತಿಕ ಪರಂಪರೆಯ ದೃಷ್ಟಿಯಿಂದ ವಿವಿಧ ಕಾಲಘಟ್ಟಗಳಲ್ಲಿ ರಚನೆಗೊಂಡ ಚಿತ್ರಕಲೆ ಕುರಿತು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ. ಅವುಗಳು ಆ ಪ್ರದೇಶದ ಜನಸಮುದಾಯದ ಆಶೋತ್ತರಗಳ ಬಿಂಬಿಸುತ್ತದೆ. ಮತ್ತು ಮಾನವನ ವಾಸಸ್ಥಳದ ಈ ಜಿಲ್ಲೆಯಲ್ಲಿ ಸಾವಿರಾರು ವರ್ಷಗಳ ಇತಿಹಾಸವಿದೆ ೨೦೦೦ಕ್ಕೂ ಹೆಚ್ಚು ಪ್ರಾಚೀನ ಚಿತ್ರಕಲೆಯ ಗುರುತುಗಳು ಈ ಪ್ರದೇಶದಲ್ಲಿ ಸಿಗುತ್ತವೆ. ಇವುಗಳ ವ್ಯಾಪಕ ಅಧ್ಯಯನ ಅಗತ್ಯ ಇಂದು ತುಂಬಾ ಮಹತ್ವದ್ದಾಗಿದೆ. ಮತ್ತು ಪ್ರಾಗೈತಿಹಾಸಿಕ ಚಿತ್ರಕಲೆಯು ಕ್ಷೇತ್ರದ ಹಲವು ತಾಂತ್ರಿಕ ಅಂಶಗಳನ್ನು ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ. ಹಾಗೆಯೇ ಕಾಲಮಾನದ ಪ್ರಭಾವದಿಂದ ವಿವಿಧ ರೀತಿಯ ವಿಪತ್ತುಗಳಿಂದ ನಾಶಹೊಂದುತ್ತಿರುವ ಚಿತ್ರಗಳನ್ನು ಒಂದು ವ್ಯವಸ್ಥಿತ ಅಧ್ಯಯನಕ್ಕೊಳಪಡಿಸಿ ಅವುಗಳ ಮಹತ್ವವನ್ನು ಮನವರಿಕೆ ಮಾಡಿಕೊಡುವ ಉದ್ದೇಶವನ್ನು ಪ್ರಸ್ತುತ ಈ ಅಧ್ಯಯನ ಹೊಂದಿದೆ.

ಕಣ್ಮರೆಯಾದ ಎಷ್ಟೋ ಅತ್ಯಮುಲ್ಯವಾದ ಕಲಾಸಂಪತ್ತನ್ನು ಸಂಶೋಧನೆಯ ಮೂಲಕ ಹೊರತರಬೇಕಾಗಿದೆ. ಮತ್ತು ಜೀವಂತಗೊಳಿಸಬೇಕಾಗಿದೆ. ಚಿತ್ರಗಳು ಮಾನವನ ತೀರ ಹಳೆಯ ಬರವಣಿಗೆಯ ದಾಖಲೆಗಳಾಗಿವೆ. ಈ ದಾಖಲೆಗಳಿಂದ ನಮಗೆ ಅವರ ಆಚಾರ ವಿಚಾರಗಳು ನಂಬಿಕೆಗಳು ಮತ್ತು ಸೌಂದರ್ಯೋಪಾಸನೆ ಮತ್ತು ಧಾರ್ಮಿಕ ಬೆಳವಣಿಗೆಯಂತಹ ಆಂತರಿಕ ವಿಷಯಗಳನ್ನು ತಿಳಿಸಿಕೊಡುತ್ತದೆ. ಅಲ್ಲದೇ ಈ ಕಾಲದ ಸಾಮಾಜಿಕ, ಧಾರ್ಮಿಕ, ಜೀವನದ ಬಗ್ಗೆ ಹಾಗೂ ಸಮಕಾಲೀನ ಪ್ರಾಣಿ ವರ್ಗ ಸಸ್ಯವರ್ಗಗಳ ಕುರಿತು ತಿಳಿಸಿಕೊಡುವ ಮಹತ್ವದ ಚಿತ್ರಲಿಪಿಗಳಾಗಿವೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು :

ಚಿತ್ರಕಲೆಯು ಪ್ರಥಮ ಲಿಪಿಯಾದರೂ ಸಂಶೋಧನೆಯ ದೃಷ್ಟಿಯಲ್ಲಿ ತುಂಬಾ ಕಡಿಮೆ ಅಧ್ಯಯನಗಳು ಆಗಿವೆ. ವಿಶ್ವವಿದ್ಯಾಲಯದ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರಾ ಇತ್ತೀಚೆಗಷ್ಟೆ ೬೦ ರ ದಶಕದಲ್ಲಿ ಈ ಅಧ್ಯಯನಗಳು ತೀವ್ರಗೊಂಡು ಈಗ ಪ್ರೌಢಾವಸ್ಥೆಗೆ ಬಂದು ತಲುಪಿವೆ. ೧೯೮೦ರ ದಶಕದಿಂದ ಕರ್ನಾಟಕದಲ್ಲಿ ನಡೆದ ದೃಶ್ಯಕಲಾ ಅಧ್ಯಯನಗಳು ಸ್ಥೂಲವಾದ ವಿವರವನ್ನು ಈ ಕೆಳಗಿನಂತೆ ಸಮೀಕ್ಷಿಸಿ ನೋಡಲಾಗಿದೆ. ೧೯೮೦ ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲ ಬಾರಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನ ಪ್ರಾರಂಭ ಗೊಂಡಿರುವುದು ಕಂಡು ಬರುತ್ತದೆ. ಡಾ. ಎಸ್.ಸಿ.ಪಾಟೀಲರು ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ: ಒಂದು ಅಧ್ಯಯನ [೬] ಎಂಬ ಸಂಶೋಧನಾ ಕಿರುಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಿಸಲಾಗಿದೆ. ೧೯೮೭ರಲ್ಲಿ ಡಾ. ಬಿ.ಕೆ.ಹಿರೇಮಠ ಅವರು 'ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ[೭] ಎಂಬ ಪಿಎಚ್.ಡಿ. ಅಧ್ಯಯನ ಎಂಬ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಂತೆ ಕೆಲವು ಅಧ್ಯಯನಗಳು ಮೀಸಲಾಗಿಟ್ಟ ಅಧ್ಯಯನ ಮಾಡಿದ್ದಾರೆ. ಇವರ ನಂತರ ೧೯೯೧ ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೆ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ ಕರ್ನಾಟಕದ ಜನಪದ ಚಿತ್ರಕಲೆ[೮] ಈ ಮಹಾಪ್ರಬಂಧವನ್ನು ಡಾ. ಎಸ್.ಸಿ.ಪಾಟೀಲರು ಸಿದ್ದಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರ ದಿನಗಳಲ್ಲಿ ೧೯೯೫ ರಲ್ಲಿ ಡಾ. ಅ.ಲ. ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ.

೨೦೦೨ರಲ್ಲಿ ಡಾ. ಗಿರೀಶ್ ಅವರ ಬುಡಕಟ್ಟು ಚಿತ್ರಕಲೆ[೧೪] ೨೦೦೨ ರಲ್ಲಿ ಡಾ. ಲಕ್ಷ್ಮಿದೇವಿ ಗವಾಯಿ ಅವರ ಕಲಾವಿದೆ ಎಂ.ವಿ ಚೆಟ್ಟಿಯವರ ಜೀವನ, ಕಲಾಕೃತಿಗಳು-ಒಂದು ಅಧ್ಯಯನ[೧೫] ೨೦೦೨ರಲ್ಲಿ ಶರಣಪ್ಪ ಕೋಲ್ಕಾರ ಅವರ ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ[೧೬] ೨೦೦೨ ರಲ್ಲಿ ಡಾ. ಸೌಮ್ಯ ಅವರ ಯಂತ್ರಾ ದಿ ವಿಜ್ಯುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಟೆಂಪರರಿ. ತಾಂತ್ರಿಕ ಆರ್ಟಿಸ್ಟ್[೧೭] ೨೦೦೨ ರಲ್ಲಿ ಡಾ. ಪ್ರಮೀಳಾ ಲೋಚನ ಅವರ ಮೈಂಡ್

ಮ್ಯೂಜಿಕ್ ಅಂಡ್ ಕಲರ್ ಎಕ್ಸ್‌ಪೋಜಿಸ್ ಅಂಡ್ ಡೆವಲೊಪಮೆಂಟ್ ಆಫ್ ರಾಗಾಮಾಲಾ ಅಂಡ್ ಕಾಟೆಂಪರರಿ ಪೇಂಟಿಂಗ್[೧೮] ೨೦೦೩ ರಲ್ಲಿ ಡಾ. ವೀಣಾ ಶೇಖರ್ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦)-(೧೮೨೦)[೧೯] ೨೦೦೩ರಲ್ಲಿ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ ಕಲಾವಿದ ಆರ್ ಎಂ. ಹಡಪದ ಒಂದು ಅಧ್ಯಯನ[೨೦] ೨೦೦೩ ರಲ್ಲಿ ಡಾ. ಎಸ್. ಸಿ. ಪಾಟೀಲರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಎಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಎಚ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರೆನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್[೨೧]

೨೦೦೪ ರಲ್ಲಿ ಡಾ. ವಿ.ಎಮ್. ಬಾಗವಾತ್ ಅವರ ಕನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ (೧೪೦೦-೧೮೦೦)[೨೨] ೨೦೦೪ ರಲ್ಲಿ ಡಾ. ಶಿವಕುಮಾರ ಎ.ಓ ಅವರ ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು[೨೩] ೨೦೦೫ ರಲ್ಲಿ ಡಾ. ಶಶಿಕಲಾ ಹೂಗಾರ ಅವರ ಕರ್ನಾಟಕ ತೊಗಲುಗೊಂಬೆ, ಚಿತ್ರಕಲೆ[೨೪] ೨೦೦೫ ರಲ್ಲಿ ಡಾ. ಶಿವಪ್ರಕಾಶ್ ತುಕ್ಕಣ್ಣನವರ್ ಅವರ ಕರ್ನಾಟಕ ರಥ ಶಿಲ್ಪಕಲೆ[೨೫] ೨೦೦೫ ರಲ್ಲಿ ಡಾ. ಎಚ್.ಎನ್. ಚಿತ್ರಗಾರ ಅವರ ಕರ್ನಾಟಕ ಹಸ್ತಪ್ರತಿ ಚಿತ್ರಕಲೆ[೨೬] ವಿಶ್ವೇಶ್ವರಿ ತಿವಾರಿ ಅವರ ರಂಗೋಲಿ ಕಲೆ[೨೭] ಕುರಿತು ಬಂದ ಪಿಎಚ್.ಡಿ. ಮಹಾಪ್ರಬಂಧಗಳು ೨೦೦೫ ರಲ್ಲಿ ಡಾ. ಆನಂದ ಪೂಜಾರವರ ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ[೨೮] ಡಿ.ಲಿಟ್. ಮಹಾಪ್ರಬಂಧವಾಗಿದೆ. ಡಾ.ಗೀತಾಂಜಲಿ ಅವರ ದೀಪಸ್ತಂಭಗಳು[೨೯] ೨೦೦೭, ೨೦೦೮ ರಲ್ಲಿ ಡಾ.ಎ ಎಸ್. ವಿಶ್ವನಾಥ ಅವರ ಯಕ್ಷಗಾನ ದೃಶ್ಯಕಲೆಯ ಮುಖ ವರ್ಣಿಕ ಮತ್ತು ವೇಶಭೂಷಣ .[೩೦] ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್. ಪದವಿಗಾಗಿ ಮಂಡಿಸಿದ ಚಿತ್ರಕಲಾವಿದ ಜೆ.ಎಸ್.ಖಂಡೇರಾವ್-ಒಂದು ಅಧ್ಯಯನ[೩೧] ಮತ್ತು ೨೦೦೩ ರಲ್ಲಿ ಎ.ಎಸ್.ವಿಶ್ವನಾಥ ಅವರ ಯಕ್ಷಗಾನ ದೃಶ್ಯಕಲೆಯ ಮೂಖವರ್ಣಿಕೆ ಮತ್ತು ವೇಷಭೂಷಣ[೩೨], ೨೦೦೫ ರಲ್ಲಿ ಶಂಕರಪ್ಪ ಎಂ ಕುಂದಗೋಳ ಅವರ ಕಲಾವಿದ ಡಿ.ವಿ ಹಾಲಭಾವಿ ಅವರ ಬದುಕು ಮತ್ತು ಕಲಾಕೃತಿಗಳು[೩೩] ಮತ್ತು ಸಿ.ಡಿ. ಜಟ್ಟೆಣ್ಣವರ ಅವರ ಕಲಾವಿದ ಡಾ. ಎಂ.ವಿ. ಮಿಣಜಿಗಿಯವರ ಜೀವನ ಮತ್ತು ಕಲಾಕೃತಿಗಳು[೩೪] ಶೈಲಾ ಬಡ್ರೋಲ ಅವರ ಸಂತ ಶಂಭರಾಯ ಜೀವನ ಮತ್ತು ಕಲಾಕೃತಿಗಳು[೩೫] ಶಶಿಕಾಂತ ಬಸರಿಕಟ್ಟಿ ಅವರ ಕಲಗಟಗಿ ಕಲೆ[೩೬] ಉಮೇಶ ಅವರ ಜೈನ ಚಿತ್ರಕಲೆ[೩೭]

ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಅಧ್ಯಯನವು ಬಳ್ಳಾರಿ ಜಿಲ್ಲೆಗೆ ಮಾತ್ರ ಸೀಮಿತಗೊಂಡಿದೆ. ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯನ್ನು ದೃಶ್ಯಾತ್ಮಕ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಪ್ರಾಗೈತಿಹಾಸಿಕ ಕಾಲದ ಚಿತ್ರಕಲೆಯನ್ನು ಮಾತ್ರ ಅಧ್ಯಯನದ ವ್ಯಾಪ್ತಿ ಒಳಪಡಿಸಿಕೊಂಡು ಅಧ್ಯಯನ ಮಾಡಿದೆ.

ಅಧ್ಯಯನದ ಸ್ವರೂಪ :

ಈ ಕಿರುಸಂಶೋಧನಾ ಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯ ಗಳಾಗಿ ವಿಂಗಡಿಸಿಕೊಂಡು ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ಸ್ವರೂಪದ ವಿವರವನ್ನು ಇಲ್ಲಿ ನೀಡಲಾಗಿದೆ.

ಒಂದನೆಯ ಅಧ್ಯಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ವಿಧಾನ, ಕುರಿತಾದ ವಿವರಣೆ ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳ ಕುರಿತಾಗಿದ್ದು ಜಿಲ್ಲೆಯ ಹುಟ್ಟು ಬೆಳವಣಿಗೆ ಸಾಂಸ್ಕೃತಿಕ ಪರಿಸರ ಮೌಲ್ಯತೆ ಲಲಿತಕಲೆಗಳು ಕಲಾವಿದರ ಕೊಡುಗೆಗಳು ಮುಂತಾದ ಅಂಶಗಳ ಕುರಿತು ಇಲ್ಲಿ ಅಧ್ಯಯನ ನಡೆಸಲಾಗಿದೆ.

ಮೂರನೆಯದಾಗಿ ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆಯ ನೆಲೆಗಳು ಸ್ವರೂಪ ಮತ್ತು ವರ್ಗೀಕರಣ ಇದು ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆಯಲ್ಲಿ ಪ್ರಮುಖವಾದದ್ದು, ಈ ಅಧ್ಯಾಯದಲ್ಲಿ ಹಲವು ಚಿತ್ರ ನೆಲೆಗಳನ್ನು ಗುರುತಿಸಿಕೊಂಡು ವಿಷಯವಸ್ತು, ಲಕ್ಷಣವನ್ನು ಚಿತ್ರರಚನಾ ಬಗೆಯನ್ನು ಹೇಳಲಾಗಿದೆ. ರೇಖಾ-ವರ್ಣಗಳ ವೈವಿಧ್ಯತೆ ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆಯ ಶೈಲಿ ತಂತ್ರಗಾರಿಕೆಯನ್ನು ಕುರಿತಾಗಿದ್ದು, ಚಿತ್ರ ಕೌಶಲ್ಯ ಮತ್ತು ರಚನಾ ತಂತ್ರದ ಬಗ್ಗೆ ಹೇಳಲಾಗಿದೆ.

ಐದನೆಯ ಈ ಅಧ್ಯಾಯವು ಸಮಾರೋಪವಾಗಿದ್ದು, ಈ ಅಧ್ಯಾಯದಲ್ಲಿ ಹಿಂದಿನ ಐದು ಅಧ್ಯಾಯಗಳ ಸಮೀಕ್ಷೆಯಿದ್ದು ಒಟ್ಟು ಅಧ್ಯಾಯನದ ಫಲಿತಗಳನ್ನು ಇಲ್ಲಿ ಸಮೀಕ್ಷಿಸಲಾಗಿದೆ.

ಅಧ್ಯಯನದ ವೈಧಾನಿಕತೆ :

ಈ ಅಧ್ಯಾಯನಕ್ಕೆ ಎರಡು ರೀತಿಯ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳು ಈ ಕೆಳಗಿನಂತಿವೆ.

೧. ಮೂಲ ಆಕರ ಸಾಮಗ್ರಿಗಳು

೨. ಆನುಷಂಗಿಕ ಆಕರ ಸಾಮಗ್ರಿಗಳು

೧. ಮೂಲ ಆಕರ ಸಾಮಗ್ರಿಗಳು :

ಮೂಲ ಆಕರ ಸಾಮಗ್ರಿಗಳಲ್ಲಿ ಕ್ಷೇತ್ರಕಾರ್ಯ ಅತಿ ಮುಖ್ಯವಾದ ಅಂಶವಾಗಿದ್ದು, ಅಧ್ಯಯನ ಕ್ರಮಕ್ಕೆ ಅಗತ್ಯವಾಗಿ ಬೇಕಾಗುವಂತದ್ದು ಒಂದು ನಾಡಿನ ಅಧ್ಯಯನ ಕ್ರಮಕ್ಕೆ ಅಗತ್ಯವಾಗಿ ಬೇಕಾಗುವಂತದ್ದು, ಒಂದು ನಾಡಿನ ಸಂಸ್ಕೃತಿ, ಇತಿಹಾಸ, ಕಲೆ, ವಿಷಯಗಳ ಬಗ್ಗೆ ಸಂಶೋಧನೆ ಮಾಡುವಾಗ ಕ್ಷೇತ್ರಕಾರ್ಯ ಮುಖ್ಯವಾಗುತ್ತದೆ. ಇದು ಮೂಲ ಆಕರ ಸಾಮಗ್ರಿಯಾಗಿ ಮೂಲ ಪ್ರಾಗೈತಿಹಾಸ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ಅವಲೋಕನ ಅತಿ ಮುಖ್ಯವಾದ ಅಂಶವಾಗಿದ್ದು ಮೂಲ ಚಿತ್ರಗಳು ಇರುವ ಕಡೆಗೆ ಅನೇಕ ಬಾರಿ ಭೇಟಿ ಕೊಟ್ಟು ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ ಛಾಯಚಿತ್ರಣ ಮಾಡಿಕೊಂಡು ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅದೇ ಸ್ಥಳದಲ್ಲಿ ಬರೆದುಕೊಳ್ಳಲಾಯಿತು. ಅಲ್ಲದೆ ಚಿತ್ರಗಳಿದ್ದ ಸುತ್ತಮುತ್ತ ಸ್ಥಳೀಯ ಹಿರಿಯರನ್ನು ಕೇಳಿ ಮಾಹಿತಿ ಪಡೆದುಕೊಳ್ಳಲಾಗಿದೆ. ಇದು ಅಲ್ಲದೆ ಗುಡ್ಡಗಾಡುಗಳಲ್ಲಿ ಅಲೆದಾಡುವ ದನ-ಕುರಿ ಕಾಯುವ ಮಕ್ಕಳಿಂದನೂ ಮಾಹಿತಿ ಪಡೆದುಕೊಳ್ಳಲಾಗುವುದು ಅವರ ಚಿಂತನಾಶೀಲತೆ ಅನುಮಾನ ಕೌತುಕವಾದದ್ದು, ಮೂಲ ಚಿತ್ರಗಳು ಲಭ್ಯವಿಲ್ಲದ ಸಮಯದಲ್ಲಿ ಅವುಗಳನ್ನು ಪ್ರತಿಮಾಡಿಕೊಂಡು ಅಥವಾ ಛಾಯಚಿತ್ರ ಮಾಡಿ ಕಾಪಾಡಲಾಗಿದೆ. ಈ ಕ್ಷೇತ್ರಕಾರ್ಯದಲ್ಲಿ

ಹಲವಾರು ವಿದ್ವಾಂಸರ ಜೊತೆಗೆ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದ. ಹೀಗೆ ಕ್ಷೇತ್ರಕಾರ್ಯದಿಂದ ದೊರೆತ ವಿವರಗಳನ್ನು ಅಭ್ಯಾಸಕ್ಕೆ ಬರವಣಿಗೆಗೆ ಅನುಕೂಲವಾಗುವಂತೆ ಪಟ್ಟಿಕೆಗಳಲ್ಲಿ ಸಂಗ್ರಹ ಮಾಡಿಕೊಂಡು ಪ್ರಸ್ತುತ ಪ್ರಬಂಧವನ್ನು ರಚಿಸಬೇಕಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ :

ಪ್ರಬಂಧ ರಚಿಸುವಲ್ಲಿ ಎರಡನೇ ವಿಧಾನ ಆನುಷಂಗಿಕ ಆಕರಸಾಮಗ್ರಿಯಾಗಿದ್ದು, ಇದರಲ್ಲಿ ಪ್ರಕಟಿತ, ಅಪ್ರಕಟಿತ, ಸಾಹಿತ್ಯಕೃತಿಗಳು, ಸಂಪುಟಗಳು, ಅಭಿನಂದನಾಗ್ರಂಥಗಳು, ನಿಘಂಟುಗಳು, ಲೇಖನಗಳು, ಮಾಸಪತ್ರಿಕೆಗಳು, ದಿನಪತ್ರಿಕೆಗಳು ಮುಂತಾದವುಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಟಿಪ್ಪಣಿಗಳು :

೧. ಡಾ. ವಿ.ಕೆ.ಗೋಕಾಕ್: ಕಲೆಯ ನೆಲೆ ಪು. ೧

೨. – ಅದೇ –

೩. – ಅದೇ –

೪. ಡಾ. ಅ.ಸುಂದರ : ಕರ್ನಾಟಕದ ಪ್ರಗಿತಿಹಾಸ ಕಾಲದ ಕಲೆ, ಪು.೧

೫. – ಅದೇ –

೬. ಡಾ. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯ, ೧೯೯೮

೭. ಡಾ. ಬಿ.ಕೆ. ಹಿರೇಮಠ : ಕನ್ನಡ ಜನಪದ ಹಸ್ತಪ್ರತಿಗಳು, ಪಿಎಚ್.ಡಿ. ಮಹಾಪ್ರಬಂಧ

೮. ಡಾ. ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಎಚ್.ಡಿ.ಮಹಾಪ್ರಬಂಧ, ೧೯೯೧

೯. . ಡಾ. ಅ.ಲ. ನರಸಿಂಹನ್: 'ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು
ಪಿಎಚ್.ಡಿ.ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ–೧೯೯೮

೧೦. ಡಾ. ಸಂಪದಾಭಟ್ : ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು,
ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ–೧೯೯೮

೧೧. ಡಾ. ಪುಷ್ಪಾ ದ್ರಾವಿಡ 'ಅನಿವಾಸಿ ಭಾರತೀಯಕಲಾವಿದ ದಿ. ನಿಕೋಲಸ್ ರೋರೊಕ ಜೀವನ ಮತ್ತು
ಕಲಾಕೃತಿಗಳು, ಪಿಎಚ್.ಡಿ.ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ–೧೯೯೭

೧೨ ಡಾ. ಯಾದವಪ್ಪ ಪರದೇಶಿ : ಉತ್ತರಕನಾಟಕದ ಭಿತ್ತಿಚಿತ್ರಕಲೆ, ಒಂದು ಅಧ್ಯಯನ, ಪಿಎಚ್.ಡಿ. ಮಹಾ
ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ–೧೯೯೮

೧೩. ಡಾ. ಶಿವಾನಂದ ಬಂಟನೂರು ಕರ್ನಾಟಕದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ, ಪಿಎಚ್.ಡಿ. ಮಹಾ
ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ–೧೯೯೮

೧೪. ಡಾ. ಗರೀಶ್ : ಬುಡಕಟ್ಟು ಚಿತ್ರಕಲೆ ಪಿ.ಎಚ್‌ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ– ೨೦೦೨

೧೫. ಡಾ. ಲಕ್ಷ್ಮಿದೇವಿ ಗವಾಯಿ : ಕಲಾವಿದೆ ಎಂ.ಎ ಚೆಟ್ಟಿಯವರ ಜೀವನ, ಕಲಾಕೃತಿಗಳು–ಒಂದು ಅಧ್ಯಯನ
ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ–೨೦೦೨

೧೬. ಡಾ. ಶರಣಪ್ಪ ಕೋಲ್ಕಾರ : ಕೊಪ್ಪಳ–ಹಂಪಿ ಪ್ರದೇಶದ ಪ್ರಗಿತಿಹಾಸಿಕ ಕಾಲದ ಕಲೆ, ಪಿಎಚ್.ಡಿ.ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ–೧೯೯೮

೧೭. ಡಾ. ಸೌಮ್ಯ ಯಂತ್ರಾ ದಿ ವಿಜ್ಯುವಲ್ ಆಫ್ ಶಕರಾಫಿಲಾಸಫಿ ವಿತ್ ರೆಫೆರೆನ್ಸ್ ಟು
ಕಾಟೆಂಪರರಿ. ತಾಂತ್ರಿಕ ಆರ್ಟಿಸ್ಟ್, ಪಿಎಚ್.ಡಿ.ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ–೨೦೦೨

೧೮. ಡಾ. ಪ್ರಮೀಳಾ ಲೋಚನ : ಮ್ಯೆಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸ್‌ಪೋಜಿಸ್
ಅಂಡ್, ಡೆವಲೊಪಮೆಂಟ್ ಆಫ್ ರಾಗಾಮಾಲಾ ಅಂಡ್ ಕಾಟೆಂಪರರಿ ಪೇಂಟಿಂಗ್, ಪಿಎಚ್.ಡಿ. ಮಹಾ ಪ್ರಬಂಧ,
ಬೆಂಗಳೂರು ವಿಶ್ವವಿದ್ಯಾಲಯ–೧೯೯೮

೧೯ ಡಾ. ವೀಣಾ ಶೇಖರ್ : ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ, (೧೭೮೦)–೧೮೭೦)
ಪಿಎಚ್.ಡಿ.ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ–೨೦೦೩

೨೦ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್ ಎಂ ಹಡಪದ ಒಂದು ಅಧ್ಯಯನ,
ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ–೨೦೦೩

೨೧. ಡಾ. ಎಸ್.ಸಿ.ಪಾಟೀಲ : ಎಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರೆನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್ ೨೦೦೪

೨೨. ಡಾ. ವಿ. ಎಮ್. ಬಾಗವತ್, ಕನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ (೧೪೦೦-೧೮೦೦) ಪಿಎಚ್.ಡಿ ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ೨೦೦೪.

೨೩. ಡಾ. ಶಿವಕುಮಾರ ಎ.ಓ : ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು ಪಿ.ಎಚ್.ಡಿ. ಮಹಾಪ್ರಬಂಧ ಗುನಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ೨೦೦೫

೨೪. ಡಾ. ಶಶಿಕಲಾ ಹೂಗಾರ ಅವರ ಕರ್ನಾಟಕ ತೊಗಲುಗೊಂಬೆ, ಚಿತ್ರಕಲೆ ಪಿಎಚ್.ಡಿ. ಮಧ್ಯಪ್ರದೇಶ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೫

೨೫. ಡಾ. ಶಿವಪ್ರಕಾಶ್ ತುಕ್ಕಣ್ಣನವರ : ಅವರ ಕರ್ನಾಟಕ ರಥ ಶಿಲ್ಪಕಲೆ ಪಿಎಚ್.ಡಿ. ಮದ್ಯಪ್ರದೇಶ ವಿಶ್ವವಿದ್ಯಾಲಯ, -೨೦೦೫

೨೬. ಡಾ. ಎಚ್.ಎನ್. ಚಿತ್ರಗಾರ ಅವರ ಕರ್ನಾಟಕ ಹಸ್ತಪ್ರತಿ ಚಿತ್ರಕಲೆ ಪಿಎಚ್.ಡಿ. ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೫

೨೭. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆ, ಪಿಎಚ್.ಡಿ. ಮ.ಪ್ರ ಗುಲ್ಬರ್ಗಾ ವಿಶ್ವವಿದ್ಯಾಲಯ, -೨೦೦೫

೨೮. ಡಾ. ಆನಂದ ಕೆ. ಪೂಜಾರ್ ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿಲಿಟ್ ಮ.ಪ್ರ, ಕನ್ನಡ ವಿಶ್ವವಿದ್ಯಾಲಯ-೨೦೦೫

೨೯. ಡಾ. ಗಿತಾಂಜಲಿ ದೀಪಸ್ಥಂಭಗಳು, ಪಿ.ಎಚ್ಡಿ. ಮಹಾಪ್ರಬಂಧ ಕನ್ನಡವಿಶ್ವವಿದ್ಯಾಲಯ, ೨೦೦೭

೩೦. ಡಾ. ಎ.ಎಸ್. ವಿಶ್ವನಾಥ ಯಕ್ಷಗಾನ, ದೃಶ್ಯಕಲೆಯ ಮುಖ ವರ್ಣಿಕೆ ಮತ್ತು ವೇಶ ಭೂಷಣಗಳು ನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೮

೩೧. ಡಾ. ಮಲ್ಲಿಕಾರ್ಜುನ ಬಾಗೋಡಿ, ಚಿತ್ರಕಲಾವಿದರು, ಜಿ.ಎಸ್. ಖಂಡೇರಾವ್-ಒಂದು ಅಧ್ಯಯನ ಎಂ.ಫಿಲ್. ಪ್ರಬಂಧ ಕನ್ನಡ ವಿ.ವಿ.ಹಂಪಿ.೨೦೦೨

೩೨. ಡಾ. ಎ.ಎಸ್.ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖ ವರ್ಣಿಕೆ ಮತ್ತು ವೇಷಭೂಷಣ, ಎಂ.ಫಿ.ಲ್. ಪ್ರಬಂಧ ಕನ್ನಡ ವಿ.ವಿ.ಹಂಪಿ- ೨೦೦೩

೩೩. ಶಂಕರಪ್ಪ ಕುಂದಗೋಳ : ಕಲಾವಿದ ಡ.ವಿ. ಹಾಲಬಾವಿಯವರ ಜೀವನ ಮತ್ತು ಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿವ.ವಿ.-೨೦೦೫

೩೪. ಸಿ.ಡಿ. ಜಟ್ಟಣ್ಣವರ : ಕಲಾವಿದ ಡಾ. ಎಂ.ವಿ. ಮಿಣಜಗಿಯವರ ಜೀವನ ಮತ್ತು ಕಲಾಕೃತಿಗಳು ಎಂ.ಫಿಲ್. ಪ್ರಬಂಧ ಕನ್ನಡ ವಿ.ವಿ.ಹಂಪಿ-೨೦೦೫

೩೫. ಶೈಲಾ ಬಡೋರ್ಲ : ಸಂತ ಶಂಭರಾಯ ಜೀವನ ಮತ್ತು ಕಲಾಕೃತಿಗಳು ಎಂ.ಫಿಲ್. ಪ್ರಬಂಧ. ಕನ್ನಡ ವಿ.ವಿ. ಹಂಪಿ

೩೬. ಶಶಿಕಾಂತ ಬಸರಿಕಟ್ಟಿ : ಕಲಗಟಗಿ ಕಲೆ ಎಂ.ಫಿಲ್. ಪ್ರಬಂಧ. ಕನ್ನಡ ವಿ.ವಿ. ಹಂಪಿ

೩೭. ಉಮೇಶ : ಜೈನ ಚಿತ್ರಕಲೆ ಎಂ.ಫಿಲ್. ಪ್ರಬಂಧ. ಕನ್ನಡ ವಿ.ವಿ. ಹಂಪಿ

ಅಧ್ಯಾಯ : ಎರಡು

ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು

ಜೀವಿಯು ಈ ವಿಶ್ವದಲ್ಲಿ ಸೃಷ್ಟಿಯಾಗಿ ಅದು ಸಂಪೂರ್ಣವಾಗಿ ಬೆಳವಣಿಗೆ ಹೊಂದಿ ಒಂದು ಹಂತ ತಲುಪಿದಾಗ ಮಾನವನ ನಾಗರಿಕತೆ ಪ್ರಾರಂಭವಾಯಿತು. ನಾಗರೀಕತೆ ಕ್ರಮೇಣವಾಗಿ ಪ್ರಗತಿಯನ್ನು ಒಂದು ಹಳ್ಳಿಯು ಸೃಷ್ಟಿಯಾಗಬೇಕಾದರೆ ಸಾವಿರಾರು ವರ್ಷಗಳೆ ಬೇಕಾದವು. ಮನುಷ್ಯನ ಚಿಂತನೆ ಪ್ರಗತಿ ಹೊಂದಿದಂತೆಲ್ಲಾ ಮನುಷ್ಯನ ಬುದ್ಧಿ ಪ್ರಜ್ವಲವಾಗಿ ಆ ಮುಖಾಂತರ ಹೊಸ ಹೊಸ ಆವಿಷ್ಕಾರಗಳನ್ನು ಮಾಡತೊಡಗಿದ. ನಂತರದ ದಿನಗಳಲ್ಲಿ ಅವಿಷ್ಕಾರಗಳು ಹೆಚ್ಚಾದಂತೆ ಮಾನವತೆಗೆ ಅನುಕೂಲತೆಗಳು ಅತಿಯಾದ ಪ್ರಗತಿಗೆ ದಾರಿಯಾಗಿ ಜಾಗತೀಕರಣ ಹಾಗೂ ಉದಾರೀಕರಣ, ವೈಜ್ಞಾನಿಕ ಬೆಳವಣಿಗೆಗ ಖಾಸಗೀಕರಣ ಉಂಟಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ಆಸಕ್ತಿ ಉಲ್ಬಣಗೊಂಡು ಮಾನವ ತನ್ನದೇ ಆದ ಧೀಮಂತ ವಿಶ್ವ ಕಲ್ಪನೆಗೆ ತಕ್ಕಂತಹ ಜೀವನದ ಹಲವು ಮಗ್ಗಲುಗಳಲ್ಲಿ ನವೀನ ಶೋಧನಾ ಹಾದಿಯನ್ನು ತನ್ನಲ್ಲೇ ತಾನು ಕಂಡುಕೊಂಡು ಪ್ರಗತಿಯ ಪಥವನ್ನು ಉತ್ತುಂಗಕ್ಕೇರಿಸಿದ್ದಾನೆ. ಸಂಶೋಧನೆಯ ಪರಿಸರವನ್ನು ಅವಲಂಭಿಸಿರುತ್ತದೆ. ದೇಶ–ವಿದೇಶ ನಗರ ಪ್ರದೇಶ ಹೀಗೆ ಹಲವು ಹಂತಗಳಿಂದ ಪ್ರಗತಿಯ ಹಾದಿಯನ್ನು ಹಿಡಿದಿದ್ದಾಗ ಈ ಪ್ರಗತಿಯ ಹಂತದಲ್ಲಿರುವ ಬಳ್ಳಾರಿ ಜಿಲ್ಲೆಯು ಒಂದು. ಈ ಜಿಲ್ಲೆಯ ಇತಿಹಾಸ ಕುತೂಹಲಭರಿತವಾದದ್ದು, ಪರಂಪರೆ ಮತ್ತು ಸ್ಥಿತ್ಯಂತರಗಳ ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಸಮೀಕ್ಷಿಸುವುದು ತುಂಬಾ ಸಂಕೀರ್ಣವಾದದ್ದು? ಏಕೆಂದರೆ ಪ್ರಾಕೃತಿಕವಾಗಿ ಕಲಾತ್ಮಕವಾಗಿ, ಚಾರಿತ್ರಿಕವಾಗಿ, ಸಾಹಿತ್ಯಕವಾಗಿ, ಬಹುಭಾಷಿಕವಾಗಿ, ಶೈಕ್ಷಣಿಕವಾಗಿ ಮತ್ತು ಅಭಿವೃದ್ಧಿಯ ಆಧುನಿಕ ನೆಲೆ ಈ ಎಲ್ಲಾ ಬಳ್ಳಾರಿ ಜಿಲ್ಲೆಯ ಪಾರಂಪರಿಕ ಸ್ಥಿತ್ಯಂತರದ ಸ್ವರೂಪವಾಗಿದೆ.

ಕರ್ನಾಟಕ



ಪದನಿಷ್ಪತ್ತಿ :

'ಬಳ್ಳಾರಿ' ಎಂಬ ಹೆಸರು ತುಂಬಾ ಕುತೂಹಲಕರ ಹಾಗೂ ವಿಶಿಷ್ಟವಾದುದಾಗಿದೆ. ಇದು ಕರ್ನಾಟಕ ರಾಜ್ಯದ ಜಿಲ್ಲಾಕೇಂದ್ರವಾಗಿ ಉತ್ತರ ಕರ್ನಾಟಕ ರಾಜ್ಯಗಳಲ್ಲಿ ವಿಲೀನವಾಗಿದೆ. ಈ ಭಾಗವನ್ನು "ಗಂಡು ಮೆಟ್ಟಿದ ನಾಡು"[೨] ಎಂದು ಕರೆಯುತ್ತಾರೆ. ಅದಕ್ಕಾಗಿಯೇ ವಿದ್ಯಾರಣ್ಯರು ಇಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿದರು. ಎಂಬ ಪ್ರತೀತಿ ಇದೆ. ಇದಕ್ಕೆ ಮೊಲವೇ ನಾಯಿಯನ್ನು ಎದುರಿಸಿ ತಿರುಗಿ ನಿಂತು ಓಡಿಸಿಕೊಂಡು ಹೋಗುವುದನ್ನು ಕಂಡೇ ಇದು ಪುಣ್ಯ ಭೂಮಿ ಗಂಡುಮೆಟ್ಟಿದ ನಾಡು ಎಂಬುದಾಗಿ ಕರೆಯಲ್ಪಟ್ಟಿದೆ[೩] ಈ ಜಿಲ್ಲೆಯ ಇಂತಹ ಐತಿಹ್ಯವನ್ನು ಹೊಂದಿದ್ದನ್ನು ನೋಡಿದರೆ ಇಲ್ಲಿಯ ಜನಗಳಿಗೆ ಧನ್ಯತೆಯ ಭಾವನೆ ಅಭಿವ್ಯಕ್ತವಾಗುತ್ತದೆ. ಬಳ್ಳಾರಿ ಎಂಬ ಪದ ನಿಷ್ಪತ್ತಿ ಬೆಳವಣಿಗೆಯನ್ನು ಗಮನಿಸಿದರೆ ಹಲವು ಶಾಸನಗಳು ಹಲವು ಕೋಶಗಳಲ್ಲಿ ಉಲ್ಲೇಖಗೊಂಡಿರುವುದು ತಿಳಿದು ಬರುತ್ತದೆ.

ಬಳ್ಳಾರಿ ಎಂಬ ಪದವು "ಚಾಲುಕ್ಯ ದೊರೆಯ ಸಾಮಂತ ಪಲ್ಲವ ಅರಸನು ಕಪ್ಪಗಲ್ಲು ಗ್ರಾಮದಲ್ಲಿ ಬಳಾರಿ, ಪದ ಬಳಕೆಯಾದ ಶಾಸನ[೪] ದೊರಕಿದೆ. ಈ ಬಳ್ಳಾರಿ ಬಗೆಗಿನ ಪದ ಬಳಕೆಯಾದ ಪ್ರಥಮ ಶಾಸನವಾಗಿದೆ. ಎಂದು ಹೇಳಲಾಗಿದೆ. ಪ್ರಥಮವಾಗಿ ಬಳಾರಿ> ಬಳಾರಿ>ಬಳ್ಳಾರಿಯಾಗಿರಬೇಕು ಎಂಬ ಅಭಿಪ್ರಾಯಗಳಿವೆ. ಸ್ಕಂದಪುರಾಣದಲ್ಲಿ ಬಳ್ಳಾರಿ ಪ್ರದೇಶವನ್ನು 'ಲೋಹಾಚಲ' ಎಂದು ಇತರ ಪ್ರಾಚೀನ ಕಾವ್ಯಗಳಲ್ಲಿ 'ಜಂಭೂದ್ವೀಪ' ಎಂದು ಕರೆಯುತ್ತಿದ್ದರು [೫] ಬಳ್ಳಾರಿ ಪದವು ಉಗ್ರ ಸ್ತ್ರೀ ಸೂಚಕ ಎಂದು ಹೇಳಲಾಗಿದೆ. ಮತ್ತು ಈ ಜಿಲ್ಲೆಯು ಭೌಗೋಳಿಕವಾಗಿ ಶ್ರೀಮಂತವಾದದ್ದಾಗಿದೆ.

ಭೌಗೋಳಿಕತೆ :

ಬಳ್ಳಾರಿ ಜಿಲ್ಲೆಯ ಪ್ರಾಕೃತಿಕ ಹಿನ್ನೆಲೆಯಲ್ಲಿ ಬೆಟ್ಟಗಳ ಶ್ರೇಣಿಗೆ ಸಿಂಹಪಾಲು ಸಂದಿದೆ. ಉಳಿದ ಭಾಗ ತುಂಗಭದ್ರಾ ನದಿಗೆ ಸಂಬಂಧಿಸಿದೆ. ಹೊಸಪೇಟೆ, ಸಂಡೂರು, ತಾರಾನಗರ, ದೇವಗಿರಿ, ಪ್ರದೇಶಗಳ ಬೆಟ್ಟಗುಡ್ಡಗಳಲ್ಲಿ ಖನಿಜ ನಿಕ್ಷೇಪಗಳಿದ್ದು, ಇವು ಅಂತರಾಷ್ಟ್ರೀಯ ಮಟ್ಟದ ಗುಣಾತ್ಮಕ ಮಾನ್ಯತೆಯನ್ನು ಹೊಂದಿದೆ[೬] ಬಳ್ಳಾರಿ ಜಿಲ್ಲೆಯು ಭೌಗೋಳಿಕವಾಗಿ ಕರ್ನಾಟಕ ರಾಜ್ಯದ ಪೂರ್ವ ಭಾಗವಾಗಿದ್ದು ಜಿಲ್ಲೆಯ ಪೂರ್ವ ಪಶ್ಚಿಮವಾಗಿ ೧೬೧ ಕಿ.ಮೀ. ಉದ್ದವನ್ನು ದಕ್ಷಿಣೋತ್ತರವಾಗಿ ೮೨.೩ ಮೀ ಅಗಲವನ್ನು, ನೈಋತ್ಯವಾಗಿ ೧೮೦ ಕಿ.ಮೀ. ಹೊಂದಿದೆ. ಇದು ಉತ್ತರ ಅಕ್ಷಾಂಶ೧೪.೩೦,೫೦,೫೦ ಮತ್ತು ಪೂರ್ವರೇಖಾಂಶ .೭೫,೪೦೭೭: ೧೧ ರ ನಡುವೆ ಇದೆ. ಉತ್ತರಕ್ಕೆ ಕೊಪ್ಪಳ, ದಕ್ಷಿಣಕ್ಕೆ ಚಿತ್ರದುರ್ಗ, ದಾವಣಗೇರೆ ಪೂರ್ವಕ್ಕೆ ಅನಂತಪುರ, ಕರ್ನೂಲು ಪಶ್ಚಿಮಕ್ಕೆ ಗದಗ, ಹಾವೇರಿ ಜಿಲ್ಲೆಗಳ ಮೇರೆಗಳನ್ನು ಈ ಜಿಲ್ಲೆ[೭] ಹೊಂದಿದ್ದು ಕಂಡು ಬರುವ ವಿಸ್ತೀರ್ಣತೆಯು ವಿಶೇಷವಾಗಿದೆ.


ಚರಿತ್ರೆ ಹಿನ್ನೆಲೆ :

ಬಳ್ಳಾರಿ ಚರಿತ್ರೆ ಎಂದಾಕ್ಷಣ ವಿಜಯನಗರ ಸಾಮ್ರಾಜ್ಯದ ನೆನಪು ನಮಗೆ ಆಗುತ್ತದೆ. ಕರ್ನಾಟಕದಷ್ಟಕ್ಕೆ ಸೀಮಿತವಾಗಿರದೇ ನೆರೆಹೊರೆ ರಾಜ್ಯಗಳಿಗೂ ವಿಸ್ತಾರವಾಗಿದ್ದು ಚರಿತ್ರೆಯಿಂದ ತಿಳಿಯುತ್ತದೆ. ಕೃಷ್ಣೆಯ ದಕ್ಷಿಣ ಪ್ರದೇಶಗಳಾದ ಆಂದ್ರ, ತಮಿಳುನಾಡಿನ ಜನರು ಈ ಹೆಸರಿನಿಂದ ಪುಳಕಗೊಳ್ಳುತ್ತಾರೆ[೮]











ಕೃಷ್ಣದೇವರಾಯನೇ ಸ್ವತಃ 'ಆಮುಕ್ತಮಾಲ್ಯದ' ಎಂಬ ಕೃತಿಯನ್ನು ತೆಲುಗುವಿನಲ್ಲಿ ರಚಿಸಿರುವುದು ಗಮನಾರ್ಹವಾಗಿದೆ. ಈ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶ ಅದರಲ್ಲೂ ಮುಖ್ಯವಾಗಿ ಹಂಪೆಯು ರಾಮಾಯಣದ ಕಥೆಯೊಂದಿಗೆ ತಾದಾತ್ಮ್ಯ ಸಂಬಂಧವನ್ನು ಹೊಂದಿರಬೇಕು. ಇಲ್ಲಿನ ವಾಲಿದಿಬ್ಬ, ಸೀತೆ ಸೆರಗು ಮುಂತಾದ ಸ್ಥಳಗಳಲ್ಲಿ ರಾಮಾಯಣ ಕಾಲದಿಂದ ಇಲ್ಲಿ ಜನವಸತಿ ಇತ್ತೆಂಬುದು ಇತಿಹಾಸಕಾರರ ಅಭಿಪ್ರಾಯವಾಗಿದೆ.

ಈ ಜಿಲ್ಲೆಯು ಪ್ರಾಗೈತಿಹಾಸ ಕಾಲದಿಂದಲೂ ಮಾನವನ ವಾಸಸ್ಥಳವಾಗಿದ್ದಾಗಿದೆ. ಎಂಬುದಕ್ಕೆ ಆದಿಶಿಲಾಯುಗ ನೂತನ ಶಿಲಾಯುಗದ ಅವಶೇಷಗಳು ದೊರೆಯುತ್ತವೆ. ಈ ಬಳ್ಳಾರಿ ಜಿಲ್ಲೆಯನ್ನು ಪ್ರಾಗೈತಿಹಾಸಿಕ ಕಾಲದಿಂದಲೂ ಗುರುತಿಸಲಾಗುತ್ತಿದೆಯಾದರೂ ಅದರ ಸಾಂಸ್ಕೃತಿಕ ಪಲ್ಲಟ ಗಮನಾರ್ಹ ಚಹರೆ ಹಾಗೂ ಸ್ಥಿತ್ಯಂತರಗಳನ್ನು ಅನುಲಕ್ಷಿಸಿ ವಿಜಯನಗರದ ಚರಿತ್ರೆ ಮತ್ತು ವಿಜಯನಗರದ ಪೂರ್ವದ ಚರಿತ್ರೆಯಿಂದ ಈ ಪರಂಪರೆಯನ್ನು ಕಲ್ಪಿಸಬಹುದಾಗಿದೆ. 'ಕಂಪ್ಲಿ'ಯ ಸಂಸ್ಥಾನದ ಚರಿತ್ರೆಯು ಬಳ್ಳಾರಿ ಚಹರೆಯನ್ನು ಪಾಳೆಯಗಾರಿಕೆ ನೆಲೆಯಿಂದ ಆರಂಭಿಸುತ್ತದೆ.[೧೦] ಎಂದು ಇತಿಹಾಸತಜ್ಞರ ಅಭಿಪ್ರಾಯವಾಗಿದೆ.

ಈ ಜಿಲ್ಲೆಯನ್ನು ಮೌರ್ಯ, ಶಾತವಾಹನ, ಕಲಚೂಯರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಕಲಚೂರ್ಯರು, ನೊಳಂಬರು, ಹೊಯ್ಸಳರು, ಸೇವಣರು ಮತ್ತು ವಿಜಯನಗರದ ಅರಸರ ಆಳ್ವಿಕೆಯನ್ನು ಕಂಡಿದೆ. ಮಹಾಬಲಿವಂಶ, ಗುಪ್ತವಂಶ, ಮೈದುಂಬವಂಶ, ಸಿಂದವಂಶ, ಪಾಂಡ್ಯ ವಂಶಸ್ಥರಲ್ಲದೇ ಸ್ಥಳೀಯ ಬಾಗಳಿನಾಯಕರು, ಹಂಡೆಪಾಳೆಗಾರರು, ಗುಡೆಕೋಟೆ-ಜರ್ಮಲಿನಾಯಕರು ಜಿಲ್ಲೆಯ ರಾಜಕೀಯ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಎಂದು ಈ ಮಹನೀಯರೆಲ್ಲ ದಾನ, ದತ್ತಿ ನಿರ್ಮಿಸಿದ ದೇವಾಲಯ ಕಟ್ಟಿಸಿದ ಕೆರೆ-ಬಾವಿ[೧೧] ನಿರ್ಮಿಸಿದ ಶಿಲ್ಪ-ಚಿತ್ರ ಸಾಕ್ಷಿಯಾಗಿ ನಿಂತಿವೆ. ಬಳ್ಳಾರಿ ಜಿಲ್ಲೆಯ ಸ್ಥಳೀಯ ಪುರಾಣಗಳಲ್ಲಿ ಹಂಪಿ ಪ್ರದೇಶಕ್ಕೆ ಕಿಷ್ಕಿಂದೆ ಎಂಬ ಹೆಸರು ಒಂದು ಸಾವಿರ ವರ್ಷಕ್ಕಿಂತ ಮೊದಲು ಇತ್ತೆಂಬುದಕ್ಕೆ ಹಂಪಿಯ ಸಮೀಪದ ೧೧೬೪ ಶಾಸನದಿಂದ ಶಿರಸಂಗಿಯ ೧೨೩೪ ರ ಶಾಸನದಿಂದ ತಿಳಿಯುತ್ತದೆ. ಹಂಪಿ, ಆನೆಗುಂದಿ, ಹಿರೇಬೆನಕಲ್ ಇನ್ನೂ ಮುಂತಾದ ಪ್ರದೇಶಗಳಲ್ಲಿ ಪ್ರಾಗೈತಿಹಾಸಿಕ ಯುಗ ಕಬ್ಬಿಣಯುಗ, ಬೃಹತ್ ಶಿಲಾಯುಗ ಸಂಸ್ಕೃತಿಯ ಕಾಲದ ಬಯಲು ಬಂಡೆ ಹಾಗೂ ಗವಿವರ್ಣಚಿತ್ರಗಳು ಹೇರಳವಾಗಿವೆ.[೧೨] ಎಂದು ತಿಳಿದು ಬರುತ್ತದೆ.

ಕಲಾ ಸಂಸ್ಕೃತಿ :

ಪರಂಪರೆಯ ದೃಷ್ಟಿಯಿಂದ ಎಷ್ಟೊಂದು ವೈವಿಧ್ಯತೆಯನ್ನು ಹೊಂದಿದೆಯೋ ಅಷ್ಟೇ ಆಧುನಿಕವಾದ ಸ್ಥಿತ್ಯಂತರಗಳಿಗೂ ಒಳಗಾಗುತ್ತಾ ಬಂದಿದೆ.[೧೩]. ಸಾಹಿತ್ಯ ವಡ್ಡಾರಾಧನೆಯಿಂದ ಆರಂಭವಾಗುತ್ತದೆ.[೧೪] ಈ ಜಿಲ್ಲೆಯ ಹರಿಹರ ರಾಘವಾಂಕರ ಅನನ್ಯತೆಗಳನ್ನು ಬೆನ್ನಿಗೆ ಕಟ್ಟಿಕೊಂಡು ಚಾಮರ ಸಾದಿ ನೂರೊಂದು ವಿರಕ್ತರ ಕಾರ್ಯ ಚಟುವಟಿಕೆಯಲ್ಲಿ ವಿಸ್ತಾರವಾಗಿ ಬೆಳೆಯಿತು.[೧೫] ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ವಿಷಯದಲ್ಲಿ ವಿಜಯನಗರದ ಪ್ರೌಢದೇವರಾಯನ ಕಾಲದ ಚಟುವಟಿಕೆಗಳು ಸಾಹಿತ್ಯ ಪರಂಪರೆಯನ್ನು ಕಟ್ಟಿ ಬೆಳೆಸಿದವು.[೧೬] ಇಲ್ಲಿ ದಾಸಸಾಹಿತ್ಯವನ್ನು ಜಗತ್‌ಪ್ರಸಿದ್ಧ ವಿಜಯವಿಠ್ಠಲನ ದೇವಾಲಯದ ಸಮೀಪವೆ ಇರುವ ನದಿ ತೀರದ ಪುರಂದರ ಮಂಟಪವು ಇಂದಿಗೂ ಈ ಅವಶೇಷವನ್ನು ಸಾರಿ ಹೇಳುತ್ತದೆ.[೧೭]

ಬಸವಣ್ಣ ಕಟ್ಟಿದ ಅವರಕಲ್ಯಾಣ ಪರಂಪರೆಯ ಮೂಲ ಸೆಲೆ ಇದುವೇ ಆಗಿದೆ.[೧೮] ಕನ್ನಡ ಮಹಿಳೆ ಸಾಹಿತ್ಯದಲ್ಲಿ ಹರಪನಹಳ್ಳಿ ಬೀಮವ್ವ, ಜೋಳದರಾಶಿ ದೊಡ್ಡನಗೌಡ, ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿ ಹಾಸ್ಯ ಸಾಹಿತಿ ಬಳ್ಳಾರಿಯ ಬೀಚಿ, ಜಾನಪದ ತಜ್ಞ ಮುದೇನೂರು ಸಂಗಣ್ಣ, ನ್ಯಾಯವಾದಿ ಕೋ. ಚನ್ನಬಸಪ್ಪ, ಬಂಡಾಯ ಸಾಹಿತಿ ಕುಂ. ವೀರಭದ್ರಪ್ಪ ಹೀಗೆ ಒಟ್ಟು ಬಳ್ಳಾರಿ ಜಿಲ್ಲೆಯ ಸಾಹಿತ್ಯ ಪರಂಪರೆಯು ಎಲ್ಲಾ ಪ್ರಕಾರಗಳಲ್ಲಿಯೂ ಗಮನಾರ್ಹ ಕೊಡುಗೆ[೧೯]ಯನ್ನು ಸ್ಮರಿಸಬಹುದು. ಇವುಗಳಲ್ಲದೆಯೇ ಈ ನಮ್ಮ ಹಂಪಿ ಕನ್ನಡ ವಿಶ್ವವಿದ್ಯಾಲಯವು ಸಾಹಿತ್ಯದ ಬಗ್ಗೆ ಸಂಶೋಧನೆ, ವಿಚಾರಸಂಕಿರಣ, ಶಿಬಿರಗಳನ್ನು ನಡೆಸುವುದರ ಮೂಲಕ ಸಾಹಿತ್ಯದ ಮಹತ್ವವನ್ನು ಎತ್ತಿ ಹಿಡಿದಿದೆ.

ರಂಗಕಲೆ :

ನಾಟಕ ರಂಗಭೂಮಿ ಎಂದು ಕರೆಯುವ ಈ ಕಲೆಯು ಜನಪದ ಮೂಲವಾಗಿವೆ. ಸಾಹಿತ್ಯ, ಸಂಗೀತ, ನೃತ್ಯ ಮುಂತಾದ ವೈವಿಧ್ಯತೆಗಳಿಂದ ಕೂಡಿದ ಜನಪದ ರಂಗ ಭೂಮಿಯು ಗಂಡುಕಲೆ 'ಬಯಲಾಟ' (ದೊಡ್ಡಾಟ)ದ ತವರು ಈ ಬಳ್ಳಾರಿ ಜಿಲ್ಲೆ[೨೦] ರಾಮಸಾಗರ, ಕುರುಗೋಡು, ಕುಡತಿನಿ, ಇಂಥ ಊರುಗಳು ಬಯಲಾಟದ ತವರು ಮನೆಗಳು. ಕುಡತಿನಿ ಭೀಮೇಶನ ಅಂಕಿತದೊಂದಿಗೆ ಕೊನೆಗೊಳ್ಳುವ ಈ ಆಟದ ಹಾಡುಗಳು ದೊಡ್ಡಾಟಕ್ಕೆ ಕುಡತಿನಿ ಗ್ರಾಮ ನೀಡಿದ ಅದ್ಭುತ ಕೊಡುಗೆಗಳಾಗಿವೆ.[೨೧] ಸಣ್ಣಾಟಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ಡಪ್ಪಿನಾಟವೆಂದು ಕರೆಯುತ್ತಾರೆ[೨೨]

ಮಾನ್ಯ ಎಂ.ಪಿ.ಪ್ರಕಾಶ್‌ರವರು ಕಟ್ಟಿ ಬೆಳೆಸಿದ 'ರಂಗಭಾರತಿ' ಹೂವಿನಹಡಗಲಿಯ ಆರ್ ನರೇಂದ್ರಬಾಬು ಅವರಿಂದ ಚೈತನ್ಯ ಪಡೆದಿರುವ ಟಿ.ಬಿ.ಡ್ಯಾಂ,ನ ಕನ್ನಡ ಕಲಾ ಸಂಘ, ಜಗದೀಶ ನೇತೃತ್ವದ ಬಳ್ಳಾರಿಯ ಮಯೂರ ನಾಟ್ಯಸಂಘ[೨೩] ಮುಂತಾದುವು ಇವುಗಳಲ್ಲದೆಯೇ ಹಲವು ಮಧ್ಯಮ ಸಣ್ಣ, ರಂಗ ಮಂದಿರಗಳು ಬಹಳವಿದ್ದು, ಕಂಪ್ಲಿ ನಟರಾಜ ಕಲಾಮಂದಿರ ಇಲ್ಲಿಯೂ ನಾಟಕ ಪ್ರದರ್ಶನಗಳು ನಡೆಯುತ್ತವೆ. ಇಂತಹ ಹಲವು ರಂಗಮಂದಿರಗಳು ಶೈಶಾವಸ್ಥೆಯಲ್ಲಿ ಬೆಳವಣಿಗೆ ಹಂತದಲ್ಲಿ ಇರುವುವು.

ಸಂಗೀತ ನೃತ್ಯ :

ಸಂಗೀತ ಭಾರತೀಯ ಸಂಸ್ಕೃತಿಯ ಅತ್ಯಂತ ಪ್ರಾಚೀನತೆಯನ್ನು ಹೊಂದಿದೆ. ಇದರ ಮೂಲ ಸಾಮವೇದ, ಉಪನಿಷತ್ತಿನಲ್ಲಿ ಸಹ ಉಲ್ಲೇಖವಿರುವುದು ಕಂಡು ಬರುತ್ತದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹಂಪೆಯ ವಿಜಯನಗರ ಸಾಮ್ರಾಜ್ಯದಲ್ಲಿ ಹಲವಾರು ಸಂಗೀತ ವಿದ್ವಾಂಸರು, ಸಂಗೀತ ಲಾಕ್ಷಣಿಕರು, ಶಾಸನಗಳು ಮುಂತಾದ ಸಂಗೀತ ಉಲ್ಲೇಖಗಳು ದೊರೆಯುತ್ತವೆ. ಹರಿಹರ ಮತ್ತು ಬುಕ್ಕರಾಯನ ಗುರು ಮತ್ತು ಶೃಂಗೇರಿ ಮಠಾಧೀಶ್ವರರಾಗಿದ್ದ ವಿದ್ಯಾರಣ್ಯ ಶ್ರೀಚರಣರು ಸಂಗೀತದಲ್ಲಿ ಘನ ವಿದ್ವಾಂಸರಾಗಿದ್ದರು.[೨೪]

ವಿಜಯನಗರದ ದೊರೆಗಳು ಸಂಗೀತ ಮತ್ತು ಲಲಿತಕಲೆಗಳ ಪೋಷಕರಾಗಿದ್ದರು. ಸಂಗೀತ ಮತ್ತು ನೃತ್ಯ ಇವು ಯಮಳ ಕಲೆಗಳಾಗಿ ಪರಸ್ಪರ ಪೋಷಕಗಳಾಗಿದ್ದವು. ಇವು ಸಾರ್ವಜನಿಕ ಸಮಾರಂಭಗಳು, ಉತ್ಸವಗಳು, ಧಾರ್ಮಿಕ ಸಮಾರಂಭಗಳು, ರಾಜಾಸ್ಥಾನಗಳು ಮತ್ತು ಸಭೆಗಳ ಕಲಾಪಗಳು ಒಂದು

ಅಂಗವಾಗಿದ್ದವು. ಈ ಲಲಿತ ಕಲೆಗಳ ಪೋಷಣೆ ಮತ್ತು ವಿಕಾಸದಲ್ಲಿ ದೇವಾಲಯಗಳು ಮಹತ್ತರ ಪಾತ್ರ ವಹಿಸಿದ್ದವು[೨೫]. ಅನೇಕ ಸಂಗೀತ ವಿದ್ವಾಂಸರು ಮತ್ತು ವಾದ್ಯಗಾರರು, ರಾಜರು, ಶ್ರೀಮಂತರು, ರಾಜ ಪುರುಷರು ವೃತ್ತಿಗಳಿಂದ ಜೀವನ ಮಾಡುತ್ತಿದ್ದರು[೨೬]. ಅದೇ ವ್ಯಾಸರಾಯಸ್ವಾಮಿಯ ಪ್ರಸಿದ್ಧ ಶಿಷ್ಯರಲ್ಲಿ ಒಬ್ಬರಾದ ಪುರಂದರದಾಸರು ಭಕ್ತಿ ತತ್ವ ನೀತಿಮಯವಾದ ಸಾವಿರಾರು ಹಾಡುಗಳನ್ನು ಸುಲಭವಾಗಿ ಅರ್ಥವಾಗುವಂಥ, ಎಲ್ಲರ ಮೆಚ್ಚುಗಗೆ ಪಾತ್ರವಾಗುವಂಥ ಕನ್ನಡದಲ್ಲಿ ರಚಿಸಿದರು ಮತ್ತು ಕೃಷ್ಣದೇವರಾಯನ ಗುರುವಾಗಿದ್ದ ವ್ಯಾಸರಾಯ ಸ್ವಾಮಿಗಳು ವಾಗ್ಗೇಯಕಾರರು, ಸಂಗೀತ ವಿದ್ವಾಂಸರೂ ಆಗಿದ್ದರೂ ಚೌಡಕಿ, ಕಿನ್ನರಿ, ಲಾವಣಿ, ಗೀಗೀಪದ, ಭಜನೆ, ತತ್ವಪದ, ಗೊಂದಲಿಗರಹಾಡು, ಹಾಗೂ ಸಂಪ್ರದಾಯದ ಪದಗಳು ಇವು ಮೊದಲಾದ ಹಾಡುಗೀತೆ[೨೭] ಜನಪದದ ಗಾಯನದ ಕಲೆಗಳಾಗಿ ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ಜನಪದ ಹಾಗೂ ಸಂಗೀತ ಎನಿಸಿಕೊಂಡಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಮತ್ತೊಂದು ವಿಶಿಷ್ಟಪೂರ್ಣ ಕಲೆಯೆಂದರೆ ನಂದಿಕೋಲ ಕುಣಿತ ಕೊಟ್ಟೂರು, ಸೋಗಿ, ಹರಪನಹಳ್ಳಿ ಮುಂತಾದ ಊರುಗಳಲ್ಲಿ[೨೮] ಕಂಡು ಬರುವವು ಇನ್ನು ಐತಿಹಾಸಿಕವಾಗಿ ರಾಜ ಮಹಾರಾಜರು ಸಂಗೀತದಂತೆಯೇ, ನಾಟ್ಯಕ್ಕೂ ಪ್ರೋತ್ಸಾಹವನ್ನು ಕೊಡುತ್ತಿದ್ದರು. ವಿಜಯನಗರದ ಕಾಲವು ಕರ್ನಾಟಕ ಸಂಗೀತ ಮತ್ತು ನೃತ್ಯ ಕಲೆಗಳ ಪೋಷಣೆ, ರಕ್ಷಣೆ ವಿಕಾಸದಲ್ಲಿ ಗುರುತರವಾದ ಪಾತ್ರವಹಿಸಿದೆ[೨೯]. ಶಿಷ್ಟಪದ್ಧತಿಯಲ್ಲಿ ಸಂಗೀತದಲ್ಲಿ ಎಂ. ಶೇಷಗಿರಿಆಚಾರ್, ಪಂಪಾಪತಿಸ್ವಾಮಿ, ಡಾ.ಹನುಮಣ್ಣನಾಯಕ ದೊರೆ ಮುಂತಾದವರು ಸಂಗೀತಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇವುಗಳಷ್ಟೇ ಪ್ರಾಮುಖ್ಯತೆ ದೃಶ್ಯಕಲೆಗೆ ಇರುವುದನ್ನು ಕಂಡುಕೊಳ್ಳಬಹುದಾಗಿದೆ.

ದೃಶ್ಯಕಲೆ :


ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ವಾಸ್ತುಶಿಲ್ಪ ಮತ್ತು ಶಿಲ್ಪಕಲೆ ವಿಶ್ವವಿಖ್ಯಾತವಾಗಿರುವುದು ನೋಡಬಹುದಾಗಿದೆ. ವಿಜಯನಗರದ ಅರಸರ ಕಾಲದಲ್ಲಿ ದೃಶ್ಯಕಲೆಯ ದೃಷ್ಟಿಯಿಂದ ಅದು ಸುವರ್ಣಯುಗ, ಐಹೊಳೆ ಮತ್ತು ಪಟ್ಟದ ಕಲ್ಲುಗಳಲ್ಲಿ ಶಿಲ್ಪಶಾಸ್ತ್ರದ ಗ್ರಂಥ ಮತ್ತು ಪ್ರಯೋಗ ಶಾಲೆ ಇದ್ದಂತೆ, ಬಳ್ಳಾರಿ ಜಿಲ್ಲೆಯ ಹೀರೇಕುರುವತ್ತಿ, ಬಾಗಳಿ, ನೀಲಗಂದ ಪ್ರದೇಶಗಳಲ್ಲಿ ಗ್ರಂಥ ಮತ್ತು ಪ್ರಯೋಗ ಶಾಲೆಗಳು ಪ್ರಾಚೀನಕಾಲದಲ್ಲಿ ಇದ್ದಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ[೩೦] ಸಾಮಾನ್ಯವಾಗಿ ಯಾವುದೇ ಹೊಸ ಸಾಮ್ರಾಜ್ಯವಾಗಲಿ ಅಥವಾ ಸಂಸ್ಥಾನವಾಗಲಿ ಸ್ಥಾಪನೆಯಾದ ಮೇಲೆ ಮೊದಲು ಕೈಗೊಳ್ಳುತ್ತಿದ್ದ ಕಾರ್ಯವೆಂದರೆ ದೇವಾಲಯಗಳ ನಿರ್ಮಾಣ[೩೧] ಬಳ್ಳಾರಿ ಜಿಲ್ಲೆಯ ಶಿಲ್ಪ ಮತ್ತು ವಾಸ್ತುಕಲೆಯ ಬಹು ಗಮನಾರ್ಹವಾದವುಗಳಾಗಿವೆ. ಅದರಲ್ಲೂ ಹಂಪೆಯ ಶಿಲ್ಪವಾಸ್ತು ಬಹು ವಿಶಿಷ್ಟವಾಗಿದೆ. ಈ ಪ್ರದೇಶದ ಅಧ್ಯಯನ ಬಹು ಉತ್ಸಾಹದಾಯಕವಾಗಿದೆ.

ಪ್ರಸ್ತುತ ಹಂಪೆಯಲ್ಲಿರುವ ಬೃಹತ್ ದೇವಾಲಯಗಳ ಶಿಲ್ಪಕಲೆ ಸಮೂಹ ವಾಸ್ತುಗಳಿಗೆ ಮುರುಗು ಬಹುರಮಣೀಯವಾದದ್ದು ಮತ್ತು ಅಂದಿನ ಕಾಲದ ಸಾಮ್ರಾಜ್ಯದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪ್ರತಿನಿಧಿಸುವಂತಿವೆ.[೩೨] ವಿಜಯನಗರದ ವ್ಯಾಪ್ತಿಯಿರುವಷ್ಟು ಉದ್ದಗಲಕ್ಕೂ ಕಲಾಚಟುವಟಿಕೆಗಳು ನಡೆದೇ ಇದ್ದವು. ವಿಜಯನಗರವನ್ನು ಆಳಿದ ಕದಂಬ, ಚಾಲುಕ್ಯ, ವಿಜಯನಗರ ಅರಸು ಮುಂತಾದ









ರಾಜಮನೆತನಗಳು ದೇವಾಲಯಗಳ, ಶಿಲ್ಪಗಳ, ಅರಮನೆಗಳು, ಕೋಟೆ ಕೊತ್ತಲುಗಳು ಮತ್ತು ಕೆರೆ ಬಾವಿಗಳ ನಿರ್ಮಾಣಕ್ಕೆ ಪೋಷಕವಾಗಿದ್ದುದು ದಾಖಲೆಗಳಿಂದ ತಿಳಿದು ಬರುತ್ತದೆ[೩೩]. ಅದರಲ್ಲೂ ಕಲಾವಿದರು ಗಾರೆಕಲಾಮಾಧ್ಯಮ ಅಂದು ಪ್ರಚಲಿತದಲ್ಲಿದ್ದ ಹೊಸ ಮಾಧ್ಯಮವನ್ನು ತನ್ನದಾಗಿಸಿಕೊಂಡಿರಬೇಕು[೩೪] ಎಂಬ ಮಾತು ಅಲ್ಲಗಳೆಯುವಂತಿಲ್ಲ, ಗಾರೆ ಶಿಲೆಯಷ್ಟೇ ಪ್ರಮುಖವಾದ ಮಾಧ್ಯಮವಾಗಿತ್ತು[೩೫] ಯಾವುದೇ ದೇವಾಲಯವಾಗಲಿ ಮಂಟಪವಾಗಿರಲಿ ಇನ್ನಾವುದೇ ಕಟ್ಟಡಕ್ಕೆ ಇಟ್ಟಿಗೆ ಮತ್ತು ಗಾರೆ ಅಲ್ಲಿ ಉಪಯೋಗವಾಗಿರಬೇಕು, ಗಾರೆಯನ್ನು ಸುಣ್ಣ, ಮರಳು, ನೀರು ಮತ್ತು ಕೆಲವು ಅಂಟುದ್ರಾವಕಗಳನ್ನು ಸೇರಿಸಿ[೩೬]ತಯಾರಿಸುತ್ತಿದ್ದರಿಂದ ಗಾರೆಯು ಇಂದಿಗೂ ಉಳಿದು ಬಂದಿರುವವದ್ದಿದು ಕಲಾವಿದನ ನಿಪುಣತೆಯನ್ನು ಪ್ರತಿಬಿಂಬಿಸುತ್ತವೆ. ಈಗಿನ ಹರಪನಹಳ್ಳಿ ಮತ್ತು ಹೂವಿನಹಡಗಲಿ ತಾಲೂಕು ಪ್ರದೇಶಗಳಲ್ಲಿ ಬಹುಸಂಖ್ಯೆಯಲ್ಲಿ ಶ್ರೇಷ್ಠ ಶ್ರೇಣಿಯ ಶಿಲ್ಪಗಳು ಕಂಡುಬರುವವು, ಹಡಗಲಿ ತಾಲೂಕು ಸೋಗಿ ಗ್ರಾಮದ ಒಬ್ಬ ಶಿಲ್ಪಿ ಅಂಥವರಲ್ಲಿ ಒಬ್ಬನು. ಈತನು ಭಾರತದ ಶಿಲ್ಪ ಶೈಲಿಗಳಾದ ನಗರ, ಕಾಳಿಂಗ, ದ್ರಾವಿಡ ಮತ್ತು ವೇಶರ ಶೈಲಿಯಲ್ಲಿ ಪರಿಣಿತನಿದ್ದನು ಎಂಬುದು ತಿಳಿದು ಬರುತ್ತದೆ. ಇವರಿಗೆ ಆಗಿನ ಕಾಲದ ರಾಜರು ಕೊಟ್ಟ ಬಿರುದು ಕಲಿಯುಗದ ವಿಶ್ವಕರ್ಮ, ವಿಶಾರದ, ಚತುಷ್ಪತಿ, ಕಲಾವಿದ ಮುಂತಾದವು ಇವುಗಳಲ್ಲದೇ ಅನೇಕ ಶಿಲ್ಪಿಗಳು ಈ ಜಿಲ್ಲೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಪ್ರಮುಖರು ಗುಲುಗೋಜ, ಚಾವುಂಡೋಜ, ಚಟ್ಟೋಜ ಮುಂತಾದವರು ಬಳ್ಳಾರಿ ಸುತ್ತಮುತ್ತ ಕೋಟೆಯೋಪಾದಿಯಲ್ಲಿ ರಕ್ಷಣೆಗಾಗಿ ನಿರ್ಮಿಸಿದ ಗೋಡೆಗಳು ಕಂಡುಬರುತ್ತವೆ. ಜೊತೆಗೆ ಇಲ್ಲಿ ಚಿತ್ರಕಲೆಯ ಕೊಡುಗೆ ಮತ್ತೊಂದಾಗಿದೆ.

ಈ ಜಿಲ್ಲೆಯು ಚಿತ್ರಕಲೆಯ ಪರಂಪರೆಯನ್ನು ಉಳಿಸಿಕೊಂಡು ಬಂದಿದೆ. ಆದಿಮಾನವನಿಂದ ಹಿಡಿದು ಆಧುನಿಕದವರೆಗೆ ಹಲವು ಸ್ಥಿತ್ಯಂತರಗಳನ್ನು ಕಂಡಿದೆ. ಆದಿಮಾನವ ಚಿತ್ರಕಲೆಯನ್ನು ಮುಂದಿನ ಅಧ್ಯಾಯಗಳಲ್ಲಿ ಅಧ್ಯಯನ ಮಾಡಲಾಗಿದೆ. ಜಿಲ್ಲೆಯ ಚಿತ್ರಕಲೆಯ ಪುರಾತನಕ್ಕೆ ಬಂದರೆ ಆದಿಮಾನವನ ಚಿತ್ರಗಳನ್ನು ಬಿಟ್ಟರೆ ವಿಜಯನಗರದ ಭಿತ್ತಿಚಿತ್ರಗಳು ಕಾಣಸಿಗುತ್ತವೆ. ಈ ವಿಜಯನಗರದ ಅರಸರ ಆಳ್ವಿಕೆಯ ಸಮಯದಲ್ಲಿ ವರ್ಣಚಿತ್ರಕಲೆಯೂ ಪ್ರೋತ್ಸಾಹವನ್ನು ಹೆಚ್ಚಿನ ಮಟ್ಟದಲ್ಲಿ ಪಡೆದಿದ್ದಲ್ಲದೇ ಬಹುಜನಪ್ರಿಯವಾಗಿದ್ದದರ ಕುರುಹಾಗಿ ಈಗಲೂ ಅನೇಕ ಕಡೆಗಳಲ್ಲಿ ಮತ್ತು ಹೊರರಾಜ್ಯಗಳಲ್ಲಿಯೂ ಕಾಣಸಿಗುತ್ತವೆ. ಕೃಷ್ಣದೇವರಾಯನ ರಾಜ್ಯದ ವಿಸ್ತಾರ ಜೊತೆಗೆ ಕಲೆಯ ವಿಸ್ತಾರ ಕಂಡು ಬರುತ್ತದೆ. ಇದರ ಫಲವಾಗಿ ಚಿತ್ರಕಲೆಯಲ್ಲಿ ಒಂದು ಹೊಸ ಶೈಲಿ ದಕ್ಷಿಣ ಭಾರತದಲ್ಲಿ ಹುಟ್ಟಿತು. ವಿಜಯನಗರ ಶೈಲಿಯಲ್ಲಿ ರಚಿತವಾದ ಚಿತ್ರಗಳನ್ನು ದಕ್ಷಿಣ ಭಾರತದ ತಾಡಪತ್ರಿ, ಲೇಪಾಕ್ಷಿ, ತಿರುಪತಿ, ಕಾಂಚಿಪುರ ಮತ್ತು ಶ್ರೀರಂಗ ಮುಂತಾದ ಪ್ರದೇಶಗಳಲ್ಲಿ ಕಾಣಬಹುದು. ವಿಜಯನಗರ ಅರಸರ ಕಾಲದ ಭಿತ್ತಿ ಚಿತ್ರಕಲೆಗೆ ಉದಾಹರಣೆ ವಿರೂಪಾಕ್ಷ ದೇವಾಲಯವಾಗಿದೆ.[೩೮] ಈ ವಿರೂಪಕ್ಷದೇವಾಲಯದ ಮಂಟಪದಲ್ಲಿರುವ ಭಿತ್ತಿ ಚಿತ್ರಗಳನ್ನು ಹಲವು ವಿದ್ವಾಂಸರು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ೧೯೩೯ರಲ್ಲಿ ಮೊದಲ ಜನರ ಗಮನ ಸೆಳೆದವರು ಎಸ್. ಪರಮಶಿವನ್. ನಂತರ ೧೯೪೬ರಲ್ಲಿ ಸಿ.ಟಿ.ಎಂ. ಕೊಟ್ರಯ್ಯನವರು ಈ ಚಿತ್ರಗಳ ವಸ್ತುವಿಷಯ ವರ್ಣಗಾರಿಕೆ, ಕಾಲಾವಧಿ ರಚನಾ ವಿಧಾನಗಳನ್ನು ಕುರಿತು ವಿವರ ನೀಡಿದರು. ಕರ್ನಾಟಕದ ಚಿತ್ರಕಲೆಯ ಬಗ್ಗೆ ಈ ಚಿತ್ರಗಳ ವಿಷಯವಾಗಿ ಬರೆದಿದ್ದಾರೆ.

ಪಿ. ಶ್ರೀನಿವಾಸಾಚಾರ್ಯ ಅವರ ವಿಜಯನಗರ ಪೇಂಟಿಂಗ್ ಎಂಬ ಗ್ರಂಥವು ಬಹುಮುಖ್ಯವಾದುದು. ಸಿ. ಶಿವರಾಮಮೂರ್ತಿಯವರ ಲೇಖನಗಳನ್ನು ಪ್ರಕಟಿಸಲಾಗಿದೆ. ಡಾ. ಸಿಂಧಗಿ ರಾಜಶೇಖರ ಅವರು ಜಾನಪದ ಚಿತ್ರಕಲೆಯ ಬಗ್ಗೆ ಅಧ್ಯಯನ ಮಾಡುವಾಗ ಚಿತ್ರಕಲೆಯನ್ನು ಕುರಿತು ವಿವೇಚಿಸಿದ್ದಾರೆ. ಹಾಗೆಯೇ ಅ.ಲ.ನರಸಿಂಹನ್, ಕೆ.ವ್ಹಿ.ಎಸ್. ಶಾಸ್ತ್ರಿ, ಡಾ.ಯಾದಪ್ಪ ಪರದೇಶಿ ಅವರು ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ ಕುರಿತು ಪಿಎಚ್.ಡಿ. ಮಹಾಪ್ರಬಂಧವನ್ನು ರಚಿಸಿದ್ದಾರೆ. ಇನ್ನೂ ಮುಂತಾದ ವಿದ್ವಾಂಸರು, ವಿಜಯನಗರ ಕಾಲದ ಚಿತ್ರಕಲೆಯನ್ನು ಕುರಿತು ವಿವರವಾದ ಮಾಹಿತಿ ನೀಡುವ ಪ್ರಯತ್ನ ಮಾಡಿದ್ದಾರೆ.[೩೯]

ಇಲ್ಲಿನ ಚಿತ್ರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯವು ಮೇಲ್ಛಾವಣಿಯ ಚಿತ್ರಗಳಲ್ಲಿ ದೊಡ್ಡ ದೊಡ್ಡ ಪಟ್ಟಿಕೆಗಳನ್ನಾಗಿ ಮಾಡಿಕೊಂಡು ಚಿತ್ರ ರಚನೆ ಮಾಡಲಾಗಿದೆ. ತೊಲೆಗಳ ಚಿತ್ರಗಳ ಚಿತ್ರಗಳು ಚಿಕ್ಕ ಚಿಕ್ಕ ಪಟ್ಟಿಕೆಗಳ ಮೂಲಕ ಚಿತ್ರಿಸಲಾಗಿದೆ.[೪೦]

ಈ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗಿಂತಲೂ ಮೊದಲೇ ವಿರೂಪಾಕ್ಷ ದೇವಾಲಯವಿದ್ದಿತು. ಅದು ಹಲವಾರು ಜೀರ್ಣೋದ್ಧಾರಗಳನ್ನು ಕಂಡಿದೆ. ಈ ವಿರೂಪಾಕ್ಷ ದೇವಾಲಯದ ಮಹಾರಂಗ ಮಂಟಪದ ಒಳ ಛಾವಣಿಯಲ್ಲಿ ವರ್ಣಚಿತ್ರಗಳನ್ನು ಬಿಡಿಸಲಾಗಿದೆ. ಹಂಪಿಯ ವರ್ಣಚಿತ್ರಗಳಲ್ಲಿ ಎದ್ದು ಕಾಣುವ ಲಕ್ಷಣಗಳಂತೆ ಆಕೃತಿಗಳನ್ನು ಸಾಮಾನ್ಯವಾಗಿ ಪಾರ್ಶ್ವಮುಖ ಛಾಯೆಯಲ್ಲಿ ಚಿತ್ರಿಸಿದ್ದಾರೆ. ಮತ್ತು ಈ ಚಿತ್ರ ಮುಖ್ಯವಾಗಿ ಬಳಿದ ಬಣ್ಣವೆಂದರೆ ಹಸಿರು, ಬೂದುಬಣ್ಣ ಮತ್ತು ನಸುಕೆಂಪು, ಪ್ರಾಣಿಗಳ ಕಣ್ಣುಗಳನ್ನು ಮನುಷ್ಯರ ಕಣ್ಣಿನಂತೆಯೇ ಚಿತ್ರಿಸಲಾಗಿದೆ.[೪೧] ಮತ್ತು ಇಲ್ಲಿನ ವಸ್ತು ವಿಷಯ ಸಾಂಪ್ರದಾಯಿಕ ಶಿಷ್ಟಪದ್ಧತಿಯ ಪೌರಾಣಿಕ ಚಿತ್ರಗಳಾದ ಶಿವ ಕಲ್ಯಾಣ ಸುಂದರ ಕಾಮದಹನಮೂರ್ತಿ ಮತ್ತು ತ್ರಿಪುರಾಂತರ ಜೊತೆಗೆ ವಿಷ್ಣುವಿನ ದಶವತಾರಗಳು ಅಷ್ಟದಿಕ್ಪಾಲಕರು, ಅರ್ಜುನನು ಪ್ರತಿಬಿಂಬವನ್ನು ನೋಡಿ ಮೀನಿಗೆ ಗುರಿ ಇಟ್ಟು ಬಾಣ ಬಿಡುತ್ತಿರುವುದು, ಮೆರವಣಿಗೆಯಲ್ಲಿ ಒಬ್ಬ ಮುನಿಯನ್ನು ಒಯ್ಯುತ್ತಿರುವುದು ಗಿರಿಜಾಕಲ್ಯಾಣ, ತ್ರಿಪುರಾಸುಂದರ ಸಂಹಾರ, ದಕ್ಷಯಜ್ಞ, ಮನ್ಮಥವಿಜಯ, ದ್ರೌಪದಿ ಸ್ವಯಂವರ, ಗೋಪಿಕಾ ವಸ್ತು ಅಪಹರಣ ಪ್ರಸಂಗಗಳು ಇಲ್ಲಿ ಮಂಟಪದ ಛಾವಣಿಯಲ್ಲಿ ಚಿತ್ರಾಲಂಕೃತವಾಗಿದೆ. ಛಾವಣಿಯಲ್ಲಿ ಅಂಕಣಗಳಾಗಿ ವಿಂಗಡಿಸಲಾಗಿದೆ. ಒಂದೊಂದು ಅಂಕಣದಲ್ಲಿಯೂ ರಾಮಾಯಣ, ಮಹಾಭಾರತ ಭಾಗವತಗಳಿಂದ ಆಯ್ದ ಕಥಾ ಸಂದರ್ಭಗಳು ಚಿತ್ರಿತವಾಗಿವೆ. ಇವುಗಳಲ್ಲಿ ಸ್ವಾರಸ್ಯದ ಒಂದು ಚಿತ್ರ ವಿದ್ಯಾರಣ್ಯರ ಮೆರವಣಿಗೆ.[೪೨]

ಈ ರಾಜ್ಯದಲ್ಲಿ ಗುರುಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಕರೆದೊಯ್ಯುತ್ತಿರುವ ಈ ಚಿತ್ರವು ವಿಜಯನಗರದ ಇತಿಹಾಸದ ದೃಷ್ಟಿಯಿಂದ ಮಹತ್ವವಾದುದು. ಇಲ್ಲಿ ವರ್ಣಚಿತ್ರಗಳಲ್ಲಿರುವ ಮೇಲ್ಛಾವಣಿಯಲ್ಲಿರುವ ದೊಡ್ಡ ದೊಡ್ಡ ಪಟ್ಟಿಕೆಗಳನ್ನು ಹಾಗೂ ಅಲ್ಲಿ ಪೂರಕವಾದ ಚಿಕ್ಕ ಪಟ್ಟಿಕೆಗಳನ್ನು ರೂಪಿಸಿಕೊಂಡು ಅವುಗಳಲ್ಲಿ ಚಿತ್ರರಚನೆ ಮಾಡಲಾಗಿದೆ. ಮೇಲ್ಛಾವಣೆಯ ಈ ಚಿತ್ರಗಳನ್ನು ಚಾರಿತ್ರಿಕ ಚಿತ್ರಗಳು ಧಾರ್ಮಿಕ ಚಿತ್ರಗಳು ಎಂಬುದಾಗಿ ಗುರುತಿಸಲಾಗಿದ್ದು, ಚಾರಿತ್ರಿಕ ಚಿತ್ರದಲ್ಲಿ ಮುಖ್ಯವಾಗಿ ವಿದ್ಯಾರಣ್ಯರ ಮೆರವಣಿಗೆಯ ವಾದ್ಯಗಾರರಿರುವ ಚಿತ್ರ ಹಾಗೂ ಯುದ್ಧವೊಂದರ ಚಿತ್ರಗಳನ್ನು ಗುರುತಿಸಲಾಗಿದೆ.[೪೩] ಮೇಲ್ಛಾವಣಿಯಲ್ಲಿರುವ

ಧಾರ್ಮಿಕ ಚಿತ್ರಗಳಲ್ಲಿ ಕೆಲವನ್ನು ಹೀಗೆ ಗಮನಿಸಬಹುದು[೪೩] ದ್ರೌಪದಿಯ ಸ್ವಯಂವರದ ಚಿತ್ರವನ್ನು ಮೂರು ಚೌಕುಗಳಲ್ಲಿ ವಿಭಾಗಿಸಿ ಚಿತ್ರಿಸಿದ್ದಾರೆ. ಮೊದಲನೆಯ ಚೌಕದಲ್ಲಿ ಅರ್ಜುನನು ಮೀನಿನ ಪ್ರತಿಬಿಂಬವನ್ನು ಎಣ್ಣೆಯಲ್ಲಿ ನೋಡಿ ಬಾಣ ಬಿಡುತ್ತಿರುವನು. ಎರಡನೆಯ ಚೌಕದಲ್ಲಿ ದ್ರೌಪದಿ ಅರ್ಜುನರು ಜೊತೆಗಿದ್ದು, ಸ್ವಯಂವರ ನಡೆಯುತ್ತಿದೆ. ಮೂರನೆಯ ಚಿತ್ರದಲ್ಲಿ ಆಮಂತ್ರಿತ ಗಣ್ಯರು ಋಷಿಮುನಿಗಳು ರಾಜಪರಿವಾರದವರು ಮುಂತಾದವರು ಚಿತ್ರಗಳಿವೆ. ಮತ್ಸ್ಯಭೇದನ ಮಾಡುತ್ತಿರುವ ಅರ್ಜುನನು ಕೀರಿಟ ಧರಿಸಿದ್ದು ಅರ್ಧ ಚಂದ್ರಾಕೃತಿ ಪಾತ್ರೆಯಲ್ಲಿ ಮೇಲೆ ಕಟ್ಟಲಾಗಿರುವ ಮೀನಿನ ಪ್ರತಿಬಿಂಬವನ್ನು ನೋಡಿ ಬಾಣ ಬಿಡುತ್ತಿದ್ದಾನೆ. ಆತನ ಮೈಬಣ್ಣ ಕೆಂಪಾಗಿದ್ದು, ಕೈಕಾಲು ಮುಖದ ವರ್ಣಛಾಯೆಯು ಬದಲಾಗಿದೆ. ದ್ರೌಪದಿಯು ಗಾಢ ವರ್ಣದ ಜರತಾರಿ ಅಂಚುಳ್ಳ ಸೀರೆಯನ್ನು ಕಚ್ಚೆ ಹಾಕಿ ಉಟ್ಟಿದ್ದಾಳೆ. ಬಲಗಡೆಗಿರುವ ವ್ಯಕ್ತಿಯ ಕೈಯಲ್ಲಿ ಗದೆಯಂತಹ ದಂಡವಿದೆ. ಆತನ ಬಲಕ್ಕೆ ಇನ್ನೊಬ್ಬ ವ್ಯಕ್ತಿ ಇದ್ದು ಈ ಇಬ್ಬರ ತೊಡೆ ಮಟ್ಟದ ಪಂಚೆ ಉಟ್ಟಿದ್ದಾರೆ.[೪೪]

ಈ ಎಲ್ಲಾ ಚಿತ್ರಗಳು ಕಥಾನಕದಂತೆ ಕಂಡು ಬರುತ್ತವೆ. ಒಂದಕ್ಕೊಂದು ಸಂಬಂಧಿತ ಚಿತ್ರಗಳಾಗಿದ್ದು ಇತ್ತೀಚಿನ ದಿನಗಳಲ್ಲಿ ಅವುಗಳು ಹಲವು ಭಾಗಗಳಾಗಿದ್ದು, ಒಂದು ಚಿತ್ರಕ್ಕೆ ಮತ್ತೊಂದು ಚಿತ್ರಕ್ಕೆ ಸಂಬಂಧ ಕಳೆದುಕೊಂಡಿವೆ. ಒಂದೊಂದು ಕಲೆ ಮಾಸಿದರೆ ಒಂದೊಂದು ಕಲೆಯ ಪೂರ್ಣಚಿತ್ರವು ಅಳಿಸಿ ಅಥವಾ ಉದುರಿ ಹೋಗಿದೆ. ಮತ್ತು ಕೆಲವು ಕಡೆ ಅರ್ಧ ಚಿತ್ರಗಳು ಮಾತ್ರ ಉಳಿದುಕೊಂಡಿವೆ. ಇವೆಲ್ಲವನ್ನು ಅತ್ಯಂತ ಸೂಕ್ಷ್ಮವಾದ ರೇಖೆ ಮತ್ತು ವರ್ಣ ವಿನ್ಯಾಸದಿಂದ ಸಂಯೋಜನಗೊಳಿಸಲಾಗಿದೆ. ಮತ್ತೊಂದು ವಿಷಯ ತ್ರಿಪುರ ಸಂಹಾರ ಶಿವನು ರಥದಲ್ಲಿ ಕುಳಿತಿದ್ದು ಸೂರ್ಯ ಚಂದ್ರರೇ ಅವನ ರಥದ ಗಾಲಿಗಳಾಗಿದ್ದಾರೆ. ಬ್ರಹ್ಮನು ರಥದ ಸಾರಥಿಯಾಗಿದ್ದಾನೆ. ಇವು ಮೂರು ವೃತ್ತದಲ್ಲಿ ರಚನೆಯಾಗಿದ್ದು ಕಂಡು ಬರುತ್ತದೆ.[೪೫]

ಇವುಗಳಲ್ಲದೆಯೇ ಸಮೀಪದಲ್ಲಿಯೇ ಕೃಷ್ಣನು ಗೋಪಿಕಸ್ತ್ರೀಯರು ರಾಮರ ಕಲ್ಯಾಣಚಿತ್ರಣ ಸ್ವಯಂರಕ್ಕೆ ಬಂದು ರಾಜ ಮಹಾರಾಜರು, ಗಣ್ಯರು, ಋಷಿಮುನಿಗಳು, ರಾಜ ಪರಿವಾರದವರು ಮುಂತಾದವರ ಚಿತ್ರಣವು ಇದೆ. ಮತ್ತೊಂದು ಪಟ್ಟಿಕೆಯಲ್ಲಿ ವಿಷ್ಣುವಿನ ಹತ್ತು ದಶಾವತಾರ, ನರಸಿಂಹ ಅವತಾರ, ನರಸಿಂಹ ಶಿವ ಪಾರ್ವತಿಯರ ಕಲ್ಯಾಣ, ಶ್ರೀದೇವಿ ಭೂದೇವಿ ಮತ್ತು ಪಕ್ಕದ ಚೌಕದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಚಿತ್ರವಿದ್ದು ಪಕ್ಕದ ಚಿಕ್ಕ ಚಿಕ್ಕ ಪಟ್ಟಿಕೆಗಳಲ್ಲಿ ಋಷಿ ಮುನಿಗಳು, ದೇವತೆಗಳು, ಗಂಧರ್ವರು, ಯಕ್ಷಯಕ್ಷಿಣಿಯರು, ಕಾಲ್ಪನಿಕ ಪ್ರಾಣಿಗಳು, ಪೌರಾಣಿಕಪ್ರಾಣಿಗಳು, ಐರಾವತ, ಕಾಮದೇನು, ಶರಭ ಮುಂತಾದ ಚಿತ್ರಗಳಿವೆ.[೪೬] ಇವುಗಳಲ್ಲದೆಯೇ ವಿಜಯವಿಠಲ ದೇವಾಲಯವು ಭಿತ್ತಿ ಚಿತ್ರಗಳಿಂದ ಅಲಂಕಾರಿತವಾಗಿದೆ. ವಿಜಯನಗರದ ಅರಸರು ಇದರ ಮಂಟಪವನ್ನು ಸಂಗೀತ, ನೃತ್ಯ, ಉತ್ಸವಗಳಿಗಾಗಿ ಬಳಸುತ್ತಿದ್ದು ಈ ಮಂಟಪದ ಛಾವಣಿಯು ವರ್ಣ ಚಿತ್ರಗಳಿಂದ ಕೂಡಿದ್ದಕ್ಕೆ ಇಂದಿಗೂ ಛಾವಣಿಯಲ್ಲಿ ಬಣ್ಣದ ಛಾಯೆ ಉಳಿಕೆಗಳು ಅಲ್ಲಲ್ಲಿ ಕಂಡು ಬರುತ್ತವೆ. ಕೆಂಪು, ನೀಲಿ, ಹಸಿರು, ನಸುಕೆಂಪು ಬಣ್ಣದ ಗುರುತುಗಳು ಗೋಚರಿಸುವುದರಿಂದ ಈ ಮಂಟಪವು ಭಿತ್ತಿ ಚಿತ್ರಗಳಿಂದ ಅಲಂಕೃತವಾಗಿತ್ತು. ಎನ್ನಬಹುದು.

ಭಾರತದ ಇತರೇ ಭಾಗಗಳಲ್ಲಿರುವ ಭಿತ್ತಿಚಿತ್ರಗಳಂತೆಯೇ ಹಂಪಿಯ ಭಿತ್ತಿಚಿತ್ರಗಳಲ್ಲಿಯೂ ರೇಖೆಯೇ

ಪ್ರಧಾನಾಂಶ ಅಂತರಗಳನ್ನು ಆವರಿಸಿ ಕಲ್ಪನೆಗೆ ಖಚಿತ ರೂಪು ಕೊಡುವುದು ಈ ರೇಖಾ ಚಿತ್ರಗಳ ವಸ್ತು ಬಹುತೇಕ ರಾಮಾಯಣ, ಮಹಾಭಾರತ, ಭಾಗವತ ಹಾಗೂ ಇತರೆ ಪುರಾಣಗಳಿಂದ ಆರಿಸಲಾದ ಕಥಾ ಸಂದರ್ಭಗಳ ಚಿತ್ರಗಳು ಬಹುಶಃ ಎರಡನೇ ಆಯಾಮವುಳ್ಳವು ಘಟನಾಕೃತಿಯವು ಮತ್ತು ಪ್ರಾಯಶಃ ಇಲ್ಲಿ ಲೌಕಿಕ ಜೀವನ ಸಂದರ್ಭಗಳನ್ನು ನಿರೂಪಿಸುವಾಗ ವಿನಾ ರೂಪ ನಿರ್ಮಾಣದಲ್ಲಿ ಅವುಗಳ ಅಲಂಕಾರದಲ್ಲಿ ಭಾವ ಭಂಗಿಯಗಳಲ್ಲಿ ಆಗಮ, ಶಿಲ್ಪಶಾಸ್ತ್ರ ಮುಂತಾದ ಗ್ರಂಥಗಳಲ್ಲಿ ಹೇಳಲಾದ ಲಕ್ಷಣಗಳನ್ನೇ ಅನುಸರಿಸುತ್ತವೆ.[೪೭] ಮತ್ತು ಇವುಗಳ ಪ್ರಮಾಣಬದ್ಧತೆಗೆ ವಿದ್ಯಾರಣ್ಯ ಸ್ವಾಮಿಗಳು ವಿಜಯನಗರ ಸಾಮ್ರಾಜ್ಯದ ಮೊದಲ ಘಟ್ಟದಲ್ಲಿ ಇದ್ದವರು, ಅವರ ಹಲವಾರು ಗ್ರಂಥಗಳು 'ಪಂಚದಶಿ' ಇದು ವೇದಾಂತ ಗ್ರಂಥ ಆದರೂ ಅದರಲ್ಲಿ ಚಿತ್ರದೀಪಿಕೆಯೆಂಬ ಪ್ರಕರಣವಿರುವುದು ಸ್ವಾರಸ್ಯವಾಗಿದೆ[೪೮] ಇದ್ದವರು ಇವು ಶಿಷ್ಟ ಪದ್ಧತಿ ರೂಪವಾಗಿದ್ದರೂ, ಇದರ ಮೂಲ ಜನಪದವೆ ಎಂದು ಹೇಳಬಹುದು. ಈ ಜಾನಪದ ಚಿತ್ರಕಲೆ ಹಲವು ಪ್ರಕಾರಗಳು ಈ ಜಿಲ್ಲೆಯ ಸುತ್ತ ಮುತ್ತ ಕಾಣಸಿಗುತ್ತವೆ. ಅವು ಹಚ್ಚೆ, ರಂಗೋಲಿ, ತೊಗಲುಗೊಂಬೆ ಮುಂತಾದವು.

ಹಚ್ಚೆ :

ಜನಪದ ಚಿತ್ರಕಲಾ ಪರಂಪರೆಯಲ್ಲಿ ಹಚ್ಚೆ, ಶರೀರದ ಮೇಲೆ ಶಾಶ್ವತ ಚಿತ್ರಕಲೆಯಾಗಿ ಪ್ರಪಂಚ ವ್ಯಾಪಿ ದೀರ್ಘ ಇತಿಹಾಸ ಹೊಂದಿದೆ. ಇದೊಂದು ಜನಪ್ರೀಯ ಕಲೆ.

ಬಳ್ಳಾರಿ ಜಿಲ್ಲೆಯ ನಾನಾ ಭಾಗಗಳಲ್ಲಿ ಕಂಡು ಬರುವುದು ಅದು ಬುಡಕಟ್ಟು ಸಮುದಾಯಗಳಲ್ಲಿ ಕೆಲವಡೆ ಇಂದಿಗೂ ನೋಡಬಹುದು. ಚರ್ಮದ ಮೇಲೆ ಶಾಶ್ವತವಾಗಿ ಇರಬಲ್ಲ ಹಸಿರುಬಣ್ಣದ ಗುರುತೇ ಹಚ್ಚೆಯಾಗಿದೆ. ಹಚ್ಚೆಯ ಕುರಿತು ಜನಪದರಲ್ಲಿ ಅನೇಕ ಕಥೆಗಳು, ಐತಿಹ್ಯಗಳು, ನಂಬಿಕೆಗಳು, ಒಗಟು, ಹಾಡುಗಳು ಪ್ರಪಂಚದಲ್ಲಿವೆ. ಹಚ್ಚೆಯನ್ನು ಸ್ತ್ರಿಯರು ಹೆಚ್ಚಾಗಿ ಹಾಕಿಸಿಕೊಳ್ಳುತ್ತಿದ್ದು ಪುರುಷರು ಕಡಿಮೆ ಪ್ರಮಾಣದಲ್ಲಿ ಹಾಕಿಸಿಕೊಳ್ಳುತ್ತಾರೆ. ಹಚ್ಚೆಯನ್ನು ಶರೀರದ ಎಲ್ಲ ಭಾಗಗಳಲ್ಲಿಯೂ ಹಾಕಿಸಿಕೊಳ್ಳುತ್ತಾರೆ. ಮುಖ, ಕೊರಳು, ಕೈ, ಎದೆ, ಹೊಟ್ಟೆ, ಬೆನ್ನು, ಗುಪ್ತಾಂಗ, ಕಾಲು ಮುಂತಾದ ಕಡೆಗೆ ಸೌಂದರ್ಯದ ಹಿನ್ನೆಲೆಯಲ್ಲಿ ಧಾರ್ಮಿಕ ಹಿನ್ನೆಲೆಯಲ್ಲಿ ಹಾಗೂ ವೈದ್ಯಕೀಯ ಚಿಕಿತ್ಸೆಗಾಗಿ ಕೂಡ ಹಾಕಿಸಿಕೊಳ್ಳುವುದುಂಟು. ಒಂದೊಂದು ಸ್ಥಳದಲ್ಲಿ ಹಾಕಿಸಿಕೊಳ್ಳುವ ಹಚ್ಚೆಗೆ ಅದರದೇ ಆದ ಜನಪದ ಸಂಪ್ರದಾಯ, ನಂಬಿಗೆ ಆಶ್ರಯಗಳಾಗಿದ್ದ ಹಚ್ಚೆಯನ್ನು ಸೂಜಿಯಿಂದ ಚುಚ್ಚಿ, ಹಾಕುತ್ತಾರೆ[೧] ಈ ಸಂದರ್ಭದಲ್ಲಿ ಹಾಡುಗಳನ್ನು ಹೇಳುತ್ತಾರೆ. ಹಾಡುಗಳನ್ನು ಹೇಳುವಾಗ ಹಚ್ಚೆ ಹಾಕಿಸಿಕೊಳ್ಳುವುದರಿಂದ ನೋವಿನ ಅರಿವು ಸ್ವಲ್ಪ ಕಡಿಮೆಯಾಗಿ ಹಾಡಿನ ಕಡೆಗೆ ಗಮನಹರಿಸುವುದುಂಟು. ಈ ಹಾಡು ಹಾಸ್ಯಭರಿತವಾಗಿರುತ್ತದೆ. ಅಚ್ಚೆಯ ಚಿತ್ರವಿನ್ಯಾಸಗಳು ವೈವಿದ್ಯತೆಯಿಂದ ಕೂಡಿದವುಗಳಾಗಿದ್ದು, ಧಾರ್ಮಿಕ ದೇವಾನುದೇವತೆಗಳು, ಪುರಾಣ, ರಾಮಾಯಣ, ಹಾಗೂ ಮಹಾಭಾರತದ ಚಿತ್ರಗಳು, ನೈಸರ್ಗಿಕ ಚಿತ್ರಗಳು, ಪ್ರಾಣಿ, ಪಕ್ಷಿ, ಹೂ, ಎಲೆ ಬಳ್ಳಿ ಮುಂತಾದ ಸ್ಥಳೀಯ ಪರಿಸರದ ಚಿತ್ರಗಳನ್ನು ಕೃಷಿ ಪ್ರಧಾನವಾದ ವಸ್ತುಗಳು, ವಿವಿಧ ಧಾನ್ಯಗಳ ಚಿತ್ರಗಳು ಮತ್ತು ಹೆಸರುಗಳನ್ನು ಹಾಕಿಸಿಕೊಳ್ಳುತ್ತಿದ್ದು ಚಿತ್ರಗಳಲ್ಲಿ ಸರಳ ರೇಖಾ ಮತ್ತು ವಕ್ರರೇಖಾ ಚಿತ್ರವಿನ್ಯಾಸಗಳು ಹೇರಳವಾಗಿ ಕಂಡು ಬರುತ್ತವೆ.[೨] ಬಳ್ಳಾರಿಯಲ್ಲಿ 'ಕಿಳ್ಳೇಕೇತ' ಸಮುದಾಯದ ಹೆಣ್ಣು

ಮಕ್ಕಳು ಹಚ್ಚೆ ಹುಯ್ಯುವ ಕಲೆಯನ್ನು ರೂಢಿಗತಗೊಳಿಸಿಕೊಂಡಿದ್ದಾರೆ. ಇದು ಅವರಿಗೆ ಕುಲಕಸುಬಾಗಿದೆ. ಹಚ್ಚೆ ಹೊಯ್ಯುವ ಕಲೆಗೆ ಆದಿವಾಸಿಗಳು ಕೊಟ್ಟಷ್ಟು ಮಹತ್ವ ಬೇರಾವುದಕ್ಕೂ ಕೊಟ್ಟಿಲ್ಲವೆಂದು ತೋರುತ್ತದೆ. ಹಚ್ಚೆ ಅವರ ಬಾಳಿನ ಸಂಗಾತಿಯಾಗಿದ್ದು ಹಚ್ಚೆ ಚಿತ್ರಗಳು ತಾನು ಸಾಯುವವರೆಗೆ ಇರುವಂತವು ಸತ್ತ ನಂತರ ಜೊತೆ ಬರುವಂತವೆಂಬ ಈ ಜನಪದರ ನಂಬಿಕೆ ಈ ಕಿಳ್ಳೇಕ್ಯಾತ ಸಮುದಾಯದ ಮಹಿಳೆಯರು ಹಚ್ಚೆ ಹಾಕಲು ಬೇಕಾದ ಸಲಕರಣೆಗಳನ್ನು ತಾವೇ ತಯಾರು ಮಾಡುತ್ತಾರೆ. ವಿವಿಧ ಜಾತಿಯ ಎಲೆಗಳಿಂದ ರಸವನ್ನು ತೆಗೆದು ಅದನ್ನು ಬಟ್ಟಿ ಇಳಿಸಿ ಕವಳೆ ಹಣ್ಣಿನ ಗಾತ್ರದ ಕರಿ ಬಣ್ಣದ ಚಿಕ್ಕ ಚಿಕ್ಕ ಕಾಡು ಹಣ್ಣುಗಳನ್ನು ಕುದಿಸಿ ಬಟ್ಟಿ ಇಳಿಸಿದ ರಸದಲ್ಲಿ ಸೇರಿಸಿ ಪಾಕ ಮಾಡಿಕೊಳ್ಳುತ್ತಾರೆ. ಹಚ್ಚೆ ಹಾಕುವ ಕ್ರಮ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಸಾಮಾನ್ಯವಾಗಿ ಸೂಜಿಯಿಂದ ಮೊದಲು ಆಕೃತಿ ಬರೆದುಕೊಂಡು ಕ್ರಮೇಣ ಧ್ವನಿ ಎತ್ತರಿಸಿ ಲಯಬದ್ಧವಾಗಿ ಹಾಡುತ್ತಾ ಹಚ್ಚೆ ಹಾಕುತ್ತಾರೆ. ಮತ್ತೊಂದು ವಿಶೇಷವೆಂದರೆ ಒಂದು ಸಾರೆ ಹಾಕಿದ ಹಚ್ಚೆಯನ್ನು ಯಾವ ಕಾರಣಕ್ಕೂ ಅಳಿಸುವುದಿಲ್ಲ. ದೇಹದ ಮೇಲೆ ಕಲಾಕೃತಿಗಳ ರೂಪದ ರೇಖೆಗಳು ಮೂಡಿಸುತ್ತವೆ. ಮುಖ್ಯವಾಗಿ ಈ ಹಚ್ಚೆಯ ಕಲೆಯು ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಇನ್ನು ಕಂಡು ಬರುತ್ತವೆ. [೪೯]

ರಂಗೋಲಿ :

ಕಲೆ ಬಳ್ಳಾರಿ ಜಿಲ್ಲೆಯಲ್ಲಿ ರಂಗೋಲಿ ಚಿತ್ರಕಲೆ ಎಲ್ಲಾ ಗ್ರಾಮ ನಗರಗಳಲ್ಲಿಯೂ ಕಂಡು ಬರುತ್ತಿದ್ದು ಇದು ಹೆಚ್ಚಾಗಿ ಸ್ತ್ರೀ ಪ್ರಧಾನವಾದ ಕಲೆಯಾಗಿದೆ. ರಂಗೋಲಿಯಲ್ಲಿ ಮೂರು ಪ್ರಕಾರಗಳನ್ನು ಮಾಡಿ ಅಧ್ಯಯನ ಮಾಡಬಹುದು. ಆ ಉತ್ಸವದ ರಂಗೋಲಿ ಆ ಉತ್ಸಾಹದ ರಂಗೋಲಿ ಈ ಸಂಕೀರ್ಣ ರಂಗೋಲಿ ಬದುಕಿನ ಸಂತೋಷ, ಮಂಗಳಕರ ಪ್ರಸನ್ನತೆ, ಶುಭ ಸನ್ನಿವೇಶವನ್ನು ಹೇಳುವ ಲಾಲಿತ್ಯಪೂರ್ಣ ಕಲಾಕೌಶಲ್ಯವೇ ರಂಗೋಲಿ. ಈ ಕಲೆಯನ್ನು ಸೌಂದರ್ಯ ಪ್ರಜ್ಞೆಯ ದ್ಯೋತಕವಾಗಿಯೂ ಬಳಸುತ್ತಾರೆ. ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ನಾಣ್ಣುಡಿಯಲ್ಲಿ 'ರಂಗ ಬರುತ್ತಿದ್ದಾನೆಂದ ರಂಗೋಲಿನ ಹೋಯ್ದೆ, ರಂಗ ಬರುತ್ತಾನೊ ಇಲ್ಲವೋ ಗೊತ್ತಿಲ್ಲ."[೫೦] ಎಂಬ ಮಾತಿದೆ. ಬಳ್ಳಾರಿ ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿ ಹೆಣ್ಣು ಮಕ್ಕಳು ಬೆಳಗ್ಗೆ ಎದ್ದೊಡನೆ ಹೊಸ್ತಿಲು ತೊಳೆದು ಅಂಗಳ ಸಾರಿಸಿ ರಂಗೋಲಿಯನ್ನು ಹಾಕಿ ಹೊಸ್ತಿಲು ಪೂಜೆ ಮಾಡಿ ದಿನಗೆಲಸ ಆರಂಭಿಸುವುದು ಸಂಪ್ರದಾಯವಾಗಿದೆ. ಈ ರಂಗೋಲಿ ಪದವನ್ನು ಬಿಡಿಸಿದಾಗ ಇಲ್ಲಿ 'ರಂಗ' ಎಮದರೆ ಬಣ್ಣ ವಲ್ಲಿ ಎಂದರೆ ಬಳ್ಳಿ ಎಂದರ್ಥ. ಬಣ್ಣದ ಸಾಲು ಬಣ್ಣದ ಗೆರೆಗಳ ಸಮೂಹವೇ ರಂಗೋಲಿ. ಎಂದು ಕರೆಯಬಹುದು. ಬಳ್ಳಾರಿ ಜಿಲ್ಲೆಯ ಗ್ರಾಮಾಂತರ ಜನ ವಿವಿಧ ಕಾಲಾವಧಿಯಲ್ಲಿ ರಂಗೋಲಿಯನ್ನು ಹಾಕುವ ಸಂಪ್ರದಾಯವಿದೆ. ಸಾಮಾನ್ಯವಗಿ ವಿಶೇಷ ಸಂದರ್ಭದಲ್ಲಿ ರಾತ್ರಿಯಲ್ಲಿ ತಾಂತ್ರಿಕ ಆಚರಣೆಯಲ್ಲಿ ಮಧ್ಯಾಹ್ನದಲ್ಲಿಯೂ ರಂಗೋಲಿಯನ್ನು ಹಾಕುತ್ತಾರೆ. ಈ ಪ್ರದೇಶದಲ್ಲಿರುವ ರಂಗೋಲಿಯನ್ನು ನಿತ್ಯದರಂಗೋಲಿ ನಿರ್ದಿಷ್ಟ ವಾರದ ರಂಗೋಲಿ, ತಿಂಗಳರಂಗೋಲಿ, ಮುಂತಾಗಿ ಗುರುತಿಸಬಹುದು. ಹಾಗೂ ರಂಗೋಲಿ ಹಾಕುವದನ್ನು ಎರಡು ವಿಧಾನಗಳಾಗಿ ಗುರುತಿಸಬಹುದು. [೫೧]

ಬಳ್ಳಾರಿ ನಗರದಲ್ಲಿಯೆ ಸಂಕ್ರಾಂತಿ ಹಬ್ಬದಂದು ಎಲ್ಲಾ ಮನೆಗಳ ಮುಂದೆ ಬಣ್ಣದ ಪುಡಿಯ

ರಂಗೋಲಿಯ ನಾನಾ ವಿನ್ಯಾಸಗಳನ್ನು ನೋಡಬಹುದು. ಹಾಗೂ ರಂಗೋಲಿ ಹಾಕುವ ವಿಧಾನವನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. ಮೊದಲನೆಯದಾಗಿ ಕ್ರಮ ಚುಕ್ಕೆಯಿಂದ ಚುಕ್ಕೆಗೆ ಗೆರೆಗಳನ್ನು ಕೂಡಿಸುತ್ತಾ ಅಪೇಕ್ಷಿತ ಚಿತ್ರಕಲಾ ಕೃತಿಗಳನ್ನು ತೆಗೆಯುವ ವಿಧಾನ, ಚುಕ್ಕಿಯ ರಂಗೋಲಿ ಎಂದು ಹೇಳುತ್ತಾರೆ. ಇದು ಚಿಕ್ಕವರಿಗೆ ಯಾವುದೇ ರೀತಿಯ ಚುಕ್ಕೆಗಳನ್ನು ಇಡದೇ ನೇರವಾಗಿ ರಂಗೋಲಿಯನ್ನು ಹಾಕುವ ಕ್ರಮವನ್ನು ಚುಕ್ಕೆ ರಹಿತ ರಂಗೋಲಿ ಎಂದು ಕರೆಯುತ್ತೇವೆ. ಎಲೆ, ಹೂ ಗಿಡ, ಪಕ್ಷಿ, ಪ್ರಾಣಿ, ಮುಂತಾದ ಆಕೃತಿಗಳನ್ನು ಹಾಕಲಾಗುತ್ತದೆ. ದೇವರ ಮುಂದೆ ಬರೆಯುವ ರಂಗೋಲಿಗಳಲ್ಲಿ ಪಂಚಕೋನ, ಷಟ್ಕೋನಗಳ ನಕ್ಷತ್ರಗಳು, ಶಂಖ, ಕಮಲ, ಪುಷ್ಪ, ಚಕ್ರ, ಗಂಟುಮಗ್ಗಿ, ಚಕ್ರ, ಸ್ವಸ್ತಿಕ್, ಮುಂತಾದವುಗಳು ಶುಭ ಸಂಕೇತವಾಗಿರುತ್ತವೆ. ಮನೆಯ ಮುಂದಿರುವ ತುಳಸಿಕಟ್ಟೆಯ ಹತ್ತಿರ ಇಲ್ಲವೇ ಮನೆಯ ಪಡಸಾಲೆಯ ಮೂಲೆಯಲ್ಲಿರುವ ವಿಶೇಷ ಸಂದರ್ಭಗಳಲ್ಲಿ ವಿವಿಧ ರೀತಿಯ ರಂಗೋಲಿ ಚಿತ್ರಗಳನ್ನು ರಚಿಸುತ್ತಾರೆ.[೫೨]

ಇತ್ತೀಚಿನ ದಿನಗಳಲ್ಲಿ ರಂಗೋಲಿಗೆ ವಿಶೇಷವಾದ ಸ್ಥಾನವನ್ನು ಕೊಡಲಾಗಿದೆ. ವಿಶೇಷ ಸ್ಪರ್ಧೆಗಳನ್ನು ಕೂಡ ಗ್ರಾಮಗಳಲ್ಲಿ ಏರ್ಪಡಿಸಲಾಗುತ್ತದೆ. ಯಾವ ರಂಗೋಲಿ ವಿನ್ಯಾಸಮಯವಾಗಿದ್ದು, ವಿಶೇಷತೆ ಎನಿಸುತ್ತವೆಯೋ ಅಂತಹ ರಂಗೋಲಿಗಳಿಗೆ ಬಹುಮಾನ ನೀಡುವುದರ ಜೊತೆಗೆ ಪ್ರೋತ್ಸಾಹಿಸಲಾಗುತ್ತದೆ.

ತೊಗಲುಗೊಂಬೆ ಮತ್ತು ಸೂತ್ರದ ಗೊಂಬೆ ಚಿತ್ರಕಲೆ :

ತೊಗಲುಗೊಂಬೆಯ ಆಟವು ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಬೆಳೆದು ಬಂದಿದೆ. ಇದರಿಂದ ಬಳ್ಳಾರಿ ಜಿಲ್ಲೆಯು ಹಲವು ಗ್ರಾಮಗಳಲ್ಲಿ ಈಗಲೂ ತೊಗಲುಗೊಂಬೆ ಆಟ ಆಡುವ ಜನರಿದ್ದಾರೆ.[೫೩] ಸೂತ್ರದಗೊಂಬೆಯ ರಚನೆಯ ವಿಧಾನಗಳು ಪ್ರದೇಶಿಕವಾಗಿ ಭಿನ್ನ ಭಿನ್ನವಾಗಿ ಕಂಡು ಬರುತ್ತವೆ. ಈ ಗೊಂಬೆಗಳು ತೊಗಲಿನಗೊಂಬೆಯಷ್ಟೇ ಪ್ರಮುಖವಾದುದು. ತೊಗಲಿನ ಗೊಂಬೆಗಿಂತ ಸ್ವಲ್ಪ ಭಿನ್ನವಾದುದ್ದಾಗಿದೆ. ಇವು ಇತ್ತೀಚೆಗೆ ವಸ್ತುಸಂಗ್ರಹಾಲಯಗಳಲ್ಲಿ ಮಾತ್ರ ನೋಡಬಹುದಾಗಿದೆ. ಈ ಗೊಂಬೆಗಳ ನಿರ್ಮಾಣ ಹಂತದಲ್ಲಿ ಕಟ್ಟಿಗೆಯ ಆಯ್ಕೆಗೆ ಬೇಕಾದ ಗಾತ್ರಕ್ಕೆ ಕಟ್ಟಿಗೆಯ ಬಿಡಿ ಭಾಗಗಳ ತಯಾರಿಕೆ, ಎದೆತೋಳು, ಮುಂಗೈ, ಹಸ್ತ, ತೊಡೆ, ಮುಂಗಾಲು, ಪಾದ ಹೀಗೆ ಸಿದ್ದಗೊಳಿಸಲಾಗುತ್ತದೆ. ಮುಖದ ಎಡಬಲಕ್ಕೆ ಎರಡು ಒಂದು ಕೋಲಿಗೆ ಕೈಗಳಿಗೆ ಕಟ್ಟಿದ ಸೂತ್ರಗಳ ಕಾಲಿಗೆ ಕಟ್ಟಿದ ಎರಡು ಸೂತ್ರಗಳು ಮೂರನೆಯ ಕೋಲಿಗೆ ಹೀಗೆ ಅಂಗಾಂಗಗಳ ಚಲಿಸುವಿಕೆಗೆ ಅನುಗುಣವಾಗಿ ಈ ಸೂತ್ರದ ಜೋಡಣೆ ಇನ್ನೂ ಹೆಚ್ಚಿಗೆ ಆಗುವದು. ಉಂಟು. ಈ ಸೂತ್ರಗಳಿಗೆ ಜನ, ಕಪ್ಪುದಾರ, ತಂತಿ, ನಾರಾಚಗಳನ್ನು ಬಳಸುತ್ತಾರೆ. [೫೪]

ತೊಗಲುಗೊಂಬೆಯ ತಯಾರಿಕೆಗೆ ಮೇಕೆ, ಎಮ್ಮೆ, ಒಂಟೆ ಮತ್ತು ಕುರಿ ಚರ್ಮವನ್ನು ಬಳಸುತ್ತಾರೆ. ತೊಗಲುಗೊಂಬೆಗೆ ಬಳಸುವ ಬಣ್ಣ ವಿಶೇಷವಾಗಿ ಮಾರುಕಟ್ಟೆಯಲ್ಲಿ ದೊರೆಯುವ ಯಾವುದೇ ಬಣ್ಣವನ್ನು ಬಳಸುವುದಿಲ್ಲ. ತೊಗಲುಗೊಂಬೆ ಆಟಗಾರರು ನೈಸರ್ಗಿಕವಾಗಿ ದೊರೆಯುವ ಎಲೆ ಮತ್ತು ಕಾಯಿಗಳಿಂದ ತಾವೇ ಸ್ವತಃ ತಯಾರಿಸಿಕೊಳ್ಳುವುದರಿಂದ ಬಣ್ಣಗಳು ಯಾವಾಗಲೂ ತನ್ನ ಗಟ್ಟಿತನವನ್ನು ಉಳಿಸಿಕೊಳ್ಳುತ್ತವೆ. ಎಂಬುದು ಅವರ ನಂಬಿಕೆಯಾಗಿದೆ. ತೊಗಲುಗೊಂಬೆಗಳಲ್ಲಿ ಪ್ರಮುಖವಾಗಿ ಕಪ್ಪು, ಕೆಂಪು, ನೀಲಿ, ಸಿಂಧೂರ, ಹಳದಿ, ಬಣ್ಣಗಳನ್ನು ಲೇಪಿಸುತ್ತಾರೆ. ಇಂತಹ ತೊಗಲುಗೊಂಬೆ ತಯಾರಿಕೆಯಲ್ಲಿ ಆಗುವ

ಚಿತ್ರಕಲೆಯಲ್ಲಿ ಬಳ್ಳಾರಿ ಕೌಲ್‌ಬಜಾರನ ದಿವಂಗತ ಹುಲಿಯಪ್ಪ ಅವರ ಮಗನಾದ ಎರ್ರಿಸ್ವಾಮಿ ಇವರು ಆಳೆತ್ತರದ ತೊಗಲು ಗೊಂಬೆಗಳಿಗೆ ಬಣ್ಣ ಬಳಿಯುವಲ್ಲಿ ಪ್ರಾವಿಣ್ಯತೆ ಪಡೆದಿದ್ದಾರೆ. ಅದೇ ರೀತಿ ಬಳ್ಳಾರಿಯ ಬೆಳಗಲ್, ವೀರಣ್ಣ ಕೂಡ್ಲಿಗಿ ತಾಲೂಕಿನ ಬಡ್ಡಿಡಿಕೆ ಗ್ರಾಮದ ತಿಪ್ಪೇಸ್ವಾಮಿ ರೂಪನಗುಡಿಯ ಶ್ರೀಮತಿ ಮಲ್ಲಮ್ಮ [೫೫]ಎಡ್ರಮ್ಮನಹಳ್ಳಿ ಭರಮಪ್ಪ ಮುಂತಾದವರು ತೊಗಲು ಗೊಂಬೆಯ ಮೇಲೆ ಧಾರ್ಮಿಕ ಪ್ರಭಾವವನ್ನು ಚಿತ್ರಿಸಲಾಗುತ್ತದೆ. ಧಾರ್ಮಿಕ ಕಥಾ ವಸ್ತುವಿನ ಹಿನ್ನೆಲೆಯಲ್ಲಿ ಇರುತ್ತವೆ. ಮಹಾಭಾರತದ ಚಿತ್ರ, ಭಾಗವತ, ಬುಡಕಟ್ಟು ಚಿತ್ರಗಳು ಇನ್ನು ಮುಂತಾದವುಗಳು ಇರುತ್ತವೆ. ದೇವಾದಿ ದೇವತೆಗಳ ಚಿತ್ರಗಳು ತೊಗಲು ಗೊಂಬೆಯ ಪ್ರದರ್ಶನದಲ್ಲಿ ಕಾಣಿಸಿಕೊಳ್ಳುವ ಮೊದಲ ಚಿತ್ರಗಳಾಗಿವೆ. ಇದರಲ್ಲಿ ಗಣೇಶ ಮತ್ತು ಸರಸ್ವತಿಯ ಗೊಂಬೆಗಳು ಮುಖ್ಯವಾಗಿರುತ್ತವೆ. ಆಟದ ಆರಂಭದಲ್ಲಿಯೇ ಗಣೇಶ ದೇವತಾಸ್ತುತಿಯೊಂದಿಗೆ ಆಟ ಆರಂಭವಾಗುತ್ತದೆ. ಉಳಿದ ಪಾತ್ರದ ತೊಗಲು ಗೊಂಬೆಗಳನ್ನು ನಂತರದಲ್ಲಿ ಪ್ರವೇಶಗೊಳಿಸುತ್ತಾರೆ. ದಶಾವತಾರದ ತೊಗಲುಗೊಂಬೆ ಚಿತ್ರಕಲೆಯ ವಿಷ್ಣುವಿನ ಹತ್ತು ಅವತಾರಗಳ ಕಥಾನಕವನ್ನು ಒಳಗೊಂಡಿರುತ್ತವೆ. ಹತ್ತು ಅವತಾರಗಳಿಗೆ ಸಂಬಂಧಿಸಿದ ಪ್ರಮುಖ ಪೌರಾಣಿಕ ಹಿನ್ನೆಲೆಯನ್ನು ಆಧರಿಸಿ ಚಿತ್ರ ರಚಿಸಲಾಗುತ್ತದೆ. ರಾಮಾಯಣದ ತೊಗಲು ಗೊಂಬೆಯಾಟದಲ್ಲಿ ರಾಮ, ಲಕ್ಷ್ಮಣ, ಸೀತೆ, ಹನುಮಂತ, ರಾವಣ, ಇಂದ್ರಜಿತ್, ಅಶೋಕವನದ ಸೀತೆ ವಾನರ ಸೈನ್ಯ ಮುಂತಾದ ಚಿತ್ರಗಳು ಕಂಡು ಬರುತ್ತವೆ. ಮಹಾಭಾರತದ ತೊಗಲುಗೊಂಬೆ ಆಟದ ಗೊಂಬೆಗಳಲ್ಲಿ ಮಹಾಭಾರತದ ಕಥಾನಕದಲ್ಲಿ ಬರುವ ಪ್ರಮುಖ ದೃಶ್ಯಗಳನ್ನಾಧರಿಸಿ ಚಿತ್ರ ರಂಜಿಸಲಾಗುತ್ತದೆ. ಇಲ್ಲಿ ಭೀಮ, ಶಕುನಿ, ಅರ್ಜುನ, ಕೃಷ್ಣ, ಬಕ ಕೀಚಕ ಮುಂತಾದವರನ್ನು ಕುರಿತು ಚಿತ್ರಗಳು[೫೬] ಕಂಡು ಬರುತ್ತವೆ.

ಈ ಜಿಲ್ಲೆಯಲ್ಲಿ ಕೌದಿಯ ಕಲೆಯು ತುಂಬಾ ವಿರಳವಾಗಿದೆ. ದಾರದ ಸಾಶನದಿಂದ ಚಿತ್ರವಿನ್ಯಾಸಗಳು ಕಂಡು ಬಂದರೂ ಬಾಗಲಿಗೆ ತೋರಣ, ಕೈ ಚೀಲಗಳಂತ ವಸ್ತುಗಳಲ್ಲಿ ಈ ವಿನ್ಯಾಸ ಕಾಣಬಹುದು. ಮುಖ್ಯವಾಗಿ ಚಿತ್ರಗಳು ನವಿಲು, ಹೂ, ಬಳ್ಳಿ ಚಿತ್ರಗಳನ್ನು ವಿನ್ಯಾಸಗೊಳಿಸಲಾಗಿರುತ್ತದೆ. ಇವು ಚಿತ್ರಕಲೆಯ ಒಂದು ಆಯಾಮವಾದರೆ ಚಿತ್ರಕಲೆ ಮತ್ತೊಂದು ಜಿಲ್ಲೆಯ ಕಲಾವಿದರು, ಕಲಾಶಾಲೆ ಮತ್ತೊಂದು ಆಯಾಮವಾಗಿದೆ. ಜನಪದ ಚಿತ್ರಗಳಲ್ಲದೆಯೇ ಕಲಾವಿದರು, ಕಲಾಶಾಲೆಗಳು ಕೂಡ ಈ ಬಳ್ಳಾರಿ ಜಿಲ್ಲೆಗೆ ಕೊಟ್ಟಿರುವ ಕೊಡುಗೆ ಅಪಾರ. ಜೊತೆಗೆ ಕಲೆಯನ್ನು ಉಳಿಸಿ ಬೆಳೆಸುವ ಹೊಣೆ ಹೊತ್ತಿವೆ. ಜಿಲ್ಲೆಯಲ್ಲಿ ಆರಂಭವಾದ ಚಿತ್ರ, ಶಿಲ್ಪಕಲೆಯ ತರಬೇತಿ ಕೇಂದ್ರಗಳಿಂದಾಗಿ ಅನೇಕ ಚಿತ್ರಗಾರರು, ಶಿಲ್ಪಿಗಳು, ಚಿತ್ರಕಲಾ ಶಿಕ್ಷಕರು ಈ ಪ್ರದೇಶದಲ್ಲಿ ಶಾಸ್ತ್ರೀಯ ಜ್ಞಾನ ಪಡೆದು ಕಲಾಕ್ಷೇತ್ರದಲ್ಲಿ ವಿಶಿಷ್ಟವಾಗಿ ಬೆಳೆಯಲು ಸಾಧ್ಯವಾಗಿದೆ[೫೭] ಎಂಬ ಮಾತು ಸತ್ಯವಾಗಿದೆ. ಇನ್ನೂ ಕಲಾ ಸಂಸ್ಥೆಗಳಾದ ಭವಾನಿ ಲಲಿತಕಲಾ ಮಹಾವಿದ್ಯಾಲಯ ಬಳ್ಳಾರಿ, ಶ್ರೀ. ಆರ್. ಎಲ್. ಜಾಧವ ಅವರಿಂದ ೧೯೬೪ರಲ್ಲಿ ಸ್ಥಾಪನೆ[೫೮] ಹಂಪಿ ಲಲಿತಕಲಾ ಮಹಾವಿದ್ಯಾಲಯ ಹೊಸಪೇಟೆ; ಶ್ರೀ ರಾಮಪ್ಪ ಅವರಿಂದ ೧೯೬೫ರಲ್ಲಿ ಸ್ಥಾಪನೆ[೫೯] ಭುವನೇಶ್ವರಿ ಲಲಿತಕಲಾ ಮಹಾವಿದ್ಯಾಲಯ ಹೂವಿನಹಡಗಲಿ; ಶ್ರೀ ಜೆ.ಬಿ. ವೀರಚಾರ್ ಅವರಿಂದ ೧೯೬೫ರಲ್ಲಿ ಸ್ಥಾಪನೆ[೬೦] ಇವುಗಳಿಗೆ ಸರ್ಕಾರದ ಅನುದಾನ ಕೆಲವೇ ದಿನಗಳಲ್ಲಿ ಲಭಿಸಲಿದೆ. ಪ್ರತಿ ವರ್ಷ ನೂರಾರು ವಿದ್ಯಾರ್ಥಿಗಳು ಈ ಸಂಸ್ಥೆಯಿಂದ ಶಾಸ್ತ್ರೀಯ ರೀತಿಯ ತರಬೇತಿ ಪಡೆದುಕೊಳ್ಳವುದಲ್ಲದೆ; ಸಮಕಾಲೀನ

ಸೃಜನಾತ್ಮಕ ದೃಷ್ಟಿಕೋನದ ಅಧ್ಯಯನ, ಅಧ್ಯಾಪನ ಕಲಾರಚನೆಯ ಕಾರ್ಯಗಳಿಂದ ಪರಿಣತಿ ಪಡೆದಿರುತ್ತಾರೆ[೬೧].

ಕನ್ನಡ ವಿಶ್ವವಿದ್ಯಾಲಯ ಶಿಲ್ಪ ಕಲಾವಿಭಾಗ ೧೯೯೬ರಲ್ಲಿ ಸ್ಥಾಪನೆಯಾಗಿ ನಂತರದಲ್ಲಿ ಡಿಪ್ಲೋಮಾ ತರಗತಿಗೆ ಬದಲಾಗಿ ೫ ವರ್ಷ ಕೋರ್ಸ್‌ನ್ನಾಗಿ ಪರಿವರ್ತಿಸಿ ವಿಭಾಗವನ್ನು ಬಾದಾಮಿಗೆ ವರ್ಗಾಯಿಸಲಾಯಿತು[೬೨]. ಇವುಗಳಲ್ಲದೇ ಈ ದೃಶ್ಯಕಲಾ ವಿಭಾಗದಲ್ಲಿ ೨೦ಕ್ಕೂ ಹೆಚ್ಚು ಪಿ.ಎಚ್.ಡಿ. ಪದವಿಯನ್ನು ಪಡೆದಿರುವುದು ಗಮನಾರ್ಹ, ೧೫ಕ್ಕೂ ಹೆಚ್ಚು ಪ್ರಸ್ತುತೆಯಲ್ಲಿ ಸಂಶೋಧನೆಯ ಅಧ್ಯಯನ ಮಾಡುತ್ತಿದ್ದಾರೆ. ಡಿ.ಲಿಟ್. ಪದವಿಯನ್ನು ಪಡೆದಿದ್ದಾರೆ. ೧೦ಕ್ಕೂ ಹೆಚ್ಚು ಎಂ. ಫಿಲ್. ಪದವಿಯನ್ನು ಪಡೆದುಕೊಂಡಿರುವದು, ಪ್ರಸ್ತುತದಲ್ಲಿ ೧೨ಜನ ಸಂಶೋಧನೆಯ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಈ ದೃಶ್ಯಕಲಾ ವಿಭಾಗದಲ್ಲಿ ೨೦೦೪ರಲ್ಲಿ ಎರಡು ವರ್ಷದ ಸ್ನಾತಕ ಪದವಿಗಾಗಿ ಕೋರ್ಸನ್ನು ಪ್ರಾರಂಭಿಸಿತು.

ಈ ಪದವಿಯನ್ನು ಕರ್ನಾಟಕದ ನಾನಾಭಾಗಗಳಿಂದ ಬಂದ ವಿದ್ಯಾರ್ಥಿಗಳು ಪಡೆದಿರುವರು ಮತ್ತು ಪ್ರಸ್ತುತದಲ್ಲಿ ೪೦ಕ್ಕೂ ಹೆಚ್ಚು ಸ್ನಾತಕೋತ್ತರ ಪದವಿಯನ್ನು ಪಡೆಯುತ್ತಿದ್ದಾರೆ ಜೊತೆಗೆ ಬಿ.ವಿ.ಎಡ್. ಎಂಬ ಶಿಕ್ಷಕರ ತರಬೇತಿ ಕೋರ್ಸನ್ನು ಸಹ ಈ ವರ್ಷದಿಂದ ಪ್ರಾರಂಭವಾಗಿದೆ. ಶಾಸ್ತ್ರೀಯ ರೀತಿಯ ತರಬೇತಿ ಪಡೆದುಕೊಳ್ಳುವುದಲ್ಲದೇ ಕಲಾಶಿಬಿರ, ಕಾರ್ಯಾಗಾರ, ಸಮಕಾಲೀನ ಸೃಜನಾತ್ಮಕ ದೃಷ್ಟಿಕೋನ ಅಧ್ಯಯನ, ಅಧ್ಯಾಪನ ನಡೆಯುತ್ತಿದ್ದುದು. ಕಲಾಬೌದ್ಧಿಕ ಸಾಮರ್ಥ್ಯಕ್ಕೆ ಈ ಎಲ್ಲಾ ಕಾರ್ಯಗಳು ನಡೆಯುತ್ತಿರುವುದು ಇಲ್ಲಿನ ವಿಶೇಷವಾಗಿದೆ. ಉಪನ್ಯಾಸಕರಾಗಿ, ಮುಖ್ಯಸ್ಥರಾಗಿ, ಡೀನರಾಗಿ, ಮಾರ್ಗದರ್ಶಕರಾಗಿ ಮಾನ್ಯ ಡಾ.ಎಸ್.ಸಿ.ಪಾಟೀಲರು ಮತ್ತು ಅಧ್ಯಾಪಕ ವೃಂದದವರು ಕ್ರಿಯಾಶೀಲತೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕನ್ನಡ ವಿಶ್ವವಿದ್ಯಾಲಯದ ತೆಕ್ಕೆಗೆ ೭೫ಕ್ಕೂ ಹೆಚ್ಚು ಕಲಾ ಕಾಲೇಜ್‌ಗಳು ಬಂದಿವೆ. ಈ ವಿಭಾಗವು ಭೃಹತ್ತಾಗಿ ಅಭಿವೃದ್ಧಿ ಹೊಂದುತ್ತಿರುವುದು ಸಂತಸದಾಯಕವಾದ ವಿಷಯವಾಗಿದೆ.

ಕಲಾವಿದರು :

ಎಂ.ಇ. ಗುರು, ಐ ವಿರೂಪಾಕ್ಷ, ಮರಿಯಪ್ಪ ಗುಳೆಜ್ಜಿ, ಬಿ.ಕೊಂಡಾಚಾರ್ಯ, ವೆಂಕಟೇಶ್ ಕಾಳೆ, ಡಾ. ಎಸ್.ಸಿ.ಪಾಟೀಲ್, ಕೆ.ಕೆ.ಮಾಕಾಳಿ, ವೆಂಕಟೇಶ್ ಕಾಳೆ ಸಂಡೂರು ಪರಿಸರದಲ್ಲಿ ಇವರ ಹಲವು ಕಲಾಕೃತಿಗಳನ್ನು ನೋಡಬಹುದಾಗಿದ್ದು ಕಲಾಚಟುವಟಿಕೆ ಸೃಜನಶೀಲತೆಯಿಂದ ಮಾಡಿದೆ. ಡಾ. ಎಸ್.ಸಿ.ಪಾಟೀಲರು ಹಂಪಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದಲ್ಲಿ ಕಾರ್ಯನಿರ್ವ ಹಿಸುತ್ತಿದ್ದಾರೆ ಇವರು ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವುದಲ್ಲದೆ, ೩೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಯು.ಜಿ.ಸಿ.ಯ ಪ್ರತಿಷ್ಠಿತ ನ್ಯಾಕ್ ಕೌನ್ಸಿಲ್‌ನ ರಾಷ್ಟ್ರಮಟ್ಟದಲ್ಲಿ ವಿಶ್ವ ವಿದ್ಯಾಲಯಗಳ ಸಾಮರ್ಥ್ಯ ಮತ್ತು ಮೌಲ್ಯಮಾಪನಗಳ ತಜ್ಞರ ಸಮಿತಿಯಲ್ಲಿ ಆಯ್ಕೆಯಾಗಿ ರಾಜ್ಯ ಪ್ರತಿನಿಧಿಸಿರುವುದು ಅಭಿಮಾನದ ಸಂಗತಿ[೬೩] ಮತ್ತು ಕೆ.ಕೆ.ಮಕಾಳಿ ಇವರು ಈ ಕನ್ನಡ ವಿಶ್ವವಿದ್ಯಾಲಯುದಲ್ಲಿ ವಾಣಿಜ್ಯ ಕಲಾವಿದರಾಗಿ ಕಾರ್ಯನಿರ್ವಹಿಸುತ್ತಿದ್ದು ಇವರು ಹಲವು ಕಲಾಕೃತಿಗಳನ್ನು ರಚಿಸಿದ್ದಾರೆ.

ಕಲಾ ಗ್ಯಾಲರಿ ಮತ್ತು ಕರಕುಶಲ ಕಲಾ ಕೇಂದ್ರಗಳು :

ಕಲಾವಿದರ ಕಲಾಕೃತಿಗಳ ಪ್ರದರ್ಶನಕ್ಕೆ ಶಾಶ್ವತವಾದ ಒಂದು ವ್ಯವಸ್ಥೆಯನ್ನೇ ಕಲಾ ಪ್ರದರ್ಶನಾಲಯ ಅಥವಾ ಗ್ಯಾಲರಿ ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಇಲ್ಲಿ ಕಲಾ ಪ್ರದರ್ಶನದೊಂದಿಗೆ ಕಲಾಕೃತಿಯನ್ನು ನೋಡುವ ವಿಮರ್ಶಿಸುವ ಜೊತೆಯಲ್ಲಿ ಅನೇಕ ಕಲಾಶಿಬಿರ, ಕಲಾ ಪ್ರಾತ್ಯಕ್ಷಿಕೆಗಳನ್ನು ವಿಚಾರ ಸಂಕೀರ್ಣಗಳನ್ನು ಹಮ್ಮಿಕೊಳ್ಳುತ್ತಿರುವುದರಿಂದ ಚಿತ್ರ,ಶಿಲ್ಪ, ಕಲಾಕ್ಷೇತ್ರದ ಬೆಳವಣಿಗೆ ಉತ್ತಮವಾದ ವೇದಿಕೆಯಾಗಿ ಕಲಾ ಗ್ಯಾಲರಿಗಳು ಇಲ್ಲಿ ಕೆಲಸ ಮಾಡುತ್ತವೆ[೬೪] ಕನ್ನಡ ವಿಶ್ವವಿದ್ಯಾಲಯದ ಅಕ್ಷರ ಕಟ್ಟಡದಲ್ಲಿಯ ಕಲಾ ಗ್ಯಾಲರಿ, ಬಳ್ಳಾರಿಯಲ್ಲಿಯ

ಸಾಂಸ್ಕೃತಿಕ ಸೌಮ್ಯದಲ್ಲಿಯದಲ್ಲಿರುವ ಆರ್ಟ್ ಗ್ಯಾಲರಿಗಳು ಮತ್ತು ಸರ್ಕಾರಿ ಸ್ವಾಮ್ಯದಲ್ಲಿರುವ ರಾಜ್ಯ ಪುರಾತತ್ವ ಇಲಾಖೆಯಯಿಂದ ಅಸ್ತಿತ್ವದಲ್ಲಿರುವ ಕಮಲಾಪುರದ ಮ್ಯೂಸಿಯಂ ಬಾಗಗಳಲ್ಲಿನ ಮ್ಯೂಸಿಯಂ ತುಂಬಾ ಗಮನಾರ್ಹವಾದುವುಗಳಾಗಿವೆ.[೬೫]

ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಹಿರಿಯ ಕಲಾವಿದರ ಮತ್ತು ಸಮಕಾಲೀನ ಕಲಾವಿದರ ಚಿತ್ರಕಲಾ ಕೃತಿಗಳನ್ನು ಲಲಿತಕಲಾ ಅಕಾಡೆಮಿ ಮತ್ತು ಕನ್ನಡ ವಿಶ್ವವಿದ್ಯಾಲಯದಿಂದ ಹಂಪೆ ಉತ್ಸವದಲ್ಲಿ ಪ್ರದರ್ಶನಕ್ಕಾಗಿ ಪ್ರತ್ಯೇಕ ಪ್ರದರ್ಶನಾಲಯಗಳನ್ನು ಒದಗಿಸಿಕೊಡಲಾಗುತ್ತದೆ.[೭] ಇದರಿಂದ ದೇಶದ ಅನೇಕ ಕಲಾವಿದರ ವಿವಿದ ರೀತಿಯ ಕಲಾರಚನೆಯ ತಂತ್ರ, ಶೈಲಿ, ವಿಭಿನ್ನವಾದ ಚಿತ್ರ, ಪರಂಪರೆ ಮುಂತಾದವುಗಳಿಂದ ಬೆಳೆಯುತ್ತಿರುವ ಕಲಾವಿದರಿಗೆ ಅನೇಕ ಹೊಸ ಹೊಸ ಸಾಧ್ಯತೆಗಳನ್ನು[೬೬] ಈ ಕಲಾಗ್ಯಾಲರಿ ಮತ್ತು ಪ್ರದರ್ಶನಾಲಯದಿಂದ ಒದಗಿಸಿ ಕೊಡುತ್ತವೆ.

ಕೆಲವು ಮಠ ಮಂದಿರಗಳಲ್ಲಿ ಅನೇಕ ಕಲಾಕೃತಿಗಳು ಧಾರ್ಮಿಕ ಹಿನ್ನೆಲೆಯಲ್ಲಿ ರಚನೆಯಾಗಿವೆ.[೬೭] ಉದಾಹರಣೆಗೆ ಬಳ್ಳಾರಿಯ ಸತ್ಯನಾರಾಯಣಪೇಟೆಯಲ್ಲಿರುವ ರಾಘವೇಂದ್ರ ಸ್ವಾಮಿ ಮಠದಲ್ಲಿ ಶ್ರೀನಿವಾಸಾಚಾರ್ಯ ಮತ್ತು ಕೃಷ್ಣ ಇವರಿಂದ ರಚಿತವಾದ ೬೦ ಕ್ಕೂ ಹೆಚ್ಚು ವರ್ಣಚಿತ್ರಗಳು ಇಲ್ಲಿ ಪ್ರದರ್ಶನಗೊಳ್ಳುತ್ತಿದ್ದು ಬಸವ ಭವನದಲ್ಲಿ ಚಳ್ಳುಗುರ್ಕಿಯ ಎರ‍್ರಿತಾತನ ದೇವಸ್ಥಾನದಲ್ಲಿ ನೂರಾರು ಪೌರಾಣಿಕ ವ್ಯಕ್ತಿಗಳ ಜೀವನಾಧಾರಿತ ತೈಲ ಹಾಗೂ ಜಲ ವರ್ಣ ಚಿತ್ರಗಳಿರುವುದನ್ನು ನೋಡಬಹುದಾಗಿದೆ.[೬೮] ಮತ್ತು ಹಲವು ಚಿಕ್ಕ ಪುಟ್ಟ ದೇವಾಲಯಗಳಲ್ಲಿಯೂ ಉದಾ: ಬಳ್ಳಾರಿ ದುರುಗಮ್ಮನ ದೇವಸ್ಥಾನದಲ್ಲಿ ಕನಕಗಿರಿಯ ಹನುಮಂತ ದೇವಸ್ಥಾನ ಮತ್ತು ಹಲವು ಗ್ರಾಮದೇವತೆಯ ಗುಡಿಗಳಲ್ಲಿ ಚಿತ್ರಗಳನ್ನು ನೋಡಬಹುದು. ಆದರೆ ಇವು ಕಲಾ ಪ್ರದರ್ಶನಗಳಾಗಿದ್ದರೂ ಇವುಗಳ ಉದ್ದೇಶ ಸೀಮಿತವಾಗಿದೆ.

ಜಿಲ್ಲೆಯ ಸಂಡೂರಿನ ಶ್ರೀ ಎಂ.ವೈ.ಘೋರ್ಪಡೆಯವರು ಸ್ಥಾಪಿಸಿರುವ ಸೊಂಡೂರು ಕುಶಲ ಕಲಾಕೇಂದ್ರ ಈ ಜಿಲ್ಲೆಯ ವಿಶೇಷ ಕಲಾ ತರಬೇತಿ ಕೇಂದ್ರಗಳಲ್ಲಿ ಒಂದು. ಇಲ್ಲಿ ಲಂಬಾಣಿ ಜನಾಂಗದ ಮಹಿಳೆಯರ ವಿಶಿಷ್ಟವಾದ ಕಲಾ ತರಬೇತಿ ಹಾಗೂ ಪ್ರದರ್ಶನ ಇಲ್ಲಿ ನಡೆಯುತ್ತದೆ. ಇಲ್ಲಿಂದ ತರಬೇತಿ ಹೊಂದಿದ ಬಂಜಾರ ಜನಾಂಗದ ಕೆ. ಶಾಂತುಬಾಯಿ ರಾಷ್ಟ್ರಪ್ರಶಸ್ತಿ ಪುರಸ್ಕೃತಳಾಗಿದ್ದು, ಜೊತೆಯಲ್ಲಿ ಸುಶೀಲನಗರದ ಕೆ. ಗೌರಿಬಾಯಿ, ಸಣ್ಣಸೀತವ್ವ, ಲಕ್ಷ್ಮೀಬಾಯಿ, ಎನ್.ದುರ್ಗಾಬಾಯಿ, ಕೋಗಳ ತಾಂಡಾದ






ಶ್ರೀ

ಮೋತಿಬಾಯಿ, ಗೌರಿಬಾಯಿ ಮತ್ತು ಬಂಡೆಬಸಾಪುರದ ಶಾಂತಾಬಾಯಿ, ಬೆಳಗಲ್ಲು ತಾಂಡಾದ ಧರ್ಮೀಬಾಯಿ, ಆನೇಕಲ್ ತಾಂಡಾದ ಜಾನಕಬಾಯಿ, ಕಡ್ಡಿರಾಂಪುರದ ಗಮನಿಬಾಯಿ ಮತ್ತು ಭೀಮವ್ವ [೧೯] ಮುಂತಾದವರು ಈ ಕ್ಷೇತ್ರದಲ್ಲಿ ಹೆಸರು ಮಾಡಿದ್ದು ಈ ಕರಕುಶಲವಿನ್ಯಾಸದ ವಸ್ತ್ರವು ದೇಶ ವಿದೇಶಗಳಿಗೂ ರವಾನೆಯಾಗುತ್ತಿದ್ದು ಹಂಪಿಯಲ್ಲಿ ಮಾರಾಟ ಮಾಡುವುದನ್ನು ಕಾಣಬಹುದು. ಶ್ರೇಷ್ಠಮಟ್ಟದ ಚಿತ್ರ ಶಿಲ್ಪಕಲಾಕೃತಿಗಳನ್ನು ಸಂಗ್ರಹಿಸಿದ್ದಾರೆ. ಅದರ ವಿಶೇಷ ಆಸಕ್ತಿ ಕಾರಣವಾಗಿ ಹಿರಿಯ ಕಲಾವಿದ ಶ್ರೀ ವಿ.ಟಿ.ಕಾಳೆಯವರು ಅನೇಕ ಭಿತ್ತಿ ಚಿತ್ರಗಳು, ವರ್ಣಚಿತ್ರಗಳು, ಘೋರ್ಪಡೆ ಮನೆತನದ ಹಿರಿಯರ ಚಿತ್ರಗಳೆಲ್ಲ ಸಂಗ್ರವಾಗಿದ್ದು ಸ್ವತಃ ಅಂತರಾಷ್ಟ್ರೀಯ ಖ್ಯಾತವೆತ್ತ ಛಾಯಾ ಚಿತ್ರಕಾರರಾಗಿರುವ ಶ್ರೀ ಘೋರ್ಪಡೆಯವರು ಮಾಡಿದ ಸಾಧನೆ ಜಿಲ್ಲೆಯಲ್ಲಿಯೇ ಅನುಪಮವಾದದ್ದು ಮತ್ತು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ ಸಾವಿರಾರು ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದು, ರಾಷ್ಟ್ರೀಯ ಹಸ್ತಪ್ರತಿ ಮಿಷನ್ ನವದೆಹಲಿಯಿಂದ ಹಸ್ತಪ್ರತಿ ಸಂಪನ್ಮೂಲ ಕೇಂದ್ರವೆಂದು ಪರಿಗಣಿಸಲ್ಪಟ್ಟಿದೆ.[೨೦] ಮತ್ತು ವಿಭಾಗದ ಸದಸ್ಯರು ಚಿತ್ರಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದು ಈ ಹಸ್ತಪ್ರತಿಗಳಲ್ಲಿ ಪ್ರಧಾನ ವಿಷಯ ವೀರಶೈವ ಧಾರ್ಮಿಕ ಆಚರಣೆಗೆ ಸಂಬಂಧಿಸಿದ ಉದ್ಧರಣೆ ಚಿತ್ರಸಾಹಿತ್ಯ ಕುರಿತಂತೆ ಡಾ.ಕೆ.ರವೀಂದ್ರನಾಥ ಅವರ ವೈಯಕ್ತಿಕ ಯೋಜನೆಯಲ್ಲಿ ರೇಖಾಚಿತ್ರಗಳಾಗಿ ಇಲ್ಲಿಯ ಚಿತ್ರಗಳು ರಂಜನೀಯವಾಗಿವೆ.[೨೧] ಸಂಡೂರಿನ ಶ್ರೀ ಎಂ.ವೈ.ಘೋರ್ಪಡೆಯವರ ಅರಮನೆ ವಸ್ತುಸಂಗ್ರಹಾಲಯ ಕಲಾಕೃತಿಗಳ ಪ್ರದರ್ಶನಾಲಯ ಇವೆಲ್ಲವೂ ಕಲಾ ಬೆಳವಣಿಗೆಯ ಮತ್ತೊಂದು ಆಯಾಮವಾಗಿದೆ.

ಟಿಪ್ಪಣಿಗಳು :

೧. ಡಾ. ವಿ.ಕೆ.ಗೋಕಾಕ್: ಕಲೆಯ ನೆಲೆ ಪು. ೧

೨. – ಅದೇ –

೩. – ಅದೇ –

೪. ಡಾ. ಅ.ಸುಂದರ : ಕರ್ನಾಟಕದ ಪ್ರಗಿತಿಹಾಸ ಕಾಲದ ಕಲೆ, ಪು.೧

೫. – ಅದೇ –

೬. ಡಾ. ಎಸ್.ಸಿ.ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿಶ್ವವಿದ್ಯಾಲಯ, ೧೯೯೮

೭. ಡಾ. ಬಿ.ಕೆ. ಹಿರೇಮಠ : ಕನ್ನಡ ಜನಪದ ಹಸ್ತಪ್ರತಿಗಳು, ಪಿಎಚ್.ಡಿ. ಮಹಾಪ್ರಬಂಧ

೮. ಡಾ. ಎಸ್.ಸಿ.ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಎಚ್.ಡಿ.ಮಹಾಪ್ರಬಂಧ, ೧೯೯೧

೯. . ಡಾ. ಅ.ಲ. ನರಸಿಂಹನ್: 'ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು ಪಿಎಚ್.ಡಿ.ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ–೧೯೯೮

೧೦. ಡಾ. ಸಂಪದಾಭಟ್ : ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ–೧೯೯೮

೧೧. ಡಾ. ಪುಷ್ಪಾ ದ್ರಾವಿಡ 'ಅನಿವಾಸಿ ಭಾರತೀಯಕಲಾವಿದ ದಿ. ನಿಕೋಲಸ್ ರೋರೊಕ ಜೀವನ ಮತ್ತು ಕಲಾಕೃತಿಗಳು, ಪಿಎಚ್.ಡಿ.ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ–೧೯೯೭

೧೨ ಡಾ. ಯಾದಪ್ಪ ಪರದೇಶಿ : ಉತ್ತರಕನಾಟಕದ ಭಿತ್ತಿಚಿತ್ರಕಲೆ, ಒಂದು ಅಧ್ಯಯನ, ಪಿಎಚ್.ಡಿ. ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ–೧೯೯೮

೧೩. ಡಾ. ಶಿವಾನಂದ ಬಂಟನೂರು ಕರ್ನಾಟಕದ ಭಿತ್ತಿ ಚಿತ್ರಕಲೆ ಒಂದು ಅಧ್ಯಯನ, ಪಿಎಚ್.ಡಿ. ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ–೧೯೯೮

೧೪. ಡಾ. ಗರೀಶ್ : ಬುಡಕಟ್ಟು ಚಿತ್ರಕಲೆ ಪಿ.ಎಚ್‌ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ– ೨೦೦೨

೧೫. ಡಾ. ಲಕ್ಷ್ಮಿದೇವಿ ಗವಾಯಿ : ಕಲಾವಿದೆ ಎಂ.ಎ ಚೆಟ್ಟಿಯವರ ಜೀವನ, ಕಲಾಕೃತಿಗಳು–ಒಂದು ಅಧ್ಯಯನ ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ–೨೦೦೨

೧೬. ಡಾ. ಶರಣಪ್ಪ ಕೋಲ್ಕಾರ : ಕೊಪ್ಪಳ–ಹಂಪಿ ಪ್ರದೇಶದ ಪ್ರಗಿತಿಹಾಸಿಕ ಕಾಲದ ಕಲೆ, ಪಿಎಚ್.ಡಿ.ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ–೧೯೯೮

೧೭. ಡಾ. ಸೌಮ್ಯ ಯಂತ್ರಾ ದಿ ವಿಜ್ಯುವಲ್ ಆಫ್ ಶಕರಾಫಿಲಾಸಫಿ ವಿತ್ ರೆಫೆರೆನ್ಸ್ ಟು ಕಾಟೆಂಪರರಿ. ತಾಂತ್ರಿಕ ಆರ್ಟಿಸ್ಟ್, ಪಿಎಚ್.ಡಿ.ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ–೨೦೦೨

೧೮. ಡಾ. ಪ್ರಮೀಳಾ ಲೋಚನ : ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್, ಡೆವಲೊಪಮೆಂಟ್ ಆಫ್ ರಾಗಾಮಾಲಾ ಅಂಡ್ ಕಾಟೆಂಪರರಿ ಪೇಂಟಿಂಗ್, ಪಿಎಚ್.ಡಿ. ಮಹಾ ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ–೧೯೯೮

೧೯. – ಅದೇ –

೨೦. ಎಸ್. ಚಂದ್ರಮೌಳಿ, ಬಳ್ಳಾರಿ ಜಿಲ್ಲಾ ದರ್ಶನ, ಪು-೧೩೨

೨೧. ಡಾ. ವೀರೇಶ ಬಡಿಗೇರ ಬಳ್ಳಾರಿ ಜಿಲ್ಲಾ ದರ್ಶನ, ಪು-೧೫೩

೨೨. - ಅದೇ ಪುಟ -

೨೩. ಎಸ್. ಚಂದ್ರಮೌಳಿ, ಬಳ್ಳಾರಿ ಜಿಲ್ಲಾ ದರ್ಶನ, ಪು-೧೩೩

೨೪. ಎಸ್. ಚಂದ್ರಮೌಳಿ, ಬಳ್ಳಾರಿ ಜಿಲ್ಲಾ ದರ್ಶನ, ಪು-೧೩೨

೨೫. ವಿ.ಎಸ್. ಸಂಪತ್‌ಕುಮಾರ ಆಚಾರ್ಯ ಹಂಪಿ ಪು.೧೫೩, ಸಂ-೧

೨೬. - ಅದೇ -

೨೭. - ಅದೇ -

೨೮. ಡಾ. ವೀರೇಶ್ ಬಡಿಗೇರ, ಬಳ್ಳಾರಿ ಜಿಲ್ಲಾ ದರ್ಶ, ಪು ೧೫೧

೨೯. ವಿ.ಎಸ್. ಸಂಪತ್ಕುಮಾರಾಚಾರ್ಯ, ಹಂಪಿ ಸಂಪುಟ, ಪು ೧೬೧

೩೦ ಡಾ. ಕುಂಬಾಸ: ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ ಪು ೪೩

೩೧ ಡಾ. ಚೆನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ ಪು ೧೪೬

೩೨ ಡಾ. ಚೆನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ ಪು ೪೭

೩೩ ಆರ್.ಎಚ್. ಕುಲಕರ್ಣಿ ಹಂಪಿ ಸಂಪುಟ, ಪು ೧೧೪

೩೪ ಆರ್.ಎಚ್. ಕುಲಕರ್ಣಿ ಹಂಪಿ ಸಂಪುಟ, ಪು. ೧೧೪

೩೫ ಆರ್.ಎಚ್. ಕುಲಕರ್ಣಿ ಹಂಪಿ ಸಂಪುಟ, ೧೧೫

೩೬ ಆರ್.ಎಚ್. ಕುಲಕರ್ಣಿ ಹಂಪಿ ಸಂಪುಟ, ಪು ೧೧೬

೩೭. ಡಾ. ಕುಂಬಾಸ, ಬಳ್ಳಾರಿ ಜಿಲ್ಲಾ ಸಂಸ್ಕೃತಿ ದರ್ಶನ, ಪು. ೪೩

೩೮. ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು. ೧೬

೩೯. - ಅದೇ -

೪೦. ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು . ೧೭

೪೧. - ಅದೇ -

೪೨ ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು . ೧೮

೪೩. - ಅದೇ -

೪೪. - ಅದೇ -

೪೫. ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು -೨೦

೪೬ - ಅದೇ -

ಅಧ್ಯಾಯ : ಮೂರು

ಪ್ರಾಗೈತಿಹಾಸಿಕ ಚಿತ್ರಕಲೆಯ ಐತಿಹಾಸಿಕ ಹಿನ್ನೆಲೆ

ಮನುಷ್ಯನ ವಿಕಾಸದ ಜೊತೆಗೆ ಅವನ ಭಾವನೆಯ ಹವ್ಯಾಸ, ಅಭಿರುಚಿಗಳು ಹೊರಹೊಮ್ಮಿದವು. ಅವು ವಿವಿಧ ಕಲೆ ಎಂದು ಗುರುತಿಸಲ್ಪಟ್ಟು ಇವುಗಳಲ್ಲಿ ಮುಖ್ಯವಾಗಿ ೬೪ ಕಲೆಗಳು ಎಂದು ವಾತ್ಸಯನನ ಕಾಮಸೂತ್ರ ಗ್ರಂಥದಲ್ಲಿ ಹೇಳಲಾಗಿದೆ. ಅವುಗಳಲ್ಲಿ ಚಿತ್ರಕಲೆಯು ಒಂದು. ಈ ಚಿತ್ರಕಲೆಯನ್ನು ಪ್ರಾಚೀನ ಕಾವ್ಯ ಪುರಾಣಗಳಲ್ಲಿ ಚಿತ್ರಕಲೆಯನ್ನು ಬೇರೆ ಬೇರೆ ಹೆಸರಿನಿಂದ ಕರೆದಿರುವುದು ಕಂಡು ಬರುತ್ತದೆ. ಚಿತ್ರಕಲೆಯನ್ನು ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರ ಅಭಿಲಾಷಿತಾರ್ಥ ಚಿಂತಾಮಣಿ[೧] ಮತ್ತು ವಾತ್ಸಾಯಧ್ಯನನ ಕಾಮಸೂತ್ರಗಳು 'ಅಲೇಖ್ಯಕಲೆ' ಎಂದು ಶಿವತತ್ವ ರತ್ನಾಕರ ಚಿತ್ರರೋಹಕ್ರಿಯೆ ಎಂದು ಯಶೋಧರನು ಚಿತ್ರವಿಧಿ ಎಂದು ಕ್ರಿ.ಶ. ೧೧೧೬ ರ ಶಾಸನವೊಂದರಲ್ಲಿ ಚಿತ್ರಕರ್ಮ[೨] ಎಂದು ಕರೆದಿದ್ದಾರೆ.

ಮಾನವನು ತನ್ನ ಭಾವನೆಗಳನ್ನು ಚಿತ್ರದ ಮೂಲಕ ಅಭಿವ್ಯಕ್ತಿಸುತ್ತಿದ್ದು, ಆದಿಮಾನವನಿಂದ ಹಿಡಿದು ಆಧುನಿಕದ ವರೆಗಿನ ಕಲೆಯು ಹಂತ ಹಂತವಾಗಿ ಬೆಳಯುತ್ತಾ ಬಂದಿದೆ. ಆಯಾ ಕಾಲದ ಕಲೆಯು ಆಯಾ ಕಾಲದ ಸಮಕಾಲೀನ ಕಲೆಯಾಗಿರುತ್ತದೆ. ವಿವಿಧ ಜನಾಂಗ, ವಿವಿಧ ಪರಿಕರ ವಿವಿಧ ಪರಿಸರ ವಿವಿಧ ಘಟನಾವಳಿಗಳು ಮುಂತಾದವುಗಳ ಮೇಲೆ ಚಿತ್ರಕಲೆಯ ರಚನಾಸ್ಥಿತಿ ಇರುತ್ತದೆ. ಕಲೆಯು ಹೇಗೆ ಹುಟ್ಟಿತು? ಯಾವಾಗ ಹುಟ್ಟಿತು? ಎನ್ನುವ ಪ್ರಶ್ನೆ ಸಹಜ ಕಲೆ ಎನ್ನುವುದು ಜೀವನಾವಶ್ಯಕತೆಯಲ್ಲಿ ಮುಖ್ಯ ಎನ್ನುವುದು ಪ್ರಾಚೀನ ಚಿತ್ರಕಲೆಗಳಿಂದ ತಿಳಿದು ಬರುತ್ತದೆ. ಏಕೆಂದರೆ ಕಲೆ ಎನ್ನುವುದು ಮಧ್ಯ ಅಥವಾ ಇಂದಿನದಲ್ಲ. ಮಾನವನ ಹುಟ್ಟಿನಿಂದ ಬಂದಿದ್ದು, ಎಂದು ಹೇಳಬಹುದು ಆದಿ ಮಾನವನ ಚಿತ್ರಗಳನ್ನು ನೋಡುತ್ತಾ ಬಂದರೆ ತನ್ನ ವಿಕಾಸದ ಪರಿಯನ್ನು ಈ ಚಿತ್ರಗಳಿಂದ

೪೭. ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು ೨೩

೪೮. ಡಾ. ಎಸ್.ಸಿ ಪಾಟೀಲ ಜನಪದ ಚಿತ್ರಕಲೆ, ಪು.೮

೪೯. ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು –೩೫.

೫೦. ಡಾ. ಎಸ್. ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ ಪು. ೨೧೯

೫೧. ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು –೩೫

೫೨. ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು –೩೫

೫೩ – ಅದೇ –

೫೪. ಡಾ. ಎಸ್. ಸಿ. ಪಾಟೀಲ ಜನಪದ ಕಲೆ ಪು.೧೪

೫೫. ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು –೩೫

೫೬. ಡಾ. ಎಚ್.ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು –೩೬

೫೭. ಡಾ. ಎಸ್. ಸಿ. ಪಾಟೀಲ ಜನಪದ ಕಲೆ ಪು.೧೪

೫೮. – ಅದೇ –

೫೯. – ಅದೇ –

೬೦. ಡಾ. ಎಸ್.ಸಿ. ಪಾಟೀಲ, ಬಳ್ಳಾರಿ ಜಿಲ್ಲಾ ದರ್ಶನ ಪು.೧೪೨

೬೧. – ಅದೇ –

೬೨. – ಅದೇ –

೬೩. ಡಾ. ಎಸ್. ಸಿ. ಪಾಟೀಲ್, ಬಳ್ಳಾರಿ ಜಿಲ್ಲಾ ದರ್ಶನ, ಪು ೧೪೭

೬೪. ಡಾ. ಎಸ್. ಸಿ. ಪಾಟೀಲ್, ಬಳ್ಳಾರಿ ಜಿಲ್ಲಾ ದರ್ಶನ, ಪು ೧೮೩

೬೫. ಡಾ. ಎಸ್. ಸಿ. ಪಾಟೀಲ್, ಬಳ್ಳಾರಿ ಜಿಲ್ಲಾ ದರ್ಶನ, ಪು ೧೪೩

೬೬. ಡಾ. ಎಸ್. ಸಿ. ಪಾಟೀಲ್, ಬಳ್ಳಾರಿ ಜಿಲ್ಲಾ ದರ್ಶನ, ಪು ೧೪೪

೬೭. – ಅದೇ –

೬೮. – ಅದೇ –

೬೯. ಡಾ. ಎಸ್. ಸಿ. ಪಾಟೀಲ್, ಬಳ್ಳಾರಿ ಜಿಲ್ಲಾ ದರ್ಶನ, ಪು ೧೪೫

೭೦. – ಅದೇ –

೭೧ – ಅದೇ –

ತಿಳಿಯಬಹುದು. ಈ ಚಿತ್ರಗಳಿಂದ ಅವನ ರೂಪ ವಿನ್ಯಾಸ ಜೀವನ ಶೈಲಿಯನ್ನು ಗುರುತಿಸಬಹುದಾಗಿದೆ. ಪ್ರಾಚೀನ ಚಿತ್ರಗಳು 'ಚಿತ್ರಲಿಪಿ' ಎಂದು ಹೇಳಬಹುದು. ಕಲೆಯ ಉಗಮಕ್ಕೆ ಹಲವು ಕಾರಣಗಳವೆ. ಮನುಷ್ಯ ತನ್ನ ನೆರಳನ್ನು ನೋಡಿ ಅದನ್ನು ಸೆರೆ ಹಿಡಿಯಬೇಕು ಎನ್ನುವ ಆಲೋಚನೆ ಬಂದಿರಬಹುದು ಆ ನೆರಳೆ ಅವನ ಹಿಂದಿನ ಸಂಬಂಧ ಚಿತ್ರವಾಗಿರಬಹುದು ಆತ ತದ ನಂತರ ಪ್ರಾಣಿ, ಪಕ್ಷಿ, ಮನುಷ್ಯಾಕೃತಿ ಮುಂತಾದವು ವಸ್ತುವಿಷಯವಾಗಿರಬಹುದು. ಹಲವಾರು ವಿದ್ವಾಂಸರ ಶೋಧನೆ–ಸಾಧನೆಗಳಿಂದ ತಮ್ಮ ಅಭಿಪ್ರಾಯಗಳನ್ನು ಹಲವು ಹಂತದ ಚಿತ್ರಗಳ ಮೇಲೆ ಕಾಲಘಟ್ಟಗಳಲ್ಲಿ ಗುರುತಿಸುತ್ತಾರೆ.

ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ಮುಖ್ಯ ವಿಭಾಗಗಳನ್ನಾಗಿ ಮಾಡ ಲಾಗಿದೆ. ಮೊದಲನೆಯದು ಅಕ್ಷರ ಜ್ಞಾನವಿಲ್ಲದ ಹಂತ ಅಥವಾ ಪ್ರಾಗಿತಿಹಾಸ ಅಥವಾ ಪೂರ್ವ ಇತಿಹಾಸ ಎಂದು ಎರಡನೆಯದು ಅಪಾರ ಜ್ಞಾನವಿದ್ದ ಹಂತ ಅಥವಾ ರಾಜ ಮಹಾ ರಾಜರ ಕಾಲ ಅಥವಾ ಇತಿಹಾಸಕಾಲವೆಂದು ಹೇಳಬಹುದು.[೩] ಇವುಗಳಲ್ಲಿ ಪ್ರಾಗೈತಿಹಾಸದ ಕಾಲಮಾನ ಸುದೀರ್ಘವಾದುದಾಗಿದ್ದು ಇಂದಿಗೆ ಸುಮಾರು ೫ ಲಕ್ಷ ವರ್ಷಗಳಿಂದ ಕ್ರಿಸ್ತಶಕೆಯ ಆರಂಭದವರೆಗೂ ಅದು ರೂಢಿಯಲ್ಲಿದ್ದಿತೆಂದು[೪] ವಿದ್ವಾಂಸರ ಅಭಿಪ್ರಾಯ. ಭಾರತ ಪ್ರಾಗೈತಿಹಾಸದ ಅಧ್ಯಯನದ ಆರಂಭ ಕರ್ನಾಟಕದ ಪ್ರದೇಶದಿಂದಲೇ ಆಗಿದೆ. ಎಂಬುದು ಒಂದು ಪ್ರಮುಖವಾದ ವಿಷಯ. ೧೮೩೬ ರಲ್ಲಿ ಮಾಡಿದ ಕುಡತಿನಿ ಮತ್ತು ಕಪ್ಪಗಲ್ ಬೂದಿದಿಬ್ಬ ನೆಲೆಗಳು ಪ್ರಪ್ರಥಮ ಶೋಧನವಾಗಿವೆ.[೫] ೧೮೭೨ ರಲ್ಲಿ ವಿಲಿಯಂ ಪ್ರೆಸರ್ ಅವರಿಗೆ ಬಳ್ಳಾರಿಯ ಉತ್ತರ ಬೆಟ್ಟದಲ್ಲಿ "ನವಿಲುಗುಡ್ಡ" ಎನ್ನುವ ಸ್ಥಳದಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ವಾಸ್ತವ್ಯದ ನೆಲೆಯು ದೊರೆತಿದ್ದು, ಸಂಗನಕಲ್ಲು ನೆಲೆಯೆಂದು ಪ್ರಸಿದ್ದಿಯಾಗಿದ್ದನ್ನು ನಾವು ತಿಳಿದಿದ್ದೇವೆ.[೬] ಇದು ನಿಜ ಎನಿಸುತ್ತದೆ. ಏಕೆಂದರೆ ಸಂಗನಕಲ್ಲುನಲ್ಲಿ ಈಗಲೂ ನವಿಲುಗಳು ತುಂಬಾ ಇವೆ. ಆ ಪ್ರದೇಶದಲ್ಲಿ ಈಗಲೂ ನಾವು ನೋಡಬಹುದಾಗಿದೆ. 'ರಾಬರ್ಟ್ ಬ್ರೂಸ್' ಪೂಟ್‌ರವರ ಹಳೆಯ ಶಿಲಾಯುಗದ ಉಪಕರಣಗಳ ಶೋಧನ ಭಾರತದ ಪುರಾತತ್ವ ನೆಲೆಗಳ ಶೋಧನೆಯ ಮೈಲುಗಲ್ಲಾಗಿದ್ದು ಇವರನ್ನು ಭಾರತದ ಪ್ರಾಗೈತಿಹಾಸದ 'ಪಿತಾಮಹ'[೭] ಎಂದು ಕರೆಯುತ್ತಾರೆ.

ಈ ಪ್ರಾಗೈತಿಹಾಸಕಾಲಮಾನವನ್ನು ಆಗ ನಿತ್ಯ ಬಳಕೆಯಲ್ಲಿದ್ದ ವಸ್ತುವಿನ ಆಧಾರದಿಂದ ಶಿಲಾಯುಗ ಸಂಸ್ಕೃತಿ ಮತ್ತು ಲೋಹಯುಗ ಸಂಸ್ಕೃತಿ ಎಂದು ಎರಡು ವಿಭಾಗಗಳನ್ನಾಗಿ ಮಡಲಾಗಿದೆ[೮] ಈ ಶಿಲಾಯುಗ ಸಂಸ್ಕೃತಿಯ ಹಂತವನ್ನು ಅವಶೇಷ ಹಾಗೂ ಅವುಗಳ ಬೆಳವಣಿಗೆ ಮತ್ತು ಕುಶಲತೆಯನ್ನನುಸರಿಸಿ ಹಳೆಯ ಶಿಲಾಯುಗ ಸಂಸ್ಕೃತಿ, ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ಮತ್ತು ನೂತನ ಶಿಲಾಯುಗ ಸಂಸ್ಕೃತಿ ಎಂದು ವರ್ಗೀಕರಿಸಲಾಗಿದೆ. ಅಧ್ಯಯನದ ತೀವ್ರತೆ ಹಾಗೂ ಪ್ರತಿಯೊಂದು ಹಂತಗಳಲ್ಲಾದ ಬದಲಾವಣೆಗಳನ್ನು ಗುರುತಿಸಿ ಹೊಸ ಹೊಸ ವಿಷಯಗಳ ಬಗೆಗೆ ತಿಳಿಯಲು ಸಾಧ್ಯವಾಗಿದೆ. ಹಾಗೆಯೇ ಹಳೆಯ ಶಿಲಾಯುಗವನ್ನು ಮೂರು ಉಪಗುಂಪುಗಳಾಗಿ ವಿಭಾಗಿಸಿ ಆದಿ ಹಳೆಯ ಶಿಲಾಯುಗ ಸಂಸ್ಕೃತಿ, ಎಂದು ವಿಭಾಗಿಸಲಾಗಿದೆ[೯].

ಇವುಗಳ ಆಧಾರದ ಮೇಲೆ ಕಂಡುಹಿಡಿಯಲಾದ ಚಿತ್ರಗಳನ್ನು, ವೈಜ್ಞಾನಿಕ ಪರೀಕ್ಷೆಗೆ ಅಳವಡಿಸಿ ಬಂದಂತಹ ಉತ್ತರದಿಂದ ಈ ಕಾಲಘಟ್ಟಕ್ಕೆ ಸೇರಿದವು ಎಂದು ಹೇಳಲಾಗುತ್ತದೆ. ಬಳ್ಳಾರಿಯಲ್ಲಿ ಸಿಕ್ಕಂತ

ಪ್ರಾಗೈತಿಹಾಸಿಕ ಚಿತ್ರಗಳು ಲೋಹಯುಗ ಸಂಸ್ಕೃತಿಗೆ ಸಂಬಂಧಿಸಿದಂತ ಚಿತ್ರಗಳು ಹೆಚ್ಚಾಗಿ ಕಾಣುವವು. ಈ ಲೋಹಯುಗ ಸಂಸ್ಕೃತಿಯ ಆರಂಭದಲ್ಲಿ ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯೂ ಇದ್ದುದು ತಿಳಿಯುತ್ತದೆ ಹಾಗಾಗಿ ಮೊದಲ ಹಂತವನ್ನು ಶಿಲಾ–ತಾಮ್ರಯುಗ ಸಂಸ್ಕೃತಿ ಎಂದು, ನಂತರದ ಹಂತದಲ್ಲಿ ಕಬ್ಬಿಣವನ್ನು ಎಲ್ಲಾ ಕಾರ್ಯಗಳಿಗೂ ಬಳಸುವುದರ ರೂಪಿಸಿದ್ದು, ಈ ಹಂತವನ್ನು ಕಬ್ಬಿಣಯುಗದ ಬೃಹತ್ ಶಿಲಗೋರಿ ಸಂಸ್ಕೃತಿ ಎಂದು ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ[೧೦]. ಈ ಕಾಲಘಟ್ಟದ ಹಿಂದೆ ಮಾನವನ ಬೌದ್ಧಿಕ ಬೆಳವಣಿಗೆಯ ಸೂಕ್ಷ್ಮತೆಯನ್ನು ಅರಿಯಬಹುದು. ಈ ಸಂಸ್ಕೃತಿಯ ಸಂಶೋಧನೆಗೆ ಒಳಪಟ್ಟ ಸಣ್ಣ ವಿಷಯವು ಕೂಡ ಹಿಂದೆ ಮುಂದೆ ಹಲವು ಸಂಗತಿಗಳಿಗೆ ಸಂಬಂಧಪಟ್ಟಿರುತ್ತವೆ. ಈ ಪ್ರಾಗೈತಿಹಾಸಿಕ ಚಿತ್ರಕಲೆಯು ಕೂಡ ಹಲವು ಸಂಗತಿ, ಹಲವು ವಸ್ತುಗಳಿಗೆ, ಸಂಬಂಧಪಟ್ಟಿರುತ್ತದೆ.

ಈ ಕಲಾತ್ಮಕತೆ ಪ್ರೇರಣೆಗೆ ಈ ವಸ್ತುಗಳ ವಿಷಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಐತಿಹಾಸಿಕ ಪರಿಚಯ ಸ್ಥಳವಾಗಿ ನೋಡಲಾಗಿದೆ.

ಹಿನ್ನೆಲೆ:

ಈ ಮೇಲಿನ ಕಾಲಘಟ್ಟಗಳಲ್ಲಿನ ಮಾನವನ ಸೌಂದರ್ಯದ ಪ್ರಜ್ಞೆ ಅಭಿವ್ಯಕ್ತಿ ಈ ಚಿತ್ರಗಳಲ್ಲಿಒಂದೆ ಅಲ್ಲದೆ ಹಲವು ಮಣ್ಣಿನ ಗೊಂಬೆಗಳಲ್ಲಿ ಕಲ್ಲಿನ ಆಯುಧಗಳಲ್ಲಿ, ಮಡಿಕೆ ಕುಡಿಕೆಗಳಲ್ಲಿ ಕಲ್ಲಾಸರೆ, ಗವಿ ವರ್ಣಚಿತ್ರಗಳಲ್ಲಿ ಸೂಚಿತವಾಗಿದ್ದು, ವಿಶೇಷವಾಗಿ ಸಂಗನಕಲ್ಲಿನಲ್ಲಿಯೂ ದೊರೆತಿವೆ. ತುಂಗಭದ್ರಾ ಮೇಲ್ದಂಡೆ ಪ್ರದೇಶದಲ್ಲಿ ಹೆಚ್ಚು ಕಪ್ಪು ಪಾತ್ರೆಗಳೇ ದೊರೆತಿವೆ. ಇವುಗಳ ಮೇಲ್ವರ್ಣವು ತೀರ ತೆಳ್ಳಗಿದ್ದು ಪಾತ್ರೆಯು ಒರಟಾಗಿ ಕಾಣಿಸುತ್ತದೆ.[೧೧] ಹಂತ ಹಂತವಾಗಿ ಕೈಯಿಂದ ಮಾಡಿದ ದಪ್ಪನೆಯ ದೊಡ್ಡ ದೊಡ್ಡ ಗುಡಾಣಗಳು ಮಧ್ಯಮ ಆಕಾರದ ಉಬ್ಬಿದ ಹೊಟ್ಟೆಯ ಮತ್ತು ಹೊರಚಾಚಿದ ಉದ್ದನೆಯ ಹಿಡಿಕೆಯುಳ್ಳ ಗಡಿಗೆಗಳು. ಅಗಲ ಬಾಯುಳ್ಳ ಬಟ್ಟಲುಗಳು, ಭುಜದ ಭಾಗದಲ್ಲಿ ಕೊಳವೆಯುಳ್ಳ ಪಾತ್ರೆಗಳು, ಅರ್ಧಗೋಲಾಕೃತಿಯ ಬಟ್ಟಲು ತಟ್ಟೆ, ನಾನಾ ವಿಧದ ಮುಚ್ಚಳ ಇವೇ ಮೊದಲಾದ ಮಣ್ಣಿನ ಪಾತ್ರೆಗಳು ದೊರೆತಿವೆ.

ದೊಡ್ಡ ಗುಡಾಣವನ್ನು ಹಸ್ತಿ ಸಂಚಯನಕ್ಕೋಸ್ಕರ ಶವಸಂಸ್ಕಾರದಲ್ಲಿಯೂ ಕೂಡ ಉಪಯೋಗಿಸುತ್ತಿದ್ದರು. ಇಂತಹ ಗುಡಾಣಗಳ ಬುಡವನ್ನು ಹೊಡೆದು ಅದರಲ್ಲಿ ಇನ್ನೊಂದರ ಬಾಯನ್ನು ಸೇರಿಸುವ ಹಾಗೆ ಮೂರು ಅಥವಾ ನಾಲ್ಕು ಗುಡಾಣಗಳನ್ನು ಜೋಡಿಸಿ ಶವ ಕುಣಿಯು ತೆಕ್ಕಲಕೋಟೆಯಲ್ಲಿ ದೊರೆತಿದೆ. ಉಳಿದ ಪಾತ್ರೆಗಳಲ್ಲಿ ಆಹಾರಧಾನ್ಯ, ನೀರು ಮೊದಲಾದ ಪಾನೀಯಗಳನ್ನು ಶೇಖರಿಸಿಡಲಾಗುತ್ತಿತ್ತು.[೧೨] ಇಂತಹ ಮಡಿಕೆಗಳ ತಯಾರಿಕಾ ಕ್ರಮ ಅತ್ಯಂತ ಕಲಾತ್ಮಕವಾಗಿರುತ್ತಿತ್ತು. ತುಂಗಭದ್ರಾ ಮೇಲ್ದಂಡೆ ಪ್ರದೇಶದಲ್ಲಿ ದೊರೆತಿರುವ ಮಡಿಕೆಗಳ ಮೇಲೆ ಯಾವುದೇ ರೀತಿಯ ವರ್ಣ ಚಿತ್ರಗಳಿರುವುದಿಲ್ಲ. ಆದರೆ ಬಟ್ಟಲು, ತಟ್ಟೆ, ಮಡಿಕೆಗಳ ಅಂಚಿನಲ್ಲಿ ಕೆಮ್ಮಣ್ಣಿನ ಬಣ್ಣವನ್ನು ಹಚ್ಚಿರುತ್ತಾರೆ. ಇಂತಹ ಮಣ್ಣಿನ ಪಾತ್ರೆಗಳನ್ನು ಬಟ್ಟೆಯಲ್ಲಿಟ್ಟು ಸುಟ್ಟ ನಂತರ ಒಂದು ರೀತಿಯ ಅಲಂಕರಣವನ್ನು ಮಾಡಲಾಗಿದೆ. ಕನಿಷ್ಟ ಸುಮಾರು ೪೦,೦೦೦ ವರ್ಷದಷ್ಟು ಪ್ರಾಚೀನ ಕಾಲದಿಂದಲೇ ಅಂದರೆ ಅಂತ್ಯ ಹಳೆಯ ಶಿಲಾಯುಗ ಹಂತದಿಂದ ಇಂತಹ ವಿವಿಧ ಪ್ರಕಾರಗಳ ಕಲಾಕೃತಿಗಳು ಸೃಷ್ಟಿಯಾಗುತ್ತಾ ಬಂದವು.[೧೩]

ಎಂದು ಇತಿಹಾಸ ತಜ್ಞರ ಅಭಿಪ್ರಾಯ ಇವುಗಳಲ್ಲಿ ಸೌಂದರ್ಯ ಸೂಕ್ಷ್ಮತೆ ಅಡಗಿರುವುದು ತಿಳಿಯುತ್ತದೆ. ಇವುಗಳ ಕರಕುಶಲತೆಯ ಕಲೆ ಸೌಂದರ್ಯ ಒಂದಾದರೆ ಸೌಂದರ್ಯಕ್ಕೆ ಪ್ರತ್ಯೇಕವಾಗಿ ಚಿತ್ರಕಲೆಯ ಸೃಷ್ಟಿಗೆ ಮತ್ತೊಂದು ಕಾರಣವಾಗಿದೆ. ಈ ಚಿತ್ರಕಲೆ ಸೃಷ್ಟಿ ಎಂದಿನಿಂದ ಎನ್ನುವುದಕ್ಕೆ ವಿಶ್ವದಲ್ಲಿ ಸಿಕ್ಕ ನಾನಾ ಪ್ರಾಗೈತಿಹಾಸಿಕ ಚಿತ್ರಗಳ ಮೇಲೆ ನಾನ ಕಾಲಘಟ್ಟಗಳನ್ನು ಗುರುತಿಸಲಾಗಿದೆ. ವಿಶ್ವದಲ್ಲಿಯೇ ಪ್ರಥಮವಾಗಿ ಸಂಶೋಧನೆಯು ಬಹು ಕುತೂಹಲಭರಿತವಾದದ್ದಾಗಿದೆ. ೧೮೩೭ ರಲ್ಲಿ ಸರ್ ಜಾರ್ಜ್ ಗ್ರೇ ಅವರಿಂದ ಸಿಡ್ನಿ (ಆಸ್ಟ್ರೇಲಿಯಾ) ವರ್ಣಚಿತ್ರಗವಿಗಳ ಶೋಧನೆ ಪ್ರಥಮವಾದರೂ ಬಹುಶಃ ೧೮೭೯ರ ಅಲ್ತಮೀರ(ಸ್ಪೇನ್) ದಲ್ಲಿಯ ವರ್ಣ ಚಿತ್ರಿತ ಗವಿಗಳ ಶೋಧನೆ ಇತಿಹಾಸದಲ್ಲಿಯೇ ವಿಶೇಷ [೧೪] ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ಬ್ರಿಟನ್ನಿನ ಪ್ರಾಚೀನ ವಸ್ತುಶಾಸ್ತ್ರಜ್ಞ ಹಾರ್ವರ್ಡ್ ಕಾಡರ್, ಸ್ಪೇನ್‌ನ ಅಲ್ಟಾಮಿಕ್ ಮತ್ತು ಫ್ರಾನ್ಸ ನ ಲಸ್ಕಾನ್‌ನಲ್ಲಿ ಇರುವ ಇತಿಹಾಸಪೂರ್ವ ಗುಹಾಂತರ ವರ್ಣಚಿತ್ರಗಳನ್ನು ಪತ್ತ ಹಚ್ಚಿದ್ದ. ಎಂಬ ಹೇಳಿಕೆ ಇತ್ತೀಚಿನ ದಿನಪತ್ರಿಕೆಯೊಂದರಲ್ಲಿ ಈ ಎರಡೂ ಗುಹಾಂತರ ವರ್ಣಚಿತ್ರಗಳನ್ನು ಮಕ್ಕಳು ಪತ್ತೆ ಹಚ್ಚಿದ್ದರ ಎಂದು ಅಲ್ಟಾಮಿರಾದ ವರ್ಣಚಿತ್ರಗಳನ್ನು ಹವ್ಯಾಸಿ ಪ್ರಾಚೀನ ವಸ್ತುಶಾಸ್ತ್ರಜ್ಞೆಯ ಪ್ರತಿ ಮರಿನಾ ಡಿ ಸೌತು ವೊಲಾ ಮತ್ತು ಲಸ್ಕಾನ್ ನ ವರ್ಣ ಚಿತ್ರಗಳನ್ನು ಹದಿ ಹರೆಯದ ಮಾರ್ಕೆಲ್ ರೊವಿಡ್ಯಾಟ್ ಮತ್ತು ಆತನ ಇಬ್ಬರು ಪುತ್ರರು ಕಂಡು ಹಿಡಿದಿದ್ದರು.[೧೫] ಎಂದು ಪತ್ರಿಕೆ (ಪ್ರಜಾವಾಣಿಯ) ಸರಿಯೋ-ತಪ್ಪೋ ಎನ್ನುವ ಭಾಗದಲ್ಲಿ ತಿಳಿಸಲಾಗಿದೆ.

ಅ ಸುಂದರವರ ಅಭಿಪ್ರಾಯವು ಕೂಡ ಒಂದೇಯಾಗಿದೆ. ಡಾಸೆಮಾರ್ಸೆಲಿನೊ ಸೌತವೊಲನು ತನ್ನ ಅಗೆತದಲ್ಲಿ ದೊರೆತ ಕಲ್ಲಿನ ಉಪಕರಣಗಳನ್ನು ಮಾಡಿದ ಜನರೇ ಆ ಚಿತ್ರಗಳನ್ನು ಬಿಡಿಸಿರುವರೆಂದು ತರ್ಕಿಸಿ, ಅವುಗಳ ಬಗೆಗೆ ೧೮೮೦ರಲ್ಲಿ ಒಂದು ಲೇಖನವನ್ನು (ಬ್ರೀಫ್ ನೋಟ್ಸ್ ಆನ್ ಸಮ್ ಪ್ರಿ ಹಿಸ್ಟಾರಿಕ್ ಅಜ್ಜಕ್ಟ್ಸ್ ಆಫ್ ದಿ ಪ್ರಾವಿನ್ಸ್ ಸಂತದರೆಷಿ) ಪ್ರಕಟಿಸಿದನು. ಆದರೆ ಗತಕಾಲದ ಸಸ್ಯ, ಪ್ರಾಣಿ ಪಡಿಯಚ್ಚು ಶಾಸ್ತ್ರದಲ್ಲಿ ನಿಷ್ಣಾತನಾದ ಫ್ರೆಂಚ್ ಶಾಸ್ತ್ರಜ್ಞನೊಬ್ಬನು, ಆ ಚಿತ್ರಗಳು ಪ್ರಾಗೈತಿಹಾಸಿಕ ಕಾಲದ್ದಲ್ಲವೆಂದು ವಾದಿಸಿದನು. ಇತರ ಪುರಾತತ್ವ ಶಾಸ್ತ್ರಜ್ಞರೂ ಇವನ ಅಭಿಪ್ರಾಯವನ್ನು ಅನುಮೋದಿಸಿದರು. ಅವೆಲ್ಲಾ ಯಾರೋ ಕಲಾಭ್ಯಾಸಿ ಹುಡುಗರು ಇಲ್ಲ ರೋಮ್ ದೇಶದ ಸೈನಿಕ ತುಕಡಿಗಳು ಅಲ್ಲೆಲ್ಲಾದರೂ ಬಿಡಾರ ಮಾಡಿದ್ದಾಗ ಈ ಚಿತ್ರಗಳನ್ನು ಬಿಡಿಸಿದ್ದಿರಬೇಕೆಂದು ಊಹಿಸಿದರು. ಇದು ಅಷ್ಟಕ್ಕೆ ನಿಲ್ಲಲಿಲ್ಲ. ಮೊರ್ಸಲಿನೊ ಅವುಗಳನ್ನು ತಾನೆ ಬಿಡಿಸಿ ಪ್ರಾಗೈತಿಹಾಸಿಕ ಕಾಲದ್ದೆಂದು ಹೇಳಿ ಪಂಡಿತರನ್ನು ಮೋಸಗೊಳಿಸುತ್ತಿರುವನೆಂದು ಸಂಶಯಪಟ್ಟರು. ಬಹುಶಃ ಈ ತಜ್ಞರು ತಮ್ಮ ದೇಶದ ದೋರ್ದೋಜ್ಞಯ ಶೋಧನೆಗಳ ಹಿರಿಮೆಯ ಮೇಲುಗೈಯಾಗಿರಬೇಕೆಂದು ಪಕ್ಷಪಾತ ಬುದ್ಧಿಯಿಂದ ಕ್ರಮಬದ್ಧವಾಗಿ ಮಾರ್ಸೆಲಿನೊನ ಶೋಧನೆಗಳನ್ನು ಆ ರೀತಿ ಅವಹೇಳನ ಮಾಡಿದರೆಂಬ ಅಭಿಪ್ರಾವಿದೆ[೧೬]. ಆದರೆ ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಫ್ರಾನ್ಸಿನಲ್ಲಿಯೂ ಅಲ್ತಮಿರ ತರಹದ ವರ್ಣಚಿತ್ರಗಳು ಶೋಧಿಸಲ್ಪಟ್ಟವು[೧೭].

ಇವುಗಳು ಬಹುಮಟ್ಟಿಗೆ ಅಲ್ತಮಿರ ಚಿತ್ರಗಳಿಗೆ ಹೋಲಿಕೆಯಾಗುತ್ತಿತ್ತು. ಆದ್ದರಿಂದ ತಜ್ಞರು ಅಲ್ತಮಿರ ಚಿತ್ರಗಳ ಕಡೆ ಗಮನಹರಿಸಬೇಕಾಯಿತು. ವಿಮಿತಿ ಕಾರ್ಥ್ಯಲ್ಯಾಕ್ ಮತ್ತು ಹೆನ್ರಿ ಬ್ರಾಲ್ ಅವರುಗಳು ೧೯೦೧ರಲ್ಲಿ ಅಲ್ತಮಿರ ಚಿತ್ರಗಳನ್ನು ಮತ್ತೆ ಪರಿಶೀಲಿಸಿದರು. ಮಾರ್ಸೆಲಿನೋ ಅಭಿಪ್ರಾಯಗಳು ಸರಿಯೆಂದು

ಹೇಳಿದರು[೧೮]. ಅಲ್ತಮಿರನ ಪ್ರಥಮ ಶೋಧ ನಂತರ ಈ ಚಿತ್ರಕಲೆಯ ಬಗಗೆ ಆಸಕ್ತಿ ಕೆರಳಿಸಿತು. ಡಾರ್ಡೋಗ್ನ್ ಪ್ರದೇಶದ 'ಲೆಸ್ ಐಜೆಸ್'ನ ಬಳಿ ಇರುವ ಲಾಮೌತೇ ಗುಹೆಯಲ್ಲಿನ ಕೊರೆಚಿತ್ರ ಮತ್ತು ವರ್ಣಚಿತ್ರಗಳನ್ನು ಈ ರೈವ್ಹರ್ ೧೮೯೫ರಲ್ಲಿ ಕಂಡುಹಿಡಿದನು[೧೯]. ಎಲ್. ಕ್ಯಾಪ್ಟನ್.ಡಿ.ಫೆರೋನಿ ಮತ್ತು ಎಚ್.ಬ್ರುಯಲ್ ಅವರುಗಳು ೧೯೦೧ರಲ್ಲಿ ಲೆಸ್ಕಾಂಬ್ರೆಲ್ಲಾ ಮತ್ತು ಫಾಂಟ್-ಡಿ-ಗಾಮಾ ಗುಹೆಗಳನ್ನು ಶೋಧಿಸಿದರು[೨೦]

ಫೆರೋನಿ ೧೯೦೩ರಲ್ಲಿ ಡಾರ್ಡೋಗ್ನ್ ಬೆರ್ನಿಫಲ್ ಮತ್ತು 'ತೇಯ್‌ಜಾಟ್' ಗುಹೆಗಳನ್ನು ಕಂಡುಹಿಡಿದರು[೨೧]. ಇವುಗಳಲ್ಲದೇ ಪ್ರಪಂಚದ ನಾನಾಭಾಗಗಳಲ್ಲಿ ಗವಿ ಮತ್ತು ಬಂಡೆಗಲ್ಲುಗಳ ಚಿತ್ರಗಳು ಬೆಳಕಿಗೆ ಬಂದವು. ಚಿತ್ರಗಳ ಸಂಗ್ರಹ ಕುರಿತು ಅಧ್ಯಯನ ಕೈಗೊಳ್ಳುವುದಕ್ಕಾಗಿ ಒಂದು ಸಂಸ್ಥೆ ಹುಟ್ಟಿಕೊಂಡಿದೆ. ಅಲ್ಲದೆ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ವಿಭಾಗ (UNESCO) ಚಿತ್ರಕಲೆಯ ಅಧ್ಯಯನ ರಕ್ಷಣೆಯ ವಿಷಯದಲ್ಲಿಯೂ ಆಸಕ್ತಿವಹಿಸಿದೆ[೨೨]. ಎಂದು ಜೊತೆಗೆ ಆಫ್ರಿಕಾ, ಅಮೇರಿಕಾ, ಈಜಿಪ್ಟ್, ಏಷ್ಯಾ ಮತ್ತು ಯುರೋಪ, ಜಪಾನ್ ಮೊದಲಾದ ಖಂಡ/ ರಾಷ್ಟ್ರಗಳಲ್ಲಿ ಇಂತಹ ವರ್ಣ ಹಾಗೂ ಖಂಡ ಚಿತ್ರಗಳು ಶೋಧನೆಯಾದವು, ಆಗುತ್ತಲಿವೆ ಎಂದು ಅತೀ ಪ್ರಾಚೀನ ಕಾಲದಿಂದಲೂ ಅಂದರೆ ಕನಿಷ್ಟ ಸುಮಾರು ೪೦,೦೦೦ ವರ್ಷಗಳಿಂದ ಇತ್ತೀಚಿನವರೆಗೂ ಉಳಿದುಕೊಂಡು ಬಂದ ಈ ಚಿತ್ರಕಲೆಯು ಪ್ರಪಂಚದ ನಾನಾ ಭಾಗಗಳಲ್ಲಿ ವಿವಿಧ ಜನಾಂಗಗಳ ಕಲೆಯನ್ನಲ್ಲದೇ ಅವರ ವೈವಿಧ್ಯಮಯ ಹಲವಾರು ಅಮೂಲ್ಯ ದೃಶ್ಯ ಸ್ಮಾರಕಗಳೆಂದು[೨೩] ವಿದ್ವಾಂಸರ ಅಭಿಪ್ರಾಯ ನಿಜವಿದೆ.

ಭಾರತದಲ್ಲಿಯೂ ಗುಹಾಚಿತ್ರಗಳು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದಿದ್ದು, ಪ್ರಾಗೈತಿಹಾಸಿಕ ಚಿತ್ರಗಳ ನೆಲೆಗಳನ್ನು ಹೊಂದಿದ ವಿಶ್ವದ ಪ್ರಮುಖ ರಾಷ್ಟ್ರವಾಗಿದೆ. ಗವಿ ವರ್ಣಚಿತ್ರ ಮತ್ತು ಬಂಡೆ ಚಿತ್ರಗಳ ಶೋಧನೆ ಆಕಸ್ಮಿಕವಾಗಿ ಅಲ್ಲಲ್ಲಿ ೧೮೮೦ರಿಂದ ಪ್ರಾರಂಭವಾಯಿತೆನ್ನಲಾಗಿದೆ. ಆರ್ಚಿಬಾಲ್ಡ್ ಕಾರ್ಲೈಲ್ ಮತ್ತು ಜಾನ್‌ಕಾಕ್‌ಬರ್ನ್ ಅವರುಗಳು ಮಿರ್ಜಾಪುರ (ಮಧ್ಯಪ್ರದೇಶ) ಬರಿಯವಿಂಧ್ಯ ಪ್ರದೇಶದ ಕೈಮೂರ ಚಿತ್ರದಲ್ಲಿಯ ಕಲ್ಲಾಸರೆಗಳಲ್ಲಿ ವರ್ಣ ಚಿತ್ರಗಳನ್ನು ಕಂಡು ೧೮೮೦-೧೮೮೩ರಲ್ಲಿ ಅವುಗಳ ಬಗೆಗೆ ಮೂರು ಲೇಖನಗಳನ್ನು ಪ್ರಕಟಿಸಿದರು.ಹೆಚ್ಚಾಗಿ ೧೯೦೧ರಿಂದ ಉತ್ತರ ಭಾರತದಲ್ಲಿ ಅಲ್ಲಲ್ಲಿ ಇಂತಹ ಗವಿ ವರ್ಣಚಿತ್ರಗಳು ಶೋಧವಾಗುತ್ತಲಿದ್ದವು. ಕರ್ನಾಟಕದಲ್ಲಿ ೧೯೩೫ರಲ್ಲಿ ಲಿಯೋನಾರ್ಡ್‌ಮನ್ ಅವರು ಹಿರೆಬೆನಕಲ್ ಗುಡ್ಡಗಳಲ್ಲಿ ಸ್ವಾರಸ್ಯಕರವಾದ ಮೂರು ಗವಿ ವರ್ಣಚಿತ್ರಗಳನ್ನು ಸುಮಾರು ಅದೇ ಸಮಯದಲ್ಲಿ ಭಿಲ್ಲಮರಾಯನ ಗುಡ್ಡದಲ್ಲಿ ಕಟ್ಟಿದ ಮತ್ತು ಗೀರು ಚಿತ್ರಗಳನ್ನು ಕಂಡು ಹಿಡಿದರು[೨೪] ಎನ್ನಲಾಗಿದೆ.

೧೯೫೭ರಲ್ಲಿ ಡಾ. ವಿಷ್ಣು. ಎಸ್ ವಾಕಣಾಕರ್ ಮಧ್ಯ ಪ್ರದೇಶದ ಭೂಪಾಲ್ ನಿಂದ ಸುಮಾರು ೧೫ಕಿ.ಮೀ. ಆಗ್ನೇಯಕ್ಕಿರುವ ಭೀಂಬೆಟ್ಕಾ ಅಪರೂಪದ ಗವಿವರ್ಣ ಚಿತ್ರಗಳನ್ನು ನೋಡಿದರು[೨೫] ಆ ಪ್ರದೇಶದಲ್ಲಿ ಚಿತ್ರಗಳು ಕೂಲಂಕುಷವಾಗಿ ಅಧ್ಯಯನ ಮಾಡಿದಾಗ ೭೫೪ ಕಲ್ಲಾಸರೆಲ್ಲಿ ೫೦೦ ಚಿತ್ರಗಳಿಂದ ತುಂಬಿದ್ದು ಕಂಡು ಬಂದಿದೆ[೨೬] . ನಂತರ ಉತ್ತರ ಪ್ರದೇಶ, ಗುಜರಾತ್, ರಾಜಸ್ಥಾನ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ಪ್ರದೇಶಗಳಲ್ಲಿ ನೂರಾರೂ ಇಂತಹ ಚಿತ್ರಗಳು ಬೆಳಕಿಗೆ

ಬಂದಿದ್ದು, ಉತ್ತರ ಭಾರತದಲ್ಲಿಯೇ ಸುಮಾರು ೫೦೦೦ಕ್ಕೂ ಮಿಕ್ಕಾ ಇಂತ ನೆಲೆಗಳನ್ನು ಕಂಡುಹಿಡಿಯಲಾಗಿದೆ[೨೭]. ಎಂಬ ಅಭಿಪ್ರಾಯವಿದೆ. ಬಹುಶಃ ಇಂತಹ ಗವಿ ವರ್ಣ ಚಿತ್ರಗಳ ಸಂಖ್ಯಾ ದೃಷ್ಟಿಯಿಂದ ಈಗ ಭಾರತವೇ ವಿಶ್ವದಲ್ಲಿ ಮೊದಲನೆಯದು[೨೮]ಎಂದು ಹೇಳಲಾಗಿದೆ.

ಕರ್ನಾಟಕದಲ್ಲಿ ಲಿಯೋನಾರ್ಡ್‌ಮನ್ ೧೯೪೦ರದಶಕದಲ್ಲಿ ಮಸ್ಕಿ. ಕಲ್ಲೂರು ಮತ್ತು ಅತನೂರ್ ಎಂಬಲ್ಲಿ[೨೯] ಪ್ರಾಗೈತಿಹಾಸಿಕ ಚಿತ್ರಗಳನ್ನು ಬೆಳಕಿಗೆ ತಂದರು. ಅದೇರೀತಿ ಆಗಿನ ಮುಂಬೈ ಸರ್ಕಾರದ ಕನ್ನಡ ಸಂಶೋಧನ ಸಂಸ್ಥೆಯು ೧೯೫೧ರಲ್ಲಿ ಜಮಖಂಡಿ ತಾಲೂಕು ಕುಳ್ಳೊಳ್ಳಿಯ ಚಿತ್ರಗಳ ಕುರಿತು ಪ್ರಕಟಿಸಿತು[೩೦]. ಮತ್ತೆ ಡಾ. ಅಲ್ವಿನ್ ದಂಪತಿಗಳು ಪಿಕ್ಕಿಹಾಳ್‌ದಲ್ಲಿ ,ಲಿಯೋನಾರ್ಡ್ ಮನ್ ಅವರು ಹಿರೇಬೆನಕಲ್‌ನಲ್ಲಿ ಪುನಃ ಚಿತ್ರದ ನೆಲೆ ಶೋಧದ ಸಂದರ್ಭದಲ್ಲಿ ಡಾ. ಅ. ಸುಂದರ್ ಅವರು ಅದೇ ಪ್ರದೇಶದಲ್ಲಿ ಮತ್ತೆ ಎಂಟು ಸ್ಥಳಗಳಲ್ಲಿ ಬಂಡೆ ಚಿತ್ರಗಳನ್ನು ಕಂಡುಹಿಡಿದರು[೩೧].

ಅ. ಸುಂದರ ಮತ್ತೆ ೧೯೭೪ರಲ್ಲಿ ಅನ್ವೇಷಣೆ ಕಾರ್ಯ ಕೈಕೊಂಡು ಉತ್ತರ ಕರ್ನಾಟಕದಲ್ಲಿ ಅನೇಕ ಸ್ಥಳಗಳಲ್ಲಿ ಗುಹಾಚಿತ್ರಗಳನ್ನು ಪತ್ತೆ ಮಾಡಿದರು. ಇವುಗಳಲ್ಲಿ ರಾಮದುರ್ಗ, ಬಾದಾಮಿ, ಹೊಸಮಹಾಕೂಟ, ಐಹೊಳೆ, ಕೊಪ್ಪಳ, ಬಿಳಿಭಾವಿ, ಮಲ್ಲಾಪುರ, ಆನೆಗುಂದಿ, ತಿಮ್ಮಲಾಪುರ, ನಾರಾಯಣಪುರ, ಬಂಡಿಹರ್ಲಾಪುರ, ಮಾನ್ವಿ, ಬೈಲಮರ್ಚೆಡ್, ತಾವರಗೆರೆ, ಬ್ರಹ್ಮಗಿರಿ, ಜಟ್ಟಿಂಗ ರಾಮೇಶ್ವರ, ಚಿತ್ರದುರ್ಗ, ಚಂದ್ರವಳ್ಳಿ, ಬೋಳೆ, ಹೊಳಲೂರು ಮುಂತಾದವು[೩೨] ನೆಲೆಗಳು ಪ್ರಮುಖವಾದವುಗಳು. ನಂತರ ಬ್ರಹ್ಮಗಿರಿ, ಚಿತ್ರದುರ್ಗ, ಚಂದ್ರವಳ್ಳಿ ಸುತ್ತ ಮುತ್ತ ಚಿತ್ರಗಳ ಬಗೆಗೆ ಶ್ರೀಶೈಲ ಆರಾಧ್ಯರವರು ಪ್ರಕಟಿಸಿದ್ದು, ಕುಷ್ಟಗಿ ತಾಲೂಕಿನ ತಾವರಗೇರೆಯಲ್ಲಿ ಸುಮಾರು ೭ ಸ್ಥಳಗಳಲ್ಲಿ ವಿಲಾಸ್ ಜೋಗಳ ಅವರು, ಕೊಪ್ಪಳದ ಕೆಲವು ಚಿತ್ರಗಳನ್ನು ಟಿ. ಶಂಭುಲಿಂಗಪ್ಪ ಅವರು ಪತ್ತೆ [೩೩] ಮಾಡಿದ್ದಾರೆ ಎಂದು ಹೇಳಲಾಗಿದೆ. ಅದೇರೀತಿ ಹಂಪಿ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಸಿ.ಪಾಟೀಲ ಅವರು ಬಾದಾಮಿಯ ಬೆಟ್ಟಗಳಲ್ಲಿ ಮತ್ತೆ ಹೊಸದಾಗಿ ಕೆಲವು ಗುಹಾ ಚಿತ್ರಗಳನ್ನು ಶೋಧಿಸಿದ್ದಾರೆ.

ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಯು ಈ ಚಿತ್ರಕಲೆ ಕುರಿತು ವಿಶೇಷವಾಗಿದೆ. ಇದೇ ರೀತಿ ಬಳ್ಳಾರಿಯಲ್ಲಿಯೂ ಸಹ ಸಂಶೋಧನೆ ನಡೆದವು. ಮೊದಲಿಗೆ ಬಳ್ಳಾರಿ ಜಿಲ್ಲೆಯಿಂದಲೇ ಭಾರತದ ಶೋಧ ಎನ್ನಬಹುದು ಏಕೆಂದರೆ ಹೊಬರ್ಟ್‌ನಾಕ್ಸ್ ಬಳ್ಳಾರಿ ಸಮೀಪದಲ್ಲಿರುವ ಕಪ್ಪಗಲ್ಲು ಗ್ರಾಮದಲ್ಲಿರುವ ಗುಡ್ಡಗಳಲ್ಲಿ ದೊಡ್ಡ ದೊಡ್ಡ ಗುಂಡು ಕಲ್ಲುಗಳ ಮೇಲೆ ಕುಟ್ಟಿ/ಗೀರಿ ಬಿಡಿಸಿದ ಚಿತ್ರಗಳನ್ನು ಸುಮಾರು ೧೮೮೦ರ ಸಮಯದಲ್ಲಿ ನೋಡಿ ಅವುಗಳ ಛಾಯಾಚಿತ್ರವನ್ನು ತೆಗೆದು ರಾಬರ್ಟ್ ಬ್ರೂಸ್ ಫುಟ್ ಅವರಿಗೆ ಕಳುಹಿಸಿ ಕೊಟ್ಟಿದ್ದು ಪ್ರುಟ್ ಅವರು ೧೯೧೬ರಲ್ಲಿ ಪ್ರಕಟಿಸಿದ 'ದಿ ಪ್ರುಟ್ ಕಲೆಕ್ಷನ್ ಆಫ್ ಇಂಡಿಯನ್ ಫೀ ಹಿಸ್ಟಾರಿಕ್ ಅಂಡ್ ಪ್ರೋಟೋ ಹಿಸ್ಟಾರಿಕ್ ಆಂಟ್ ಕ್ವಿಟೀಸ್' ಪುಸ್ತಕದಲ್ಲಿ ಇವುಗಳ ವರ್ಣನೆಯನ್ನು ಕೊಟ್ಟಿದ್ದಾರೆ[೩೪]. ಇದೇ ರೀತಿ ಸಂಗನಕಲ್ಲು ಅಪ್ಪಯ್ಯನಹಳ್ಳಿ, ಮಲ್ಲಾಪುರ ಮತ್ತು ಬೇಡರ ಬೆಳಗಲ್ಲು ಮೊದಲಾದ ಕಡೆಗಳಲ್ಲಿರುವ ಗುಹಾ ಚಿತ್ರಗಳನ್ನು ಕೆ.ಪೆದ್ದಯ್ಯ, ಡಾ. ಎಂ. ಎಸ್. ನಾಗರಾಜರಾವ್ ಮೊದಲಾದವರು ಕಂಡುಹಿಡಿದರು. ಕುರುಗೋಡಿನಲ್ಲಿರುವ ಚಿತ್ರಗಳನ್ನು ಕ್ರಿ.ಶ.೧೯೭೬ರಲ್ಲಿ ವೈ.ಹನುಮಂತರೆಡ್ಡಿ

ಇತಿಹಾಸ ತಜ್ಞರಾದ ಇವರು ಮೊಟ್ಟ ಮೊದಲ ಬಾರಿಗೆ ಪತ್ತೆ ಹಚ್ಚಿ ಡಾ. ಅ. ಸುಂದರರಿಗೆ ತಿಳಿಸಿದ ಮೇಲೆ ೧೯೭೬-೧೯೭೭ರಲ್ಲಿ ಕುರುಗೋಡಿಗೆ ಭೇಟಿ ಕೊಟ್ಟು ಅವುಗಳನ್ನು ಪರಿಶೀಲಿಸಿ ಆ ಬಗ್ಗೆ ವರದಿ ಮಾಡಿದ್ದು[೩೫] ತಿಳಿದುಬರುತ್ತದೆ.

೨೫ ವರ್ಷಗಳಿಂದ ಈ ಪ್ರದೇಶದಲ್ಲಿ ಕೈಗೊಂಡ ಸಂಶೋಧನೆಗಳ ಫಲವಾಗಿ ಈ ಪ್ರದೇಶದ ನಾಗರೀಕತೆ ಪುರಾತನ ಶಿಲಾಯುಗದ ಮಧ್ಯದ ಕಾಲದಿಂದಲೂ ನಿರಂತರವಾಗಿ ಸಾಗಿ ಬಂದಿದ್ದೆಂದು [೩೬]ಇತಿಹಾಸಕಾರರು ತಿಳಿಸುತ್ತಾರೆ. ಪುರಾತನಶಿಲಾಯುಗ, ನವಶಲಾಯುಗ, ಸೂಕ್ಷ್ಮಶಿಲಾಯುಗ, ಬೃಹತ್ ಶಿಲಾಯುಗ, ಕಾಲಗಳಲ್ಲಿ ದೊರೆತ ಕುರುಹುಗಳಾದ ಕಲ್ಲುಗಳಿಂದ ಚೆಕ್ಕೆ ತೆಗೆದು ತಯಾರಿಸಿದ ಮಚ್ಚು ಕೊಡಲಿ, ಉಳಿ, [೧೫] ಇವು ಹಳೆ ಶಿಲಾಯುಗದಲ್ಲಿ ದೊರತವುಗಳಾಗಿವೆ. ನಂತರ ನವಶಿಲಾಯುಗ ಕಾಲದ ಮಾನವರು ವಾಸವಾಗಿದ್ದ ನೆಲೆಗಳು ಮಡಿಕೆ, ಆಯುಧಗಳು ಮತ್ತು ಬೂದಿ ಮಣ್ಣು ಮೊದಲಾದ ಕುರುಹುಗಳು ದೊರೆತಿವೆ. ಈ ವಿಷಯವಾಗಿ ೧೯೮೦ ರ ಜುಲೈ ೩೧ ಮತ್ತು ಆಗಸ್ಟ್ ೫ ರ ದಿನಪತ್ರಿಕೆಗಳಲ್ಲಿ ಪ್ರಕಟ [೩೭] ವಾಗಿರುವುದಾಗಿ ತಿಳಿಸಿರುತ್ತಾರೆ. ಸೂಕ್ಷ್ಮ ಶಿಲಾಯುಗ ಚಕಮಕಿ ಕಲ್ಲಿನಲ್ಲಿ ತಯಾರಿಸಿದ ಚೂಪಾದ ಆಯುಧಗಳು ಮತ್ತು ಲೋಹಗಳು ಬೆಳಕಿಗೆ ಬಂದಿವೆ. ಬೃಹತ್ ಶಿಲಾಯುಗದ ಸಂಸ್ಕೃತಿಯ ಕಾಲದ ಜನರ ಶವ ಸಂಸ್ಕಾರ ಪದ್ಧತಿ ವಿಶಿಷ್ಟವಾಗಿದ್ದು ಬೃಹತ್ ಶಿಲಾಯುಗದ ಗೋರಿಗಳನ್ನು [೩೮] ಇತಿಹಾಸಕಾರರು ಬೆಳಕಿಗೆ ತಂದಿದ್ದಾರೆ.

ಅದೇ ರೀತಿ ೧೯೭೪ರಲ್ಲಿ ಅ. ಸುಂದರ ಅವರು ಆನೆಗುಂದಿ, ಹಳಕುಂಡಿ, ಹಂಪಿ ಮುಂತಾದ ಕಡೆಗಳಲ್ಲಿ ಪತ್ತೆ ಹಚ್ಚಿದರು[೩೯] ಈ ಹಂಪೆ ಪ್ರದೇಶದಲ್ಲಿ ಶಿಲಾ ತಾಮ್ರಯುಗ (ಕ್ರಿಪೂ. ಸುಮಾರು ೨೦೦೦-೨೦೦) ಕಬ್ಬಿಣಯುಗದ ಬೃಹತ್ ಶಿಲಾಯುಗ (ಕ್ರಪೂ. ೧೨೦೦-೨೦೦) ಮತ್ತು ಇತಿಹಾಸ ಆರಂಭ ಕಾಲ ಕ್ರಿಪೂ. ಸುಮಾರು ೨೦೦ಕ್ರಿ.ಶ.೨ನೇ ಶತಮಾನ)ದ ಸಾಂಸ್ಕೃತಿಕ ಅವಶೇಷ ಗಳುಳ್ಳ ನೆಲೆಗಳನ್ನು ಈಗಲೇ ಇತಿಹಾಸಕಾರರು ಬೆಳಕಿಗೆ ತಂದಿದ್ದಾರೆ. ಆದರೆ ಇಲ್ಲಿಯ ಬೆಟ್ಟ-ಗುಡ್ಡಗಳಲ್ಲಿಯ ಪ್ರಗೈತಿಹಾಸಕಾಲದ ಕಲಾ ಸಂಪತ್ತು ಅಜ್ಞಾತವಾಗಿ ಉಳಿದಿತ್ತು. ೧೯೩೫ ರಲ್ಲಿ ಆಂಗ್ಲ ಭೂಗರ್ಭ ತಜ್ಞರಾದ ಲಯೋನಾರ್ಡ್‌ಮನ್, ಡಾ. ಅ.ಸುಂದರ ಅವರು ಲಕ್ಷ್ಮಣ ತೆಲಗಾವಿಯವರು, ಆರ್.ಎಂ ಷಡಕ್ಷರಯ್ಯ, ಬಿ.ಸಿ. ಪಾಟೀಲ ಕೆಲವು ನೆಲೆಗಳನ್ನು ಶೋಧಿಸಿದ್ದಾರೆ. ಗವಿವರ್ಣ ಚಿತ್ರಗಳು ಅಧಿಕವಾಗಿದ್ದರೆ ಬಯಲು ಬಂಡೆ ಚಿತ್ರಗಳು ವಿರಳವಾಗಿವೆ. ಎಂಬುದು ವಿದ್ವಾಂಸರ ಅಭಿಪ್ರಾಯ. ಮತ್ತು ಕಮಲಾಪುರದ ಕನ್ನಡ ವಿಶ್ವವಿದ್ಯಲಯದ ಆವರಣದಲ್ಲಿರುವ

ಗುಹಾಚಿತ್ರಗಳನ್ನು ಪ್ರೊ.ಲಕ್ಷ್ಮಣ್ ತೆಲಗಾವಿ ಅವರು ಗುರುತಿಸಿದ್ದು, ಕೊಪ್ಪಳ ಮತ್ತು ಹಂಪಿ ಪರಿಸರದ ಚಿತ್ರಗಳನ್ನು ಕುರಿತು ಪಿ. ಎಚ್.ಡಿ. ಮಹಾಪ್ರಬಂಧ ಬರೆದಿರುವ ಶರಣಬಸಪ್ಪ ಕೋಲ್ಕಾರ್ ಅವರು ಸಹ ಹಂಪಿ ಪರಿಸರದಲ್ಲಿ ಕೆಲವು ಹೊಸ ಗುಹಾ ಚಿತ್ರಗಳನ್ನು ಗುರುತಿಸಿದ್ದಾರೆ[೪೦].

ಸಂಗನಕಲ್ಲು ಮತ್ತು ಕಪ್ಪಗಲ್ಲು ಇದು ಬಳ್ಳಾರಿ ನಗರದಿಂದ ೬ ಕಿ.ಮೀ.ದೂರವಿರುವುದು ಈ ಪ್ರದೇಶಗಳನ್ನು ಹಿಂದೆ ರಾಬರ್ಟ್ ಬ್ರೂಸ್‌ಫೂಟ್ ಎಂಬುವವರು ಬಳ್ಳಾರಿ ಜಿಲ್ಲೆಯ ಶಿಲಾಯುಗ ಸಂಸ್ಕೃತಿಯ ಬಗೆಗೆ ನಕ್ಷೆಯೊಂದನ್ನು ತಯಾರಿಸಿದ್ದರು. ೨೪ ಇದಾದ ಕೆಲವು ದಿನಗಳ ನಂತರ ಪೂನಾ

ಡೆಕ್ಕನ್ ಕಾಲೇಜಿನ ತಂಡವು ೧೯೪೮ ರಲ್ಲಿ ಹೆಚ್. ಡಿ. ಸಂಕಾಲಿಯಾ ಹಾಗೂ ಬಿ.ಎಸ್.ರಾವ್ ನೇತೃತ್ವದಲ್ಲಿ ೧೯೯೭ ರಲ್ಲಿ ನಮ್ಮ ವಿಶ್ವವಿದ್ಯಾಲಯವಾದ ಕನ್ನಡ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯದ ವಿಭಾಗವೂ ಸಂಶೋಧನೆ ನಡೆಸಿತ್ತು.[೪೧] ಇವರೆಲ್ಲರ ಅಭಿಪ್ರಾಯವೂ ಒಂದೇಯಾಗಿದೆ. ಇಲ್ಲಿ ಆದಿಮಾನವನ ಇತಿಹಾಸ ವಸತಿ ತಾಣವಾಗಿತ್ತೆಂದು ಹೇಳಿದ್ದಾರೆ. ಬಳ್ಳಾರಿ ಜಿಲ್ಲೆಯ ಸುಮಾರು ೭೭ ಸ್ಥಳಗಳಲ್ಲಿ ಸಂಶೋಧನೆ ನಡೆಸಿದ್ದು ಅವುಗಳಲ್ಲಿ ಈ ಸಂಗನಕಲ್ಲು ಮತ್ತು ಕಪ್ಪಗಲ್ಲು ಗ್ರಾಮವು ಒಂದಾಗಿದೆ. [೪೨] ಆದಿ ಮಾನವನ ಹುಟ್ಟು ಅವರ ಜೀವನದ ಬಗ್ಗೆ ಐತಿಹಾಸಿಕವಾಗಿ ಸಂಶೋಧನೆಗೆ ಮುಖ್ಯ ತಾಣವಾಗಿದೆ. ಕಪ್ಪಗಲ್ಲು ಸ್ಥಳಕ್ಕೆ ಭೇಟಿ ನೀಡಿದಾಗ ಮಿಂಚೇರಿ ಮತ್ತು ಸಂಜರಾಯನ ಕೋಟೇಯಲ್ಲಿಯ ಈ ಪ್ರಾಗೈತಿಹಾಸಿಕ ಚಿತ್ರಗಳು ಇರುವದು ತಿಳಿದು ಬಂದಿತು. ಈ ಊರುಗಳಿಗೆ ಭೇಟಿಕೊಟ್ಟಾಗ, ಮಿಂಚೆರಿಯ 'ಕರೆಯಲ್ಲಿ ಗುಡ್ಡ' ಎಂಬಲ್ಲಿ ಚಿತ್ರಗಳ ಕಂಡು ಬಂದವು. ಇವು ಹಲವು ಗುಂಡುಗಳಿಗೆ ಸುಮಾರು ೬೦-೭೦ ಚಿತ್ರಗಳ ಕಂಡು ಬಂದಿದ್ದು, ಅವುಗಳಲ್ಲಿ ಹಲವು ಚಿತ್ರಗಳ ಮೇಲೆ ಇತ್ತೀಚಿನ ರೇಖೆಗಳಿಂದ ಹಲವು ಪದರುಗಳಾಗಿ ಅಸ್ಪಷ್ಟವಾಗಿ ಕಾಣುತ್ತದೆ. ಮತ್ತು ಸಂಜರಾಯನಕೋಟೆಯು ಸುಮಾರು ದೊಡ್ಡದಾದ ಬೆಟ್ಟವಾಗಿದ್ದು ಅಲ್ಲಿ ೩೦೦ ಕ್ಕೂ ಹೆಚ್ಚು ಚಿತ್ರಗಳು ಕಂಡು ಬಂದವು. ಮತ್ತೆ ಇದೇ ರೀತಿ ಬಳ್ಳಾರಿ ಕೋಟೆ (ಗುಡ್ಡ) ಇದು ಬಳ್ಳಾರಿ ನಗರದ ಮಧ್ಯಭಾಗದಲ್ಲಿದ್ದು, ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದಿದೆ.

ಈ ಸ್ಥಳಕ್ಕೆ ನಾನು ಮತ್ತು ಸಂಶೋಧನಾ ಹವ್ಯಾಸಿ ಲಿಂಗಣ್ಣ ಭೇಟಿ ನೀಡಿದಾಗ ಮೂರು ಕಡೆ ಚಿತ್ರದ ನೆಲೆಗಳು ಕಂಡು ಬಂದವು. ಇವುಗಳಲ್ಲದೆಯೇ ಬಳ್ಳಾರಿ ಸುತ್ತ ಮುತ್ತ ಈ ಪ್ರಾಗೈತಿಹಾಸಿಕ ಚಿತ್ರಗಳು ಕುರಿತಾದ ಹಲವು ಪ್ರದೇಶಗಳು ಇನ್ನೂ ಹೆಚ್ಚಿನ ಅಧ್ಯಯನ ಬಯಸುವುದು.

ಮುಂದಿನ ಅಧ್ಯಾಯದಲ್ಲಿ ನೆಲೆಗಳ ವರ್ಗೀಕರಣದ ಜೊತೆಗೆ. ಇತಿಹಾಸ ಸಂಶೋಧನೆ ಕುರಿತು ಸ್ಥೂಲ ಪರಿಚಯ ಮಾಡಲಾಗಿದೆ.

ಟಿಪ್ಪಣಿಗಳು :

೧. ಡಾ. ಎಸ್.ಸಿ.ಪಾಟೀಲ :ಕರ್ನಾಟಕದ ಜನಪದ ಚಿತ್ರಕಲೆ, ಪು.೧೫

೨. ಡಾ. ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ, ಪು.೧೯

೩. ಡಾ. ಕೆ.ಬಿ. ಶಿವತಾರಕ್ ಕರ್ನಾಟಕದ ಪುರಾತತ್ವ ನೆಲೆಗಳು ಪು. ೩

೪. – ಅದೇ –

೫. – ಅದೇ –

೬. – ಅದೇ –

೭. – ಅದೇ –

೮. ಡಾ. ಕೆ.ಬಿ ಶಿವತಾರಕ್ , ಕರ್ನಾಟಕ ಪುರಾತತ್ವದ ನೆಲೆಗಳು ಪು. ೩

೯. – ಅದೇ –

೧೦. – ಅದೇ –

೧೧. ಡಾ. ಎಚ್. ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ ಪು. ೭

೧೨. – ಅದೇ –

೧೩. – ಅದೇ –

೧೪. ಡಾ. ಅ. ಸುಂದರ ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ ಪು ೫

೧೫. ಪ್ರಜಾವಾಣಿ ೨೦೦೮

೧೬. ಡಾ. ಅ. ಸುಂದರ ಪ್ರಾಗೈತಿಹಾಸಿಕ ಕಾಲದ ಕಲೆ ಪು ೬

೧೭. – ಅದೇ –

೧೮. – ಅದೇ –

೧೯. ಡಾ. ಯಾದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪು ೧೬೪

೨೦. – ಅದೇ

೨೧. – ಅದೇ –

೨೨. ಡಾ. ಎಸ್. ಸಿ ಪಾಟೀಲ್, ಕರ್ನಟಕದ ಜನಪದ ಚಿತ್ರಕಲೆ ಪು ೨೮

೨೩. – ಅದೇ –

೨೪. ಡಾ. ಅ. ಸುಂದರ ಕರ್ನಾಟಕದ ಪ್ರಾಗಿತಿಹಾಸಕಾಲದ ಕಲೆ ಪು.೮

೨೫. – ಅದೇ –

೨೬. ಡಾ. ಅ. ಸುಂದರ ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ ಪು. ೯

೨೭. – ಅದೇ –

೨೮. – ಅದೇ –

೨೯. ಡಾ. ಅ. ಸುಂದರ ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ ಪು.೧೧

೩೦. ಡಾ. ಯಾದವಪ್ಪ ಪರದೇಶಿ, ನಿಜದ ನೆಲ, ಪು. ೪೫೦

೩೧. – ಅದೇ –

೩೨. – ಅದೇ –

೩೩. ಡಾ. ಯಾದವಪ್ಪ ಪರದೇಶಿ, ನಿಜದನೆಲೆ. ಪು. ೪೫೦.

೩೪. ಡಾ. ಅ. ಸುಂದರ, ಕರ್ನಾಟಕ ಪ್ರಾಗಿತಿಹಾಸಕಾಲದ ಕಲೆ ಪು.೮

೩೫. ಡಾ. ವೈ. ಹನುಮಂತರೆಡ್ಡಿ, ಕುರುಗೋಡಿನ ಸಾಂಸ್ಕೃತಿಕ ಇತಿಹಾಸ ಪು. ೧೧

೩೬. ಡಾ. ವೈ. ಹನುಮಂತರೆಡ್ಡಿ, ಕುರುಗೋಡಿನ ಸಾಂಸ್ಕೃತಿಕ ಇತಿಹಾಸ ಪು. ೨

೩೭. – ಅದೇ

೩೮. – ಅದೇ –

೩೯. ಡಾ. ಅ. ಸುಂದರ, ಕರ್ನಾಟಕ ಪ್ರಾಗಿತಿಹಾಸಕಾಲದ ಕಲೆ ಪು.೧೧


೪೦. ಡಾ. ಎಸ್. ಈ. ಬಸವರಾಜಪ್ಪ, ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪು ೯

೪೧. ನಮ್ಮ ಕನ್ನಡ ನಾಡು ಆಗಸ್ಟ್ ೭, ೧೯೯೮

೪೨. – ಅದೇ –

ಅಧ್ಯಾಯ : ನಾಲ್ಕು
ಬಳ್ಳಾರಿ ಪ್ರಾಗೈತಿಹಾಸಿಕ ಚಿತ್ರಕಲೆ

ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ



ಮಾನವನು ವಿಕಾಸವಾದಂತೆ ಅವನ ಬೌದ್ಧಿಕ ಬೆಳವಣಿಗೆಯಿಂದ ಹಲವು ಮಾರ್ಪಾಡು ಗಳಾದವು. ಪ್ರಕೃತಿಯೊಡನೆ ಬಾಳುತ್ತಿರುವಾಗ ಪ್ರಾಣಿ ಸದೃಶ್ಯ ಜೀವನದಿಂದ ಬೇರ್ಪಡುವ ಹಂತದಲ್ಲಿ ವಿಕಾಸಿಸುತ್ತಿರುವ ಆತನ ಮನಸ್ಸು ನಿಸರ್ಗದಲ್ಲಿನ ಚಲುವಿನ ಕಡೆ ಹರಿಯಿತು. ನಿಸರ್ಗದ ವಿವಿಧ ರೂಪ ಘಟನಾವಳಿ ಆತನಿಗೆ ಪ್ರೇರಿತವಾಗಿ ಮನಸ್ಸಿನಲ್ಲಿ ಅಡಗಿದ ಚಿತ್ರವನ್ನು ಅಭಿವ್ಯಕ್ತಿಗೊಳಿಸಿದ ಆತ ಬಂಡೆಯ ಮೇಲ ಗವಿಗಳಲ್ಲಿ ಅಭಿವ್ಯಕ್ತಿಯ ಮಾಧ್ಯಮವಾಗಿದ್ದವು. ಮುಖ್ಯವಾಗಿ ಹೀಗೆ ಪ್ರಾಗೈತಿಹಾಸಿಕ ಕಾಲದಲ್ಲಿ ಈ ಚಿತ್ರಗಳು ರಚನೆಯಾಗಿರುವುದರಿಂದ ಇವುಗಳನ್ನು ಪ್ರಾಗೈತಿಹಾಸಿಕ ಚಿತ್ರಗಳೆಂದು ಕರೆಯುತ್ತಾರೆ.

ಸ್ವರೂಪ

ಪ್ರಾಗೈತಿಹಾಸಿಕ ಚಿತ್ರಗಳು ಶಿಲಾಗುಹೆಗಳಲ್ಲಿ ಶಿಲಾಶ್ರಯಗಳಲ್ಲಿ ಮತ್ತು ಬಯಲು ಬಂಡೆಗಳ ಮೇಲ ರಚನೆಯಾಗಿರುತ್ತವೆ. ಮತ್ತು ಈ ಚಿತ್ರಗಳು ರೇಖಾ ಚಿತ್ರ ವರ್ಣಚಿತ್ರ, ಕುಟ್ಟು, ಗೀರು ಸ್ವರೂಪವಾಗಿರುತ್ತದೆ. ಮತ್ತು ಈ ಚಿತ್ರಗಳು ಪ್ರಾಗೈತಿಹಾಸಿಕ ಮಾನವರು ಗವಿಯ ಮುಂದಿನ ಭಾಗದಲ್ಲಿ ವಾಸದ ನೆಲೆಯಿಂದ ದೂರದಲ್ಲಿ ಇಲ್ಲವೇ ತೀರಾ ಹಿಂಭಾಗದಲ್ಲಿ ಅಥವಾ ಮೇಲ್ಭಾಗದಲ್ಲಿ ಅವನಿಗೆ ಯಾವಾಗಲೂ ಕುಳಿತುಕೊಳ್ಳುವ, ನಿಂತುಕೊಳ್ಳುವ (ಪ್ರೀಯವಾದ) ಜಾಗದಲ್ಲಿ ಸುಲಭವಾಗಿ ತಲುಪಲಾಗದ ಸ್ಥಳದಲ್ಲಿ ರಚನೆಯಾಗಿಸಿ ಮತ್ತು ಹಲವು ಪ್ರದೇಶಗಳಲ್ಲಿ ಈ ಪ್ರಾಗೈತಿಹಾಸಿಕದ ಚಿತ್ರಗಳನ್ನು ನೋಡಬಹುದು. ಫಾಂಟ್ –ಡಿ– ಗಾವ್ ನಂತಹ ಗವಿಯಲ್ಲಿ ಸುಮಾರು ಅರ್ಧ ದಾರಿಯು ಕಳೆದ ನಂತರ ಈ ಚಿತ್ರಗಳು ಪ್ರಾರಂಭವಾಗುತ್ತವೆ.[೧] ಪ್ರಾನ್ಸ ನ ಗವಿಯಾದ ಕಂಬರೆಲ್ನಲ್ಲಿ ಸುಮಾರು ೭೨೦ ಅಡಿಗಳ ಉದ್ದವಿದ್ದು ಚಿತ್ರಗಳ ರಚನೆಯಾಗಿದ್ದು

ಪ್ರಾಗೈತಿಹಾಸಿಕ ಚಿತ್ರಕಲೆ





೩೮೦ ಅಡಿಗಳಷ್ಟು ಒಳಭಾಗದಲ್ಲಿವೆ.[೨] ಎಂದು ತಿಳಿದು ಬರುತ್ತದೆ. ಮತ್ತು ಬಳ್ಳಾರಿ ಜಿಲ್ಲೆಯ ಕುರಗೋಡಿನ ೪ನೇ ಗವಿಯಲ್ಲಿ ಪ್ರವೇಶಿಸಲು ೩ಮೀ ಎತ್ತರದ ಕೊನೆಯದಾದ ಇಕ್ಕಟದ ಬಂಡೆಯ ಮೇಲ್ಚಾವಣಿಯಲ್ಲಿ ಚಿತ್ರ ರಚನೆಯಾಗಿವೆ. ಇವಲ್ಲದೇ ಹಲವು ಪ್ರದೇಶವನ್ನು ಚಿತ್ರಗಳು ತಮ್ಮದಾಗಿಸಿಕೊಂಡಿವೆ. ಈ ಪ್ರಾಗೈತಿಹಾಸಿಕ ಚಿತ್ರಕಲೆಯಲ್ಲಿ ಹೆಚ್ಚಿನವು ಪ್ರಾಣಿಯ ಚಿತ್ರಗಳಾಗಿವೆ. ಅದರಲ್ಲೂ ಎತ್ತು ಮತ್ತು ಗೂಳಿ ಹೆಚ್ಚಿನ ಚಿತ್ರಗಳು ಸಿಗುತ್ತವೆ. ಹೆಚ್ಚಾಗಿ ಕೆಂಪು ವರ್ಣವನ್ನು ಹೊಂದಿದವು. ಪ್ರಾಗೈತಿಹಾಸಿಕ ವರ್ಣಚಿತ್ರಕಲೆಯಲ್ಲಿಯೇ ವಿಶೇಷವಾಗಿದೆ. ಚಿತ್ರಕಲೆಗೆ ಎರಡು ರೀತಿಯ ಬಂಡೆ ಅಥವಾ ಕಲ್ಲನ್ನು ಉಪಯೋಗಿಸಿಕೊಂಡಿದ್ದಾರೆ. ಪದರು ಬಂಡೆಯನ್ನು ವರ್ಣಚಿತ್ರಗಳಾಗಿ ಉಪಯೋಗಿಸಿಕೊಂಡರೆ ಕಪ್ಪು ಅಥವಾ ಕರಿಕಲ್ಲು(ಗುಂಡು)ಗಳನ್ನು ಗೀರು ಅಥವಾ ಕುಟ್ಟಿ ಚಿತ್ರಗಳಾಗಿ ಉಪಯೋಗಿಸಿಕೊಂಡಿದ್ದಾರೆ.

ಅದೇ ಬಳ್ಳಾರಿ ಪ್ರದೇಶದಲ್ಲಿ ಕೋಟೆಯಲ್ಲಿ ಕೆಂಪು ಮತ್ತು ಬಿಳಿ ವರ್ಣದ ಚಿತ್ರಗಳಾಗಿ ಪದರು ಕಲ್ಲು ಉಪಯೋಗಿಸಿಕೊಂಡಿದ್ದಾರೆ. ಹೀಗೆ ಈ ಪ್ರಾಗೈತಿಹಾಸಿಕ ಚಿತ್ರಗಳು ಯಾವಾಗಲೂ ಚಟುವಟಿಕೆಯಿಂದ ಕೂಡಿರುವ ಭಂಗಿಯಲ್ಲರುತ್ತವೆ. ಮುಖಗಳು ವಾನರರ ಆಕಾರದಲ್ಲಿದ್ದು ಹೆಚ್ಚಿನ ಚಿತ್ರಗಳು ಮುಖದ ಒಂದು ಭಾಗ ಮಾತ್ರ ಕಾಣುವ ಹಾಗೆ ಚಿತ್ರಗೊಂಡಿರುತ್ತವೆ. ತಮ್ಮದೆಯಾದ ಸ್ವರೂಪವನ್ನು ಈ ಚಿತ್ರಗಳು ಹೊಂದಿವೆ. ಎಂದು ಹೇಳಬಹುದು.

ಚಿತ್ರ ರಚನೆಯ ಉದ್ದೇಶ :

ಜಗತ್ತಿನ ತುಂಬಾ ಅಲ್ಲಲ್ಲಿ ಕಂಡು ಬಂದ ಇಂತಹ ಚಿತ್ರಗಳ ರಚನೆಗೆ ಮಾನವನ ಭಾವ ತೀವ್ರತೆಯ ಅಭಿವ್ಯಕ್ತಿಯೊಂದೇ ಮೊದಲ ಕಾರಣವಾಗಿರಬೇಕು. ನಂತರ ಬೇರೆ ಬೇರೆ ಉದ್ದೇಶಗಳಿಗಾಗಿ ಕಲಾಚಟುವಟಿಕೆ ಮುಂದುವರೆದಿರಬೇಕು.

ಪ್ರಥಮವಾಗಿ ಜೀವ ಸಂಕುಲಗಳಿಗೆ ಆಹಾರವೇ ಮುಖ್ಯ. ಪ್ರತಿ ಪ್ರಾಣಿ, ಪಕ್ಷಿಗಳು ಹೊಟ್ಟೆ ತುಂಬಿಸುವುದರಲ್ಲಿಯೇ ಇಡೀ ದಿನಮಾನದ ಕೆಲಸವಾಗಿರುವುದು ನಮ್ಮ ಸುತ್ತ ಮುತ್ತ ಮುಖ್ಯವಾಗಿ ಕಾಣುವದು ಸಹಜವಾಗಿದೆ. ಮೊದಲಿಗೆ ಮನುಷ್ಯ ಕೂಡ ಇವುಗಳಲ್ಲಿ ಒಂದು ಎಂಬುವಂತೆ ಆಹಾರವೇ ಪ್ರಧಾನವಾಗಿತ್ತು. ಆದ್ದರಿಂದ ಪ್ರಾಣಿ-ಪಕ್ಷಿಗಳೇ ಇವನ ಆಹಾರವಾದ್ದು, ಅವುಗಳು ಚಿತ್ರ ಸಹಜವಾಗಿಯೇ ಪ್ರಥಮವಾಗಿ ಚಿತ್ರಗಳಲ್ಲಿ ಕಾಣಿಸಿದವು. ಎಂದು ಹೇಳಬಹುದಾಗಿದೆ.

ಕಲಿಕೆಯ ಪ್ರಥಮ ಹಂತ ಅನುಕರಣೆ ಈ ಅನುಕರಣೆಯೇ ಅದಿಮಾ ಕಲಾವಿದನಿಗೆ ಅನುಕರಣೆಯ ಭಾವತೀವ್ರತೆಯ ಪ್ರೇರಣೆಯಾಗಿರಬೇಕು. ಭಾವನೆ ಕ್ಷಣಿಕ ಮತ್ತು ತಕ್ಷಣವಾದದು,[೩] ಎಂದು ಅಭಿಪ್ರಾಯವಿದೆ. ಆದ್ದರಿಂದ ಸ್ಥಳದಲ್ಲೇ ಲಭ್ಯವಿದ್ದ ವಸ್ತುಗಳಿಂದಲೇ ಯಾವುದಾದರೂ ಚಿತ್ರವನ್ನು ಬಿಡಿಸಿ ಆಯಾ ಮೂಲಕ ತನ್ನ ಭಾವನೆಯನ್ನು ಪ್ರಚುರಪಡಿಸುತ್ತಾನೆ. ಎಂದು ಕಲಾಪ್ರತಿಭೆಯುಳ್ಳವನಾಗಿದ್ದರೆ ಅಭಿವ್ಯಕ್ತ ಚಿತ್ರ ಉತ್ತಮವಾಗಿರುತ್ತವೆ. [೪] ಎನ್ನುವುದು ಸತ್ಯವಾಗಿದೆ.

ಕೆಲವು ಚಿತ್ರಗಳು ಸೌಂದರ್ಯ ಪ್ರಜ್ಞೆ ಸೂಕ್ತವಾಗಿರುತ್ತದೆ. ಆದರೆ ಎಲ್ಲದರಲ್ಲೂ ಜಾಗೃತವಾಗಿರುವುದಿಲ್ಲ. ಆ ರೀತಿಯ ಕಲಾವಂತಿಕೆಯ ಕೆಲವು ಪ್ರಗೈತಿಹಾಸಿಕ ಕಾಲದ ಜನರು ತಮ್ಮ ವಾಸದ ನೆಲೆಯನ್ನು

ಅಲಂಕರಿಸುವ ಉದ್ದೇಶದಿಂದ ಚಿತ್ರಗಳನ್ನು ಬಿಡಿಸಿದ್ದಾರೆ. ಎಂದು ನಿತ್ಯ ಬಳಕೆಯ ಮಡಿಕೆಗಳನ್ನು ಅಲಂಕರಿಸಿಕೊಂಡಿರುವುದು ಅವನ ಕಲಾ ಪ್ರಜ್ಞೆಗೆ ಸಾಕ್ಷಿ ಎನ್ನುವುದು[೫] ಸತ್ಯವಾದ ಅಂಶವಾಗಿದೆ. ಮತ್ತು ಮಾಂತ್ರಿಕ ಚಿತ್ರರಚನೆಯ ಮತ್ತೊಂದು ಉದ್ದೇಶವಾಗಿದೆ. ಈ ಆಚರಣೆಯಿಂದ ಪ್ರತಿಫಲಿಸುವ ಸೂಪ್ತ ವೈಜ್ಞಾನಿಕ ನಂಬಿಕೆಯ ಈ ಚಿತ್ರಗಳಿಗೆ ಮತ್ತೊಂದು ಪ್ರೋತ್ಸಾಹ ವಾಗಿರಬೇಕು.

ವಿಧಗಳು :

ಶೋಧಗೊಂಡ ಪ್ರಾಗೈತಿಹಾಸಿಕ ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಕೆಳಗಿನಂತೆ ವಿಂಗಡಿಸಿಕೊಳ್ಳಬಹುದಾಗಿದೆ.

೧. ವರ್ಣ ಚಿತ್ರಗಳು

೨. ವರ್ಣರಹಿತ ಚಿತ್ರಗಳು

೧. ವರ್ಣ ಚಿತ್ರಗಳು :

ಈ ವರ್ಣ ಚಿತ್ರಗಳು ನೂರಾರು ಕಿ.ಮೀ. ಗಳುದ್ದಗಲಕ್ಕೂ ಹರಡಿದ ಬೆಟ್ಟಗಳ ನಾನಾ ಕಡೆಗಳಲ್ಲಿ ಈ ಚಿತ್ರಗಳು ಸಾಮಾನ್ಯವಾಗಿ ಗವಿಯೊಳಗೆ ಬಂಡೆಯ ಮೇಲ್ಭಾಗದಲ್ಲಿ ನೋಡಬಹುದು. ಮತ್ತು ಸುಲಭವಾಗಿ ಪ್ರವೇಶಿಸಲಾಗದಂತಹ ತೀರ ದುರ್ಗಮವಾದ ಗವಿಗಳಲ್ಲಿ ವರ್ಣ ಚಿತ್ರಗಳಿರುತ್ತವೆ.[೬] ಈ ಚಿತ್ರಗಳು ಹೆಚ್ಚಾಗಿ ನಸುಕೆಂಪು ಬಣ್ಣದಲ್ಲೇ ಇದ್ದರೂ ಅದರ ಜೊತೆಗೆ ಬಿಳಿ, ಕಪ್ಪು ಹಳದಿ ಬಣ್ಣಗಳಿಂದ ರಚನೆಯಾದ ಚಿತ್ರಗಳು ಕಂಡು ಬರುತ್ತವೆ.[೬] ಪ್ರಾಗೈತಿಹಾಸಿಕ ಚಿತ್ರಗಳ ನೆರಳಿನಂತೆ ಕಾಣುತ್ತದೆ ಮತ್ತು ಚಪ್ಪಟೆಯಾಗಿರುತ್ತದೆ. ಬಳ್ಳಾರಿಯ ಗುಡ್ಡದಲ್ಲಿ ಬಿಳಿ ಕೆಂಪು ಮತ್ತು ಹಳದಿ ಚಿತ್ರಗಳು ಕಂಡು ಬರುತ್ತವೆ.

ಈ ವರ್ಣ ಚಿತ್ರಗಳನ್ನು ಮುಖ್ಯವಾಗಿ ಎರಡು ಬಗೆಯಲ್ಲಿ ಇರುವುದು ಕಂಡು ಬರುತ್ತವೆ. ಅವು ಈ ಕೆಳಗಿನಂತಿವೆ.

೧. ರೇಖಾ ಚಿತ್ರಗಳು

೨. ನೆರಳ ಚಿತ್ರಗಳು

ರೇಖಾಚಿತ್ರಗಳು :

ಈ ವರ್ಣ ಚಿತ್ರಗಳು ರೇಖಾ ಪ್ರಧಾನವಾಗಿದ್ದು ವರ್ಣದಿಂದಲೇ ಎಳೆದ ರೇಖೆಯಗಿರುತ್ತವೆ. ಚಿತ್ರದ ಒಳಗೆ ಯಾವುದೇ ವರ್ಣ ಇರುವುದಿಲ್ಲ. ಹೊರಮೈ ಮಾತ್ರವಿರುತ್ತದೆ. ಬಳ್ಳಾರಿ ಕುರುಗೋಡು ತಾಲೂಕು ಸಂಗನಕಲ್ಲು , ಕಪ್ಪಗಲ್ಲು, ಹಂಪಿ, ಬಳ್ಳಾರಿ ಗುಡ್ಡಗಳಲ್ಲಿ ಕಂಡು ಬರುತ್ತವೆ.

೧. ನೆರಳ ಚಿತ್ರಗಳು :

ಈ ನೆರಳು ಚಿತ್ರಗಳು ರೇಖಾ ಪ್ರಧಾನ ಚಿತ್ರಗಳಂತೆಯೇ ವರ್ಣದಿಂದ ರಚಿಸಿದ ನೆರಳು ಚಿತ್ರಗಳು ಕಂಡು ಬರುತ್ತವೆ.

ರೇಖೆಯಿಂದ ಈ ಚಿತ್ರಗಳನ್ನು ಮೊದಲ ಹಂತದಲ್ಲಿ ಹಾಕಿಕೊಂಡು ನಂತ್ರ ಒಳಭಾಗವನ್ನು ವರ್ಣ ಲೇಪಿಸಲಾಗಿದೆ. ರೇಖಾ ಚಿತ್ರಕ್ಕಿಂತ ಈ ಚಿತ್ರಗಳನ್ನು ಸ್ವಲ್ಪ ದೂರದಿಂದಲೇ ಕಂಗೊಳಿಸುತ್ತವೆ.

ವರ್ಣಲೇಪನ ನೆರಳಿನಂತೆ ಚಪ್ಪಟೆಯಾಗಿರುತ್ತವೆ. ಇವುಗಳನ್ನು ವೆಂಕಟಾಪುರ ಮತ್ತು ಬಳ್ಳಾರಿಯ ಗುಡ್ಡಗಳಲ್ಲಿ ನೋಡಬಹುದಾಗಿದೆ.

೨. ವರ್ಣರಹಿತ ಚಿತ್ರಗಳು :

ಪ್ರಾಗೈತಿಹಾಸಿಕ ಮಾನವನು ವರ್ಣದಿಂದ ಬಂಡೆಗಳ ಮೇಲೆ ಚಿತ್ರರಚನೆ ಮಾಡಿದಂತೆಯೇ ಯಾವುದೇ ವರ್ಣ ಉಪಯೋಗಿಸದೇ ಚೂಪಾದ ಸಾಧನದಿಂದ ಬಂಡೆಗಳ ಮೇಲೆ ಕುಟ್ಟಿ ಗೀರಿ ಚಿತ್ರ ರಚನೆ ಮಾಡಲಾಗಿದೆ. ರೇಖಾಕೃತಿಯ ಚಿತ್ರಗಳನ್ನು ರಚನೆ ಮಾಡಿ ಒಳ ಭಾಗದಲ್ಲಿ ಏಕಪ್ರಕಾರವಾಗಿ ಕುಟ್ಟಿ ಆ ಚಿತ್ರವನ್ನು ಬಂಡೆಯಿಂದ ಪ್ರತ್ಯೇಕಗೊಳಿಸುತ್ತಾರೆ. ಹೆಚ್ಚಿನವು ರೇಖಾ ಪ್ರಧಾನವಾದವುಗಳೇ ಆಗಿವೆ. ವರ್ಣಚಿತ್ರಗಳಿಗಿಂತಲೂ ಹೆಚ್ಚಿನ ನೆಲೆಗಳಲ್ಲಿ ಸಿಗುವಂತವುಗಳಾಗಿವೆ. ಸಂಗನಕಲ್ಲು ಮಿಂಚೇರಿ, ಸಂಜರಾಯನಕೋಟೆ, ರಾಜಪರ ಮುಂತಾದವುಗಳಲ್ಲಿ ಕಂಡು ಬರುತ್ತವೆ.

ಕುಟ್ಟಿದ ಚಿತ್ರಗಳು :

ಬಂಡೆ ಮೇಲೆ ಚೂಪಾದ ಸಾದನದಿಂದ ಕುಟ್ಟಿ ರಚಿಸಿರುವುದರಿಂದ ಈ ಪ್ರಕಾರದ ಚಿತ್ರಗಳನ್ನು ಕುಟ್ಟಿದ ಚಿತ್ರಗಳೆಂದು ಕರೆಯುತ್ತಾರೆ.[೮] ತಾನು ಮಾಡಲು ನಿರ್ಧರಿಸಿಕೊಂಡ ಬಂಡೆಯ ಜಾಗವನ್ನು ಸಮದಟ್ಟಾಗಿರುವಂತೆ (ಸಾಪಾದ ಬಂಡೆ ಭಿತ್ತಿ) ಮಾಡಿಕೊಂಡು ನಂತರ ಚಿತ್ರಗಳನ್ನು ಬರೆಯುವುದು ಇದು ಭಿತ್ತಿಚಿತ್ರಕಲೆಗೆ ನಾಂದಿ ಎನಿಸುತ್ತಿದೆ. ನಂತರ ಬಂಡೆಯ ಮೇಲೆ ಕಲ್ಲಿನ ತುಂಡು ಇಲ್ಲವೇ ಮಣ್ಣಿನ ಗಟ್ಟಿಯಿಂದ ರೇಖಾಕೃತಿ ಮಾಡಿಕೊಂಡು ಆ ರೇಖೆಯ ಒಳಜಾಗವನ್ನು ಚೂಪಾದ ಸಾಧನದಿಂದ ಒತ್ತೊತ್ತಾಗಿರುವಂತೆ ನಿರಂತರವಾಗಿ ಕುಟ್ಟಿ ಚಿತ್ರಗಳನ್ನು ರಚನೆ ಮಾಡಿರುವಂತೆ ಕಂಡು ಬರುತ್ತದೆ. ಈ ಚಿತ್ರಗಳು ಹಂಪೆ, ಕಪ್ಪಗಲ್, ಮಿಂಚೇರಿ ಸಂಜರಾಯನ ಕೋಟೆಯಲ್ಲಿ ಕಂಡು ಬರುತ್ತವೆ.

ಕೊರೆದ ಚಿತ್ರಗಳು :

ಈ ಕೊರೆದ ಚಿತ್ರಗಳನ್ನು ಮೊದಲು ಚಿತ್ರ ರಚನೆ ಮಾಡಿಕೊಂಡು ನಂತರ ಅದರ ಮೇಲೆ ಚೂಪಾದ ಸಾದನದಿಂದ ಕೊರೆದ ಚಿತ್ರ ರಚನೆ ಮಾಡುತ್ತಾರೆ. ಈ ಚಿತ್ರಗಳು ಬಳ್ಳಾರಿಯ ಕಪ್ಪಗಲ್ಲು, ಮಿಂಚೇರಿ, ಸಂಜರಾಯನಕೋಟೆ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಆವರಣದ ಗಿರಿಸೀಮೆ, ಏಕಶಿಲೆ, ಜಾನಪದ ಅಧ್ಯಯನ ವಿಭಾಗದ ಹಿಂದೆ ಈ ಚಿತ್ರಗಳು ಕಂಡು ಬರುತ್ತವೆ.

ಈ ವರ್ಣ ಕೊರೆದ ಮತ್ತು ಕುಟ್ಟಿದ ಚಿತ್ರಗಳು ನೆಲೆಗಳ ನಿರ್ದಿಷ್ಟವಾದ ಸ್ಥಳಗಳಲ್ಲಿ ಕಂಡು ಬರುತ್ತವೆ. ಅವು ಗವಿ ಮತ್ತು ಕಲ್ಲಾಸರೆಗಳನ್ನು ಅಲ್ಲಿಯ ಚಿತ್ರಿತ ಭಾಗಗಳನ್ನು ಗಮನಿಸಲಾಗಿ ಚಿತ್ರಕ್ಕಾಗಿಯೇ ಅವುಗಳನ್ನು ಆಯ್ದುಕೊಂಡಿರುವುದು ಸ್ಪಷ್ಟವಾಗುತ್ತದೆ.

ಬಯಲು ಬಂಡೆ ಚಿತ್ರ :

ಬಯಲು ಬಂಡೆ ಚಿತ್ರಗಳ ಕ್ರಮ ಸಹಜವಾಗಿ ಭಿನ್ನವಾಗಿದೆ. ದೊಡ್ಡ ದೊಡ್ಡ ಬಂಡೆಗಳ ರಾಶಿಯಂತಿರುವ ಬೆಟ್ಟಗಳ ಮದ್ಯದ ಮತ್ತು ಮೇಲಿನ ಹಂತಗಳಲ್ಲಿ ಬಯಲಿನಲ್ಲಿರುವ ಅಲ್ಲೊಂದು ಇಲ್ಲೊಂದು ಬಂಡೆಯ ಸಮಾನ ಮೇಲ್ಮೈಯ ಮೇಲೆ ಬೇಕಾದ ಚಿತ್ರವನ್ನು ಮೂಡಿಸಲಿಕ್ಕೆ ಅನುಕೂಲಕರವಾದ

ಕಲ್ಲಿನಿಂದ ಏಕಪ್ರಕಾರವಾಗಿ ಕುಟ್ಟಿ ಕುಟ್ಟಿ ಬಿಡಿಸುವುದು ; ಇಲ್ಲವೆ ಉಳಿಯಂತಹ ಮೊನಚಾದ ಉಪಕರಣಗಳಿಂದ ಗೆರೆಗಳನ್ನು ಮೂಡಿಸುವುದು. ಕೆಲವೊಂದು ನೆಲೆಗಳಲ್ಲಿ ಇವೆರಡು ತರಹದ್ದು ಇದೆ. ಹಳಕುಂಡಿ, ಮಿಂಚೇರಿ, ಕಪ್ಪಗಲ್ಲು, ಬೆಳಗಲ್ಲು, ಸಂಜಾರಾಯನಕೋಟೆ ಮತ್ತು ಕಮಲಾಪುರ ಪ್ರದೇಶಕ್ಕೆ ಸಂಬಂಧಿಸಿದಂತೆ ಬಂಡೆ ಚಿತ್ರಗಳು ಎರಡು ರೀತಿಯ ಸ್ಥಳಗಳಲ್ಲಿ ರಚಿತವಗಿರುವುದನ್ನು ಗುರುತಿಸಬಹುದು. ಅವುಗಳೆಚಿದರೆ ಮೊದಲನೆಯ ನೆಲೆ ನೀರು ಸಂಗ್ರಹಣೆಯ ಕೆರೆಗಳ (ನೈಸರ್ಗಿಕ) ಬದಿಯ ಬಂಡೆಗಳಲ್ಲಿ ಇರುವುವು.

ಗವಿ/ಕಲ್ಲಾಸರೆಯು ನೈಸರ್ಗಿಕ ರಚನೆಗಳಾಗಿರುತ್ತವೆ. ಮಳೆಗಾಳಿಯಿಂದ ರಕ್ಷಿಸಿಕೊಳ್ಳಲು ಉತ್ತಮ ಆಶ್ರಯ ತಾಣಗಳಾಗಿದ್ದು, ಶಿಲಾಯುಗದ ಜನರು ಗವಿಗಳನ್ನು ಖಾಯಂ ವಾಸಕ್ಕಾಗಿ ಕಲ್ಲಾಸರೆಗಳನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರು ಇಂಥ ಗವಿ/ಕಲ್ಲಾಸರೆಗಳಲ್ಲಿ ಚಿತ್ರಗಳನ್ನು ಬಿಡಿಸಿದ್ದಾರೆ. ಚಿತ್ರಕ್ಕಾಗಿ ಅವರು ಎಲ್ಲಾ ರೀತಿಯ ಗವಿ/ಕಲ್ಲಾಸರೆಗಳನ್ನು ಬಳಸಿಕೊಂಡಿಲ್ಲ.[೯] ಶಿಕ್ಷಣಕ್ಕೆ ಒಳಗಾದ ಪ್ರವೇಶ ಮತ್ತು ಚಿತ್ರಕ್ಕೆ ಅನುಕೂಲವಾದ ಸ್ಥಳಗಳನ್ನು ಮಾತ್ರ ಆಯ್ದುಕೊಂಡಿದ್ದಾರೆ. ಮತ್ತು ಚಿತ್ರಕ್ಕೆ ಸೂಕ್ತವಾದ ಭಾಗವಿದ್ದಲ್ಲಿ ಅನೇಕ ಚಿಕ್ಕ ದೊಡ್ಡ ಗವಿಗಳಿವೆ. ಅವುಗಳಲ್ಲಿ ಪ್ರಾಗೈತಿಹಾಸಕಾಲದ ಮಡಿಕೆ ಚೂರುಗಳು, ಶಿಲಾಯುಧಗಳು ದೊರೆತಿವೆ.

ಬಳ್ಳಾರಿ ಜಿಲ್ಲೆಯ ಚಿತ್ರಿತ ಗವಿಗಳು ಮತ್ತು ಕಲ್ಲಾಸರೆಯು ಅಧಿಕ ಪ್ರಮಾಣದಲ್ಲಿಲ್ಲ. ಹಂಪಿಯಲ್ಲಿ ಬಳ್ಳಾರಿ ಗುಡ್ಡದಲ್ಲಿ ಅಲ್ಪ ಪ್ರಮಾಣದಲ್ಲಿ ಕಂಡು ಬಂದರೂ ಕುರುಗೋಡಿನಲ್ಲಿ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿವೆ. ಈ ಕಲ್ಲಾಸರೆಗಳನ್ನು ಮುಂಚಾಚಿದ ತಲೆ ಬಂಡೆಗಳು ಆಸರೆ ಸೀಳು ಬಂಡೆ ಆಸರೆ, ವಾರೆ ಸವಕಳಿ ಬಂಡೆ ಆಸರೆ, ಹಾಸಲು ಬಂಡೆ ಆಸರೆ, ಅರೆ ವೃತ್ತಾಕಾರ ಬಾಗಿದ ಬಂಡೆ ಆಸರೆ ಎಂದು ವಿಭಾಗಿಸಬಹುದು. ಬಳ್ಳಾರಿ ಗುಡ್ಡದ ನೆಲೆಯಲ್ಲಿ ಮತ್ತು ಕಪ್ಪಗಲ್ಲು, ರಾಜಾಪುರಗಳಲ್ಲಿ ಈ ಆಸರೆಗಳನ್ನು ನೋಡಬಹುದಾಗಿದೆ.

ಪ್ರಾಗೈತಿಹಾಸಿಕ ಚಿತ್ರಕಲೆಯ ನೆಲೆಗಳು ಮತ್ತು ವಸ್ತು ವಿಷಯ :

ಬಳ್ಳಾರಿ ಜಿಲ್ಲೆಯ ನೆಲೆಯಲ್ಲಿ ಕಂಡು ಬರುವ ಚಿತ್ರಗಳು ಬೇರೆ ಬೇರೆ ಕಾಲಘಟ್ಟದಲ್ಲಿ ರಚನೆಯಾಗಿವೆ. ಎಂದು ಹೇಳಬಹುದು. ಇಲ್ಲಿ ಮುಖ್ಯವಾದ ವಿಷಯ ಬೇಟೆಗೆ ಸಂಬಂಧಿಸಿದಂತೆ ಸೌಂದರ್ಯಕ್ಕೆ ಸಂಬಂಧಿಸಿದಂತೆ ತಂತ್ರಕ್ಕೆ ಸಂಬಂಧಿಸಿದಂತೆ ತಮ್ಮದೇ ಆದ ಸಂಸ್ಕೃತಿಗೆ ಅಂದರೆ ಆಚರಣೆಗೆ ಸಂಬಂಧಿಸಿದಂತೆ ಚಿತ್ರಗಳ ಮುಖ್ಯವಾದ ವಸ್ತುವಿಷಯವಾಗಿದೆ. ಹಳೆಯ ಶಿಲಾಯುಗ ಕಾಲಕ್ಕೆ ಆನೆ, ಕಾಡೆಮ್ಮೆ, ಹುಲಿ, ಚಿರತೆಗಳಂತೆ ಪ್ರಾಣಿಗಳನ್ನು ಬೇಟೆಯ ದೃಶ್ಯದಲ್ಲಿ ರಚಿಸಿದ್ದರೆ, ಸೂಕ್ಷ್ಮ ಶಿಲಾಯುಗದ ಕಾಲಕ್ಕೆ ಕಾಡುಹಂದಿ, ಜಿಂಕೆಗಳಂತಹ ಪ್ರಾಣಿಗಳು ರಚಿಸಿವೆ. ನಂತರ ನೂತನ ಶಿಲಾಯುಗ ಕಬ್ಬಿಣ ಯುಗಗಳಲ್ಲಿ ಹೆಚ್ಚಾಗಿ ಶಾಖಾಹಾರಿ ಪ್ರಾಣಿಗಳನ್ನು ಬೇಟೆಯಾಡಿದ ಚಿತ್ರಗಳು ಕಂಡು ಬರುತ್ತವೆ.[೧೦] ಎಂಬ ಅಭಿಪ್ರಾಯವಿದೆ. ಬಳ್ಳಾರಿ ಸುತ್ತಮುತ್ತಲಿನ ನೆಲೆಗಳಲ್ಲಿ ಈ ತರಹದ ಚಿತ್ರಗಳನ್ನು ನಾವು ನೋಡಬಹುದು. ನೆಲೆಗೆ ಸಂಬಂಧಿಸಿದಂತೆ ಚಿತ್ರಗಳನ್ನು ಆಯ್ದುಕೊಂಡು ವಿವರಿಸಲಾಗಿದೆ. ನೆಲೆ ಮತ್ತು ವಸ್ತು ವಿಷಯಗಳ ವಿವರಣೆ ಈ ಕೆಳಗಿನಂತೆ ನೀಡಲಾಗಿದೆ.

ಹಂಪೆ :

ಹಂಪೆ ಎಂದಾಕ್ಷಣ ಅಲ್ಲಿ ಬಾಳಿ ಬೆಳಗಿದ ವಿಜಯನಗರ ಸಾಮ್ರಾಜ್ಯದ ನೆನಪು ನಮಗೆ ಆಗುತ್ತದೆ. ಈ ಹಂಪೆಯ ಕಲ್ಲಾಸರೆ ಗವಿಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ವರ್ಣಚಿತ್ರಗಳಿವೆ

ವಿಷಯ ವಸ್ತು :

ಪ್ರಾಣಿಯ ಚಿತ್ರ ಪಕ್ಷಿಗಳ ಚಿತ್ರ ಕುಣಿತದ ಚಿತ್ರ, ತಾಂತ್ರಿಕದ ಚಿತ್ರ ಮತ್ತು ಇತರೆ ಚಿತ್ರಗಳು ಕಂಡು ಬಂದದ್ದು ವಿರೂಪಾಕ್ಷ ದೇವಾಲಯದ ಹಿಂದುಗಡೆ ಮೊಸಳಯ್ಯನ ಗುಡ್ಡ ಹಾಗೂ ಬೃಂದಾವನ ರಸ್ತೆಗಳಲ್ಲಿ ಹಲವು ಚಿತ್ರಗಳು ಕಂಡು ಬಂದಿದ್ದು ಅವುಗಳನ್ನು ಚಿತ್ರಗಳ ನೆಲೆಯ ಸಂಖ್ಯೆ ಮೂಲಕ ವಿವರಿಸಲಾಗಿದೆ. ಇವುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುವ ಚಿತ್ರವೆಂದರೆ ಮನುಷ್ಯ ಮತ್ತು ಪ್ರಾಣಿ ಚಿತ್ರಗಳು ಕಂಡು ಬರುತ್ತವೆ. ಅವುಗಳ ವಿವರ ಕೆಳಗಿನಂತಿವೆ.

ನೆಲೆ ಒಂದು :

ಈ ಚಿತ್ರವು ವಿರೂಪಾಕ್ಷದೇವರ ಗುಡಿಯ ಹಿಂದುಗಡೆ ಕಂಡು ಬರುತ್ತದೆ. ಈ ಚಿತ್ರದಲ್ಲಿ ಮನುಷ್ಯ ಮತ್ತು ಪ್ರಾಣಿಗಳನ್ನು ಸಂಯೋಜನಗೊಳಿಸಿದೆ. ಮನುಷ್ಯ ಚಿತ್ರವು ಸ್ವಲ್ಪ ದೊಡ್ಡ ಗಾತ್ರದಲ್ಲಿದ್ದ ಎತ್ತಿನ ಗಾತ್ರವು ಚಿಕ್ಕದಾಗಿದೆ.ಇವುಗಳಲ್ಲದೆ ಪಕ್ಷಿ ಮತ್ತು ಇತರೆ ಚಿಕ್ಕ ಚಿಕ್ಕ ಪ್ರಾಣಿಯ ಮನುಷ್ಯ ಕುಣಿತ ಚಿತ್ರ ಕಂಡು ಬರುತ್ತದೆ. ಕೆಲವು ಅಸ್ಪಷ್ಟವಾದ ಮಾಸಿದ ಚಿತ್ರಗಳು ಇವೆ.

ನೆಲೆ ಎರಡು :

ವಿಠ್ಠಲಸ್ವಾಮಿ ದೇವಾಲಯದ ಬಳಿ ಇರುವ ಮೊಸಳಯ್ಯನ ಗುಡ್ಡದ ನೆಲೆಯಲ್ಲಿ ಮಾನವರು, ಕಾಡುಕೋಣ, ಹುಲಿ, ಜಿಗರೆ, ಎತ್ತು ಮುಂತಾದ ಆಕರಗಳು ಕಂಡು ಬರುತ್ತವೆ. ಸುಗ್ರೀವ ಗುಹೆಯ ಬಳಿ ಇರುವ ಚಿತ್ರ ಒಂದರಲ್ಲಿ ಮನುಷ್ಯನೊಬ್ಬ ಎರಡು ಕೈಗಳನ್ನು ಮೇಲಕ್ಕೆತ್ತಿ ಮಾಂತ್ರಿಕ ಕ್ರಿಯೆಯಲ್ಲಿ ತೊಡಗಿದಂತಿದೆ. ಆತನ ಮುಖ ಮೈ ಎಲ್ಲವೂ ರೇಖಾ ವಿನ್ಯಾಸದಿಂದ ಸಂಯೋಜನೆಯನ್ನು ಮಾಡಿದೆ.

ನೆಲೆ ಮೂರು

ನೊಸಳಯ್ಯನ ಗುಡ್ಡದಲ್ಲಿಯೂ ಮತ್ತೊಂದು ನೆಲೆಯಲ್ಲಿ ಹುಲಿ ಮೈ ಮೇಲಿನ ರೇಖಾ ವಿನ್ಯಾಸದಂತೆ ಇಲ್ಲಿಯೂ ಚಿಹ್ನೆಗಳು ಕಂಡು ಬರುತ್ತವೆ. ಮತ್ತು ಸಾಲು ಮಾನವರು ತಮ್ಮ ಎರಡು ಕೈಗಳನ್ನು ಮೇಲಕ್ಕೆತ್ತಿದ್ದಾರೆ. ಯಾವುದೋ ಒಂದು ಚಟುವಟಿಕೆಯಲ್ಲಿ ತೊಡಗಿದ್ದಾರೆ. ಎಂದು ತಿಳಿಯುತ್ತದೆ. ಎಡ ಭಾಗದಲ್ಲಿ ಕೆಲ ಚಿತ್ರಗಳು ಮಾಸಿ ಅಸ್ಪಷ್ಟವಾಗಿವೆ. ಈ ಚಿತ್ರಗಳು ನಸುಕೆಂಪು ವರ್ಣರೇಖಾ ಚಿತ್ರಗಳಾಗಿವೆ.


ನೆಲೆ ನಾಲ್ಕು :

ಈ ನೆಲೆಯು ಬೃಂದಾವನ ರಸ್ತೆ ಬದಿಯಲ್ಲಿ ಕಂಡು ಬರುತ್ತದೆ. ಎತ್ತು, ಗೂಳಿ, ಮನುಷ್ಯಾಕ್ರತಿಗಳು ಕಂಡು ಬರುತ್ತವೆ. ಮಾನವರು ಕೈ, ಕೈ ಹಿಡಿದುಕೊಂಡು ಕುಣಿತದಲ್ಲಿ ತೊಡಗಿದಂತೆ ಕಾಣುತ್ತದೆ. ಈ ಚಿತ್ರದ ಕೆಳ ಭಾಗದಲ್ಲಿ ಸೇತುವೆ ಮಾಡಿ ಮನುಷ್ಯಾಕೃತಿಗಳು ಕಂಡು ಬರುತ್ತವೆ. ಇವು ನಸು ಕೆಂಪು ವರ್ಣಚಿತ್ರಗಳಾಗಿವೆ. ಒಟ್ಟಾರೆ ಇವುಗಳನ್ನು ಸ್ಮರಣಚಿತ್ರಣಗಳಾಗಿವೆ.


ಹಂಪಿ



ಹಂಪಿ (೧)



ಹಂಪಿ



ಹಂಪಿ

ಹಂಪಿ



ಹಂಪಿ (೨)



ಹಂಪಿ



ಹಂಪಿ

ಹಂಪಿ



ಹಂಪಿ (೩)




ಹಂಪಿ



ಹಂಪಿ (೨)

ಕಮಲಾಪುರ





ಕಮಲಾಪುರ

ಕಮಲಾಪುರ :

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಮುಂದೆ ಚಿತ್ರದ ನೆಲೆಗಟ್ಟಿದೆ. ಇಲ್ಲಿ ವಿಶಾಲಬಂಡೆಯ ಪಶ್ಚಿಮ ಇಳಿಜಾರಿನ ಮೇಲೆ ರೇಖಾಚಿತ್ರಗಳನ್ನು ಕೊರೆಯಲಾಗಿದೆ.[೧೧] ಎತ್ತಿನ

ಚಿತ್ರಗಳು ಕಂಡು ಬರುತ್ತವೆ. ಎತ್ತಿನ ಮೇಲೆ ಚಿತ್ರಗಳು ಕೂಡ ಕಂಡು ಬರುತ್ತವೆ. ಒಂದು ಪೂರ್ಣ

ವಿಶಿಷ್ಟವಾದ ಆಕೃತಿ ಇದೆ. ಇದು ಸ್ವಲ್ಪ ದೊಡ್ಡ ಗಾತ್ರದಲ್ಲಿದೆ. ಉದ್ದವಾದ ಬಾಲ, ಕಣ್ಣು ಕೊಡಗಳಿದ್ದು ಪೂರ್ಣತೆ ಕಂಡು ಬರುತ್ತದೆ. [೧೨] ಕೊರೆತ ಚಿತ್ರ ಸಂಯೋಜನೆಗೊಳಿಸಲಾಗಿದೆ. ರೇಖೆಯಲ್ಲಿ ಸರಳತೆ ಕಂಡು ಬರುತ್ತದೆ.

ನೆಲೆ ಎರಡು :

ಕನ್ನಡ ವಿಶ್ವವಿದ್ಯಾಲಯದ ಪೂರ್ವ ಬದಿಯ ಬಯಲಿನ ಒಂಟಿಕಲ್ಲು ಗುಂಡಿಯಲ್ಲಿ ಚಿತ್ರಗಳು ಕಂಡು ಬರುತ್ತವೆ. ಒಂಟಿಕಲ್ಲು ಗುಂಡಿನ ಕಲ್ಲಾಸೆರೆಯಲ್ಲಿ ಎತ್ತಿನ ಚಿತ್ರಗಳು [೧೩] ಗುಂಡಿನ ಕೆಳಗೆ ನವಿಲಿನ ಚಿತ್ರಗಳು ಮತ್ತು ಕೆಲವು ಉಳಿವಿನಾಕಾರದ ಚಿತ್ರಗಳು ಕಂಡು ಬರುತ್ತವೆ. ವರ್ಣಚಿತ್ರ ಮತ್ತು ಕುಟ್ಟಿದ ಚಿತ್ರಗಳಾಗಿವೆ.

ನೆಲೆ ಮೂರು :

ಕನ್ನಡ ವಿಶ್ವವಿದ್ಯಾಲಯದ ಮತ್ತೊಂದು ನೆಲೆ ಜಾನಪದ ಅಧ್ಯಯನ ವಿಭಾಗದ ಹಿಂಭಾಗದಲ್ಲಿ ಕೆಲ ಚಿತ್ರಗಳು ಕಂಡು ಬರುತ್ತವೆ. ಅವು ಮೀನು ಎತ್ತು, ಗೂಳಿ ಆಕೃತಿಗಳಿವೆ. ಅವುಗಳು ಕುಟ್ಟಿದ ಚಿತ್ರಗಳನ್ನು ಚಿತ್ರಿಸಿದ್ದಾರೆ.

ವೆಂಕಟಾಪುರ :

ಇದು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನಿಂದ ೧೫ ಕಿ.ಮೀ ದೂರದ ಈ ಪ್ರದೇಶದಲ್ಲಿ ಹಲವು ಚಿತ್ರಗಳು ಕಂಡು ಬರುತ್ತವೆ. ಅವು ಈ ಕೆಳಗಿನಂತಿವೆ.


ನೆಲೆ ಒಂದು :

ಎರಡು ಮಾನವಾಕೃತಿಗಳಿದ್ದು ಒಮದು ಜಿಂಕೆ ಒಂದು ನವಿಲು ಚಿತ್ರಗಳು ಕಂಡು ಬರುತ್ತವೆ. ಇವುಗಳನ್ನಲ್ಲದೇ ಹಲವು ಚಿತ್ರಗಳು ಮಸುಕಾಗಿ ಕಂಡು ಬರುತ್ತವೆ. ಜಿಂಕೆ ಮತ್ತು ನವಿಲಿನ ಚಿತ್ರವು ನೈಜತೆಯಿಂದ ಕೂಡಿದೆ. ಇವುಗಳು ಬಿಳಿ ಬಣ್ಣದ ಚಿತ್ರಗಳಾಗಿವೆ. ಮನುಷ್ಯಕೃತಿಯನ್ನು ತ್ರಿಕೋನ ಚಿಹ್ನೆಯಿಂದ ಗುರುತಿಸಲಾಗಿದೆ.

ನೆಲೆ ಎರಡು :


ಈ ನೆಲೆಯಲ್ಲಿ ಮಾನವರ ಚಿತ್ರಗಳು ಕಂಡು ಬರುತ್ತವೆ. ಇತ್ತೀಚೆಗೆ ಎರಡು ಪ್ರಕಾರಗಳಲ್ಲಿ ಚಿತ್ರಗಳನ್ನು ಕಾಣಬಹುದು ಒಂದು ರೇಖಾ ಚಿತ್ರ ಮತ್ತೊಂದು ನೆರಳು ವರ್ಣಚಿತ್ರಗಳ ಸಂಯೋಜನೆ.


ವೆಂಕಟಾಪುರ



ವೆಂಕಟಾಪುರ

ವೆಂಕಟಾಪುರ





ವೆಂಕಟಾಪುರ(ಆಸುಂದರ.ಕೃಪೆ)

ಒಳಗೊಂಡಂತಿವೆ. ನೆರಳ ಚಿತ್ರಗಳು ಮಾನವಾಕೃತಿಯ ತಲರಯ ಮೇಲೆ ಸೂರ್ಯನ ಕಿರಣಗಳಂತಹ ಆಕಾರದ ಕೀರಿಟ ಧರಿಸಿದ ತಮ್ಮದೇಯಾದ ಒಂದು ಆಚರಣೆಯಲ್ಲಿ ಸಂಭ್ರಮಿಸುವ ಕುಣಿತದ ದೃಶ್ಯ ಇದಾಗಿದೆ.

ನೆಲೆ ಮೂರು :

ಹಂಪೆಯಿಂದ ವೆಂಕಟಾಪುರಕ್ಕೆ ಹೋಗುವ ರಸ್ತೆಯಲ್ಲಿ ಬರುವ ನೆಲೆಯಾಗಿದೆ. ಇಲ್ಲಿ ಜಿಂಕೆ, ಸಾರಂಗ, ಮೇಕೆ, ಮುಖ, ತೋಳ, ಮನುಷ್ಯ ಚಿತ್ರಗಳು ಕಂಡು ಬರುತ್ತವೆ. ಇಲ್ಲಿ ಎರಡು ಪ್ರಕಾರದಲ್ಲಿ ಚಿತ್ರಗಳಿವೆ. ರೇಖಾ ಮತ್ತು ನೆರಳಿನಾಕಾರದ ನಸುಕೆಂಪು ವರ್ಣ ಚಿತ್ರಗಳು ಕಂಡು ಬರುತ್ತವೆ.

ಕುರುಗೋಡು :

ಇದು ಬಳ್ಳಾರಿಯಿಂದ ಮೂವತ್ತು (೩೦)ಕಿ.ಮೀ. ದೂರದಲ್ಲಿ ಬಳ್ಳಾರಿ ಕಂಪ್ಲಿ ರಸ್ತೆಯಲ್ಲಿ ಇದೆ. ಇದು ತಾಲೂಕು ಕೇಂದ್ರವೂ ಆಗಿದೆ. ಈ ಪ್ರದೇಶದ ಸುತ್ತ ಮುತ್ತಲಿನ ಗುಹೆಯ ಚಿತ್ರಗಳು ದೋರೆತಿವೆ. ಈ ಚಿತ್ರಗಳ ಸಮಕಾಲೀನ ನಾಗರೀಕತೆಯ ಹಲವು ಕುರುಹುಗಳು ದೊರೆತಿವೆ.ಪುರಾತನ ಕುರಗೋಡು ಪಟ್ಟಣದ ಆಗ್ನೆಯ, ಈಶಾನ್ಯ, ಪಶ್ಚಿಮ ಮತ್ತು ಉತ್ತರದಿಕ್ಕಿಗೆ ಹೊಂದಿಕೊಂಡಿರುವ ಬೆಟ್ಟಗಳಲ್ಲಿ ದೊಡ್ಡ ಗುಂಡುಗಳಿಂದ ಸ್ವಾಭಾವಿಕವಾಗಿ ನಿರ್ಮಿತವಾದ ಹಲವಾರು ಗುಹೆಗಳು ಇವೆ.[೧೪] ಕೆಲವು ಗುಹೆಗಳ ಮೇಲ್ಭಾಗದ ಬಂಡೆಗಳು ಚಾಚಿದ್ದು ಈ ರೀತಿಯ ಕಲ್ಲಾಸರೆಗಳಲ್ಲಿ ತಾಮ್ರ ಶಿಲಾಯುಗದ ೧೮ ಚಿತ್ರಗಳನ್ನು ಇತಿಹಾಸಕಾರರು ಗುರುತಿಸಿದ್ದಾರೆ.

ವಸ್ತು ವಿಷಯ :

ದನ, ಎತ್ತು, ಜಿಂಕೆ ಹುಲಿ, ಚಿರತೆ, ಆನೆ, ಮೊದಲಾದ ಪ್ರಾಣಿಯ ಚಿತ್ರಗಳಾಗಿದ್ದು, ಕೆಂಪು ಕಪ್ಪು ಕಂದು ಮತ್ತು ಬಿಲಿ ವರ್ಣಗಳಲ್ಲಿ ಬರೆದ ಚಿತ್ರಗಳು ಕಂಡು ಬಂದಿವೆ. ಇವುಗಳ ವಿವರಣೆ ಕೆಳಗಿನಂತಿವೆ.

ಚಿತ್ರ ಒಂದು :


ಕುರುಗೋಡು ಹಳೆ ಪಟ್ಟಣದಲ್ಲಿರುವ ತ್ರಿಕೂಟ ದೇವಸ್ಥಾನ ದಕ್ಷಿಣಕ್ಕಿರುವ ಕೆಲವು ಗೋಡೆಗಳು ಮಧ್ಯದಲ್ಲಿದ್ದ ಗವಿಯಲ್ಲಿ ಗರ್ಭಧರಿಸಿದ ಒಂದು ಜಿಂಕೆ ಚಿತ್ರವನ್ನು ಚಿತ್ರಿಸಲಾಗಿದೆ. ವಿಶೇಷವಾಗಿ ಅದರ ಹೊಟ್ಟೆಯ ಭಾಗವನ್ನು ದೊಡ್ಡದಾಗಿರುವಂತೆ ಚಿತ್ರಿಸಲಾಗಿದೆ. ಈ ಚಿತ್ರದಿಂದ ಪರಿಸರದ ಪ್ರಾಣಿಗಳ ಪರಿಚಯ ಚೆನ್ನಾಗಿದ್ದು [೧೫] ಅವುಗಳ ಸಂಪೂರ್ಣ ಚಿತ್ರಗಳು ಸ್ಮರಣೀಯಲ್ಲಿತ್ತು ಎಂಬುದು ತಿಳಿಯುತ್ತದೆ.

ಚಿತ್ರ ಎರಡು :

ಈಶ್ವರ ಗುಡ್ಡದ ಪಶ್ಚಿಮ ಭಾಗದ ಹಿಂಭಾಗದಲ್ಲಿ ಒಂದು ದೊಡ್ಡ ಗುಂಡಿನ ತಗ್ಗಾದ ಭಾಗದಲ್ಲಿ (Rock Shetter) ನಸುಕಾವಿ ಬಣ್ಣದಲ್ಲಿ ಬರೆದಿರುವ ಬಣ್ಣದಲ್ಲಿ ಬರೆದಿರುವ ಉದ್ದವಾದ ಕೋಡುಗಳು ದೊಡ್ಡದಾದ ಭುಜವುಳ್ಳ ಹೋರಿಗಳ ಚಿತ್ರಗಳಿವೆ.[೧೬]ಈ ಚಿತ್ರದಲ್ಲಿ ಎರಡು ಹೋರಿಗಳು ಪರಸ್ಪರ ಎದುರಾಗಿ ನಿಂತಿದ್ದು, ಎರಡರ ಭುಜದ ಭಾಗ ಮಾತ್ರ ಒಂದಾಗಿ ಹೊಂದಿಕೊಂಡಿದ್ದು ದೇಹದ ಇತರೆ ಭಾಗಗಳು ಪ್ರತ್ಯೇಕವಾಗಿ ಕಾಣುತ್ತಿರುವುದು ವೈಶಿಷ್ಟವಾಗಿದೆ[೧೭] ಮತ್ತು ಅದರ ಸೌಂದರ್ಯದ ಪ್ರಜ್ಞೆ ರೇಖಾ ಲಾಲಿತ್ಯ



ಕುರುಗೋಡ (ಆಸುಂದರ.ಕೃಪೆ)



ಕುರುಗೋಡ (ಆಸುಂದರ.ಕೃಪೆ)

ಮನೋಹರವಾದುದ್ದಾಗಿದೆ.

ಹಳೆ ಕುರುಗೋಡು (ರಾಜದಾನಿ ಪಟ್ಟಣದ) ನೆಲೆಗೆ ಹೊಂದಿಕೊಂಡು ದಕ್ಷಿಣ ಭಾಗದಲ್ಲಿ ಹಬ್ಬಿರುವ ಬಂಡೆಗಳ ಮೇಲೆ ಕಲ್ಲಿನಿಂದ ಕುಟ್ಟಿ ರಚಿಸಿರುವ ಕೆಲವು ಆಕೃತಿಗಳು (Bruisings) ಕಂಡು ಬಂದಿವೆ.[೧೮] ಎಂದು ಬೆಟ್ಟದ ಅಂಚಿನ ಬಂಡೆಗಳ ಮೇಲೆ ಒಂದರ ಒಳಗೆ ಒಂದರಂತೆ ೪-೫ ಚೌಕುಗಳಿರುವ ಗುರುತುಗಳಿದ್ದು, ಇವುಗಳು ಒಂದರ ಪ್ರಕಾರದಲ್ಲಿ ಒಂದರಂತೆ ಇರುವ ಕೋಟೆ ಗೋಡೆಗಳನ್ನು ಹೋಲುತ್ತವೆ.[೧೯] ಇನ್ನೂ ಕೆಲವು ಕಡೆ ಬಾಣದ ಗುರುತುಗಳಂತಿರುವ ರೇಖಾ ಸಂಕೇತಗಳಾಗಿ ಸಂಯೋಜನೆ ಮಾಡಿದ್ದಾರೆ.

ಬಳ್ಳಾರಿ ಕೋಟೆ :

ವಿಜಯನಗರ ಪತನಾನಂತರ ಈ ಪ್ರದೇಶದಲ್ಲಿ ಅನಂತಪುರ ಸೇರಿದಂತೆ ಸ್ಥಳೀಯ ಮುಖ್ಯಸ್ಥರು ಪಾಳೆಯಗಾರರಾಗಿ ಆಳ್ವಿಕೆ ನಡೆಸಿದರು. ಬಳ್ಳಾರಿ ಪಾಳೆಗಾರರ ರಾಜಮನೆತನದ ಸ್ಥಾಪಕ ಬಾಲಕ ಹನುಮಪ್ಪನಾಯಕ ಕೋಟೆಯನ್ನು ಇವನೇ ನಿರ್ಮಾಣ ಮಾಡಿದನೆಂದು ವಿದ್ಯಾರಣ್ಯರ ಅಭಿಪ್ರಾಯ. ವಿಶ್ವದ ನಾಲ್ಕು ಅತ್ಯಂತ ಪುರಾತನ ಏಕಶಿಲಾ ಬೆಟ್ಟಗಳಲ್ಲಿ ಬಳ್ಳಾರಿ ನಗರದ ಮಧ್ಯದಲ್ಲಿರುವ 'ಏಕಶಿಲಾಬೆಟ್ಟ' ಒಂದಾಗಿದ್ದು ಇದಕ್ಕೆ ತನ್ನದೇಯಾದ ಐತಿಹಾಸಿಕ ಪರಂಪರೆ ಇದೆ. ಇದರ ಸುತ್ತಳತೆ ಸುಮಾರು ಎರಡೂವರೆ ಕಿ.ಮೀ. ಇದ್ದು ಸಮುದ್ರಮಟ್ಟದಿಂದ ೧೪೬ ಮೀಟರ್‌ಗಳಷ್ಟು ಎತ್ತರವಿದೆ. ಇದು ಕೋಟ್ಯಾಂತರ ವರ್ಷಗಳಷ್ಟು ಹಳೆಯದಾಗಿದ್ದು ಶಿಲಾಯುಗದ ಕಾಲದ ಜನರು ಬಳಸುತ್ತಿದ್ದ ಶಿಲಾಯುಧಗಳು ಮತ್ತು ಪಳಯುಳಿಕೆಗಳು ಇಲ್ಲಿ ಕಂಡು ಬಂದಿವೆ.[೨೦] ಎಂದು ಈಗಾಗಲೇ ಸಂಶೋಧನೆಯಿಂದ ತಿಳಿದು ಬಂದಿದೆ. ಈ ಬೆಟ್ಟದಲ್ಲಿ ಕೆಂಪು, ಬಿಳಿ, ಮತ್ತು ಹಳದಿ ವರ್ಣಚಿತ್ರಗಳು ಕಂಡು ಬಂದಿವೆ. ಉತ್ತರ ಮತ್ತು ಪೂರ್ವ ದಿಕ್ಕುಗಳ ಕಲ್ಲಾಸರೆಯಲ್ಲಿ ಚಿತ್ರಗಳು ಕಂಡು ಬರುತ್ತವೆ.


ವಸ್ತು ವಿಷಯ :

ಎತ್ತುಗಳು ಮನುಷ್ಯಾಕೃತಿಯ ಜಿಂಕೆ ಎಮ್ಮೆ ವೊಂಡಗಳು ನವಿಲುಗಳ ಕಂಡು ಬರುತ್ತವೆ. ಬಿಳಿ, ಕೆಂಪು, ಹಳದಿ ಬಣ್ಣದ ಚಿತ್ರಗಳಾಗಿವೆ. ಅವುಗಳು ಕೆಳಗಿನಂತಿವೆ.

ನೆಲೆ ಒಂದು :

ಈ ನೆಲೆಯಲ್ಲಿ ಎತ್ತುಗಳು ಬಿಳಿ ಬರ್ಣದ ಮನುಷ್ಯಾಕೃತಿಯ ಜಿಂಕೆ, ಎಮ್ಮೆ, ಗೂಳಿ ಮತ್ತು ವೊಂಡ ಚಿತ್ರಗಳು ಕಂಡು ಬಂದಿದ್ದು ಈ ವೊಂಡಗಳು ಈಗಲೂ ಕೋಟೆಯಲ್ಲಿ ಇರುವಂತ ಈ ವೊಂಡಗಳನ್ನು ಕೆಂಪುವರ್ಣದ ಕೆಲವು ಲಕ್ಷಣಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಈ ಚಿತ್ರಗಳು ಕೋಟೆಯ ದಕ್ಷಿಣ ದಿಕ್ಕಿನಲ್ಲಿ ಕಂಡು ಬರುತ್ತವೆ. ಕೋಟೆಯ ನಕಾಶೆಯನ್ನು ತೋರಿಸಿದ್ದಾರೆ. ಮತ್ತು ಚಿಕ್ಕ ಚಿಕ್ಕದಾಗಿ ಇರುವಂತಹ ನೀರಿನ ವೊಂಡ ಇಲ್ಲಿ ಕಾಣಬಹುದು. ಒಟ್ಟಾರೆ ಇಡೀ ಕೋಟೆಯ ಭೂ-ದೃಶ್ಯವನ್ನು ಚಿತ್ರಿಸಲು ಪ್ರಯತ್ನಿಸಿದ್ದಾನೆ. ಪ್ರಾಣಿ, ಪಕ್ಷಿ, ಮನುಷ್ಯಾಕೃತಿಗಳನ್ನು ಚಿತ್ರಿಸಿ ಜೀವನ ಪರಿಸರದ ದೃಶ್ಯಾವಳಿಗಳನ್ನು ಈ ಚಿತ್ರದಿಂದ ತಿಳಿದು ಕೊಳ್ಳಬಹುದಾಗಿದೆ. ಬಿಳಿ ಮತ್ತು ಕೆಂಪು ವರ್ಣ ಮಿಶ್ರಿತ ಚಿತ್ರಗಳ ಸಂಯೋಜನೆಯು

ಬಳ್ಳಾರಿ ಕೋಟೆ (ಗುಡ್ಡ)




ಬಳ್ಳಾರಿ ಕೋಟೆ (ಗುಡ್ಡ) ೧



ಬಳ್ಳಾರಿ ಕೋಟೆ (ಗುಡ್ಡ)



ಬಳ್ಳಾರಿ ಕೋಟೆ (ಗುಡ್ಡ)





ಬಳ್ಳಾರಿ ಕೋಟೆ (ಗುಡ್ಡ)



ಬಳ್ಳಾರಿ ಕೋಟೆ (ಗುಡ್ಡ) ೨


ಬಳ್ಳಾರಿ ಕೋಟೆ (ಗುಡ್ಡ)






ಬಳ್ಳಾರಿ ಕೋಟೆ (ಗುಡ್ಡ)

ಬಳ್ಳಾರಿ ಕೋಟೆ (ಗುಡ್ಡ)



ಬಳ್ಳಾರಿ ಕೋಟೆ (ಗುಡ್ಡ)



ಬಳ್ಳಾರಿ ಕೋಟೆ (ಗುಡ್ಡ)



ಬಳ್ಳಾರಿ ಕೋಟೆ (ಗುಡ್ಡ)

ಬಳ್ಳಾರಿ ಕೋಟೆ (ಗುಡ್ಡ)



ಬಳ್ಳಾರಿ ಕೋಟೆ (ಗುಡ್ಡ) ೩

ಬಳ್ಳಾರಿ ಕೋಟೆ (ಗುಡ್ಡ)






ಬಳ್ಳಾರಿ ಕೋಟೆ (ಗುಡ್ಡ)


ಬಳ್ಳಾರಿ ಕೋಟೆ (ಗುಡ್ಡ)



ಬಳ್ಳಾರಿ ಕೋಟೆ (ಗುಡ್ಡ)

ಬಳ್ಳಾರಿ ಕೋಟೆ (ಗುಡ್ಡ)





ಬಳ್ಳಾರಿ ಕೋಟೆ (ಗುಡ್ಡ)

ತನ್ನ ಕಲಾಕೌಶಲ್ಯವೇ ಸರಿ. ಎಂದು ಹೇಳಬಹುದು.

ನೆಲೆ ಎರಡು :

ಈ ನೆಲೆಯಲ್ಲಿ ಬಿಳಿ ವರ್ಣ ಚಿತ್ರಗಳು ಹಳದಿ ವರ್ಣಚಿತ್ರಗಳು ಬಿಳಿ-ಹಳದಿ, ಮಿಶ್ರಿತ ಚಿತ್ರಗಳು ಕಂಡು ಬರುತ್ತವೆ. ಕೋಟೆಯ ಪೂರ್ವದಲ್ಲಿ ಈ ವರ್ಣಚಿತ್ರಗಳು ಕಂಡು ಬರುತ್ತವೆ. ಇಲ್ಲಿ ನವಿಲು, ನಾಯಿ, ಮಹಿಳೆಯರು ಮತ್ತು ಪುರುಷರ ಚಿತ್ರಗಳು ಕಂಡು ಬರುತ್ತವೆ. ಇವು ವರ್ಣ ರೇಖಾ ಚಿತ್ರಗಳಾಗಿವೆ. ಇಲ್ಲಿ ಮಹಿಳೆಯರ ಚಿತ್ರವು ವಿಶಿಷ್ಟವಾಗಿವೆ. ಒಂದು ಮಹಿಳೆಯ ಚಿತ್ರವು ಹಳದಿ ರೇಖಾ ಚಿತ್ರದಿಂದ ಕೂಡಿದ್ದು ಹಿಂದುಗಡೆ ಕೇಶವಿನ್ಯಾಸ, ಸ್ತನಗಳು ಆಡುತ್ತಿರುವ ಭಂಗಿಯಲ್ಲಿ ಕಂಡು ಬರುತ್ತವೆ. ತನ್ನ ಎರಡು ಕೈಗಳನ್ನು ಮೇಲಕ್ಕೆತ್ತಿ ಕುಣಿಯುತ್ತಿರುವಂತೆ ತೋರುತ್ತದೆ. ರೇಖೆಯ ಲಾಲಿತ್ಯದಲ್ಲಿ ಮಹಿಳೆಯ ಚಿತ್ರ ಪರಿಪೂರ್ಣತೆಯನ್ನು ಬಿಂಬಿಸುತ್ತದೆ.

ಮತ್ತೊಂದು ಮಹಿಳೆಯ ಚಿತ್ರ ಬಿಳಿ ಬರ್ಣದ್ದಾಗಿದೆ. ಈ ಚಿತ್ರಕ್ಕೆ ಉಡಿಗೆ ತೊಟ್ಟಂತೆ ಚಿತ್ರ ಚಿತ್ರಿಸಿದ್ದಾನೆ. ಎದೆಯಿಂದ ಸೊಂಟದವರೆಗೆ ಸೊಂಟವು ಸಣ್ಣಗೆ ಸೊಂಟದ ಕೆಳಭಾಗದಿಂದ ಮಂಡಿಯವರೆಗೆ ಉಡಿಗೆ ಬರುತ್ತದೆ. ಒಂದು ಕೈಮೇಲಕ್ಕೆ ಮತ್ತೊಂದು ಕೆಳಕ್ಕೆ ಇದೆ. ಪಕ್ಕದಲ್ಲಿಯೇ ಪುರುಷನ ಚಿತ್ರವು ಕಂಡು ಬರುತ್ತಿದ್ದು ಅವರು ಕೂಡ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಇವು ಬಿಳಿ ವರ್ಣದಿಂದ ಕೂಡಿದೆ. ಇಲ್ಲಿ ನವಿಲಿನ ಚಿತ್ರವು ಎರಡು ವರ್ಣದಿಂದ (ಬಿಳಿ ಮತ್ತು ಹಳದಿ) ಸಂಯೋಜಿಸಿದ್ದಾರೆ. ಮಧ್ಯದಲ್ಲಿ ಹಳದಿ ಸುತ್ತಲೂ ಬಿಳಿ ವರ್ಣದಿಂದ ಚಿತ್ರಿಸಿದ್ದಾರೆ. ಹೆಣ್ಣು ನವಿಲು ಮತ್ತು ಗಂಡು ನವಿಲಿನ ಚಿತ್ರಗಳು ಮುಖಾಮುಖಿಯಾಗಿವೆ. ಒಟ್ಟಾರೆ ಒಂದರ ಪಕ್ಕ ಒಂದು ಸುಂದರವಾಗಿ ಚಿತ್ರಿಸಿದ್ದಾರೆ. ಈಗಿನ ಪ್ರಸ್ತುತದಲ್ಲಿ ವರ್ಣ ಸಂಯೋಜನೆ (Colour Comporition) ಎಂದು ಹೇಳುವಂತೆ ಆಗಿನ ಕಾಲದಲ್ಲಿಯೇ ಸುಂದರವಾದ ಸಂಯೋಜನ ಹೇಗೆ ಇತ್ತು ಎಂಬುದಕ್ಕೆ ಈ ಚಿತ್ರವು ನಿದರ್ಶನವಾಗಿದೆ.

ನೆಲೆ ಮೂರು :

130025

ಈ ನೆಲೆಯ ಚಿತ್ರವು ಪೂರ್ವಾಭಿಮುಕವಾಗಿದೆ ಇಲ್ಲಿ ಕಲ್ಲಾಸರೆಯ ಕೆಳಭಾಗದಲ್ಲಿ ಹಲ್ಲಿ ಚಿತ್ರವಿದೆ. ಈ ಚಿತ್ರವು ಸುಮಾರು ಒಂದರಿಂದ ಒಂದುವರೆ ಮೀಟರ್ ಉದ್ದವಾಗಿದೆ. ಇದು ಕೆಂಪು ವರ್ಣದ ರೇಖಾ ಚಿತ್ರವಾಗಿದೆ. ಇಲ್ಲಿ ತಾಂತ್ರಿಕದ ಹಿನ್ನೆಲೆಯಲ್ಲಿ ಮೈ ಮೇಲೆ ರೇಖೆಗಳನ್ನು ಎಳೆಯಲಾಗಿದೆ . ಇದರ ಕೆಳಗೆ ಬಂಡೆಯ ಬದಿಯಲ್ಲಿ ಮನುಷ್ಯಾಕೃತಿಯಿದೆ. ಇದು ತಲೆಕೆಳಗಾಗಿದೆ. ಪಕ್ಕದಲ್ಲಿಯೇ ಬಿಲ್ಲು ಹಿಡಿದ ಮಾನವಾಕೃತಿಯಿದೆ. ಇವು ಕೂಡಾ ಕೆಂಪು ವರ್ಣದ ಚಿತ್ರಗಳಾಗಿವೆ.

ಸಂಗನಕಲ್ಲು ಮತ್ತು ಕಪ್ಪಗಲ್ಲು :

ಸಂಗನಕಲ್ಲು ಎಂದಾಕ್ಷಣ ಕೇವಲ ಮನೆ ಕಟ್ಟಲಿಕ್ಕೆ ಸಿಗುವ ಕಲ್ಲಿನ ಬಂಡೆಗಳು ಕಲ್ಲಿನ ಮಡಿ ಎಂದೇ ಸಾಮಾನ್ಯವಾಗಿ ತಿಳಿದಿರುವ ಆದರೆ ಇವುಗಳ ಹಿಂದೆ ಜನ ಜೀವನ ಇತ್ತು ಎಂದು ತಿಳಿದಾಕ್ಷಣ ತುಂಬಾ ಕುತೂಹಲವಾದ ಪ್ರದೇಶವಾಗಿದೆ. ಇಲ್ಲಿ ಸಣ್ಣ ರಸಮ್ಮ ಬೆಟ್ಟ ಸದಾಶಿವ ಬೆಟ್ಟ, ಚೌಡಮ್ಮ ಬೆಟ್ಟ,

ಹಾಗೂ ಹಿರೇಬೆಟ್ಟ ಎಂಬ ನಾಲ್ಕು ಬೆಟ್ಟಗಳಿದ್ದು ಒಂದೊಂದು ಬೆಟ್ಟಕ್ಕೆ ಒಂದು ವಿಶೇಷತೆ ಇದೆ. ಇಲ್ಲಿ ಲಭ್ಯವಾಗಿರುವ ಕಲ್ಲುಗಳು ಉತ್ತಮ ಮಟ್ಟದ್ದಾಗಿದ್ದು ಕಲ್ಲಿನ ಆಯುಧಗಳಿಗೆ ಬಳಸಲು ಯೋಗ್ಯ ರೀತಿಯಲ್ಲಿವೆ. ಅವು ೨೭ ಎಂಬುದನ್ನು ಇಲ್ಲಿಯತನಕ ಸಿಕ್ಕಿರುವ ಅವಶೇಷಗಳಿಂದ ತಿಳಿಯಬಹುದಾಗಿದೆ. ಈ ಬೆಟ್ಟಗಳಲ್ಲಿ ಮಾನವನ ಇತಿಹಾಸದ ಮುಂಚೆ ಬಳಸುತ್ತಿದ್ದ ಶಿಲಾಯುಗದ ಅವಶೇಷಗಳಿಂದ ದೊರಕಿದ್ದು ಅವುಗಳಲ್ಲಿ ಮಾನವನು ಪ್ರಾಣಿಗಳ ಬೇಟೆಗಾಗಿ ಬಳಸುತ್ತಿದ್ದ ಚೂಪಾದ ನವೀನ ಮಾದರಿಯ ಕಲ್ಲಿನ ಕೊಡಲಿಯಂತೆ ಇದ್ದು, ಕಪ್ಪು ಮಿಶ್ರಿತವಾದ ಬಣ್ಣ ಹೊಂದಿದೆ. ಮತ್ತು ದುಂಡನೆಯ ಕಲ್ಲುಗಳು ಚೂಪಾದ ಕೊನೆ ಇರುವ ಕಲ್ಲಿನ ಆಯುಧಗಳು ಲಭ್ಯವಾಗಿವೆ. ಬೇಟೆಯಾಡುತ್ತಿರುವ ಮನುಷ್ಯರ ಚಿತ್ರಗಳನ್ನು ಕಾಣಬಹುದು.

ವಸ್ತು ವಿಷಯ :

ಕೆಂಪು ವರ್ಣ ಚಿತ್ರಗಳು ಗೀರು ಕುಟ್ಟಿ ಚಿತ್ರ ಈ ಪ್ರದೇಶದಲ್ಲಿ ಕಂಡು ಬಂದಿದ್ದು ಜಿಂಕೆ ಮಾನವಾಕೃತಿಗಳು ಮೀನು ಗೂಳಿ, ಎತ್ತು, ಕುಣಿತದ ಮತ್ತು ಇತರೆ ಚಿತ್ರಗಳನ್ನು ಕಂಡು ಬಂದಿದ್ದು ಅವು ಕೆಳಗಿನಂತಿವೆ.

ನೆಲೆ ಒಂದು :

ಈ ನೆಲೆಯ ಚಿತ್ರವು ಕೆಂಪು ವರ್ಣದಿಂದ ಕೂಡಿದ್ದು ಮಾನವನು ಎರಡು ಕೈಗಳಲ್ಲಿ ಬೇಟೆಗೆ ಸಂಬಂಧಿಸಿದ ವಸ್ತುವನ್ನು ಹಿಡಿದುಕೊಂಡಿದ್ದು ಪಕ್ಕದಲ್ಲಿಯೇ ಕೈ ಮತ್ತು ಬೆರಳುಗಳು ಕಂಡು ಬರುತ್ತದೆ. ಇನ್ನೂ ಅಸ್ಪಷ್ಟವಾದಂತ ಚಿತ್ರ ಕಂಡು ಬರುತ್ತದೆ. ತನ್ನ ಮಟ್ಟದ ಜ್ಞಾನ ಚಿತ್ರ ಸಂಯೋಜನೆಯು ಒಳಗೊಂಡಿದೆ.

ನೆಲೆ ಎರಡು :

ಈ ನೆಲೆಯ ಚಿತ್ರದಲ್ಲಿ ಎತ್ತಿನ ಮೇಲೆ ನಿಂತಿರುವ ಚಿತ್ರವಾಗಿದೆ. ಪಕ್ಕದಲ್ಲಿಯೇ ಎತ್ತಿನ ಹಿಂಭಾಗದಲ್ಲಿ ಒಂದು ಬಂಡೆಯಾಕಾರದ ಚಿತ್ರವಿದೆ. ತನ್ನ ಎರಡು ಕೈಗಳಿಂದ ಸಮತೋಲನವನ್ನು ಸಾಧಿಸಿಕೊಳ್ಳುತಿರುವಂತೆ ಕಂಡು ಬರುತ್ತದೆ. ಈ ಎರಡು ಚಿತ್ರಗಳ ಸಂಯೋಜನೆಯ ಸ್ಥಳಾವಕಾಶದ ಪೂರ್ಣ ಬಳಕೆ ಸಮತೋಲನ ಆಗುವಂತೆ ಚಿತ್ರಿಸಿದ್ದಾನೆ. ಈ ಚಿತ್ರದ ಹಿಂಭಾಗವು ಕಲ್ಲ(ಭಿತ್ತಿ)ನ್ನು ಮೊದಲಿಗೆ ನಯಗೊಳಿಸಿ ನಂತರ ಚಿತ್ರ ಮಾಡಿರುವಂತೆ ಕಂಡು ಬರುತ್ತದೆ. ಇದು ರೇಖಾಕೃತಿಯಾಗಿದೆ.

ನೆಲೆ ಮೂರು :

ಈ ಚಿತ್ರವು ಸುಂದರವಾಗಿ ಎತ್ತಿನ ಚಿತ್ರವಾಗಿದ್ದು ಇದರ ಮೇಲೆ ಯಾವ ಕೃತಿಯು ಅಸ್ಪಷ್ಟವಾದ ಕುಟ್ಟಿದ ಚಿತ್ರವಿದೆ. ಈ ಚಿತ್ರದಲ್ಲಿ ಉದ್ದನೆಯ ಕೋಡು ಕಣ್ಣು, ಮುಖ, ಬಾಲ ಮತ್ತು ಕಾಲುಗಳನ್ನು ಸುಂದರವಾದ ಪರಿಪೂರ್ಣವಾದ ಕೊರೆದ ಎತ್ತಿನ ಚಿತ್ರವಾಗಿದೆ. ಈ ಚಿತ್ರ ರೇಖೆಯ ಸುಲಭದ ರೀತಿಯಲ್ಲಿ ರೇಖಾ ಸಂಯೋಜನೆ ಮಾಡಿದ್ದಾನೆ. ಮುಖ್ಯವಾಗಿ ಎರಡು ರೇಖೆಗಳು ಬಳಸಿಕೊಂಡಿದ್ದು, ಮೇಲಿನ ರೇಖೆಯ ಮೈ ಮೇಲ್ಭಾಗ ಮುಂದಿನ ಹಿಂದಿನ ಎರಡು ಕಾಲುಗಳಿಗೆ ಮೊದಲನೆಯ ರೇಖೆಯಾಗಿದೆ. ಎರಡನೆಯ ರೇಖೆಯು ಮೈ ಕೆಳಭಾಗ ಮುಂದಿನ ಮತ್ತು ಹಿಂದಿನ ಭಾಗದ ಕಾಲುಗಳಿಗೆ ರೇಖಾ ಸಂಯೋಜನೆಗೊಳಿಸಿದ್ದಾನೆ. ಮತ್ತೊಂದು ಮೇಲ್ಭಾಗದ ಹಿಂದಿನ ಕಾಲು ಮತ್ತು ಮುಂದಿನ ಕಾಲುಗಳಿಗೆ

ಸಂಗನಕಲ್ಲು ಮತ್ತು ಕಪ್ಪುಗಲ್ಲು



ಸಂಗನಕಲ್ಲು ಮತ್ತು ಕಪ್ಪುಗಲ್ಲು (೧)



ಸಂಗನಕಲ್ಲು ಮತ್ತು ಕಪ್ಪುಗಲ್ಲು (೨)



ಸಂಗನಕಲ್ಲು ಮತ್ತು ಕಪ್ಪುಗಲ್ಲು (೩)



ಸಂಗನಕಲ್ಲು ಮತ್ತು ಕಪ್ಪುಗಲ್ಲು (೪)




ಸಂಗನಕಲ್ಲು ಮತ್ತು ಕಪ್ಪುಗಲ್ಲು (೫)




ಸಂಗನಕಲ್ಲು ಮತ್ತು ಕಪ್ಪುಗಲ್ಲು (೬)




ಸಂಗನಕಲ್ಲು ಮತ್ತು ಕಪ್ಪುಗಲ್ಲು (೭)



ಸಂಗನಕಲ್ಲು ಮತ್ತು ಕಪ್ಪುಗಲ್ಲು (೮)



ಸಂಗನಕಲ್ಲು ಮತ್ತು ಕಪ್ಪುಗಲ್ಲು (೯)



ಸಂಗನಕಲ್ಲು ಮತ್ತು ಕಪ್ಪುಗಲ್ಲು (೧೦)



ಸಂಗನಕಲ್ಲು ಮತ್ತು ಕಪ್ಪುಗಲ್ಲು (೧೧)



ಸಂಗನಕಲ್ಲು ಮತ್ತು ಕಪ್ಪುಗಲ್ಲು (೧೨)

ಸಂಯೋಜಿಸಲಾಗಿದೆ. ಇದರಿಂದ ತಿಳಿಯುವುದು. ರೇಖೆಯಲ್ಲಿ ಸರಳ ಕೌಶಲ್ಯ ಇವನಿಗೆ ಇತ್ತು ಎಂದು ತಿಳಿದು ಬರುತ್ತದೆ.

ನೆಲೆ ನಾಲ್ಕು :

ಈ ಚಿತ್ರದಲ್ಲಿ ಎರಡು ಮೊಂಡು ಮೀನಾಕೃತಿಗಳು ಕಂಡು ಬರುತ್ತವೆ. ಇವು ಕೆಂಪು ವರ್ಣದ ರೇಖಾಕೃತಿಗಳಾಗಿದ್ದು, ಪೂರ್ವಕ್ಕೆ ಮುಖ ಮತ್ತೊಂದು ಪಶ್ಚಿಮಕ್ಕೆ ಮುಖಗಳಿದ್ದು, ಒಂದರ ಕೆಳಗೆ ಒಂದಿದೆ. ಮತ್ತು ಇದಕ್ಕೆ ಚಿಕ್ಕ ಚಿಕ್ಕದಾಗಿ ರೆಕ್ಕೆಗಳು ಕೂಡ ಇವೆ. ಮತ್ತು ಇವುಗಳ ಅಕ್ಕ ಪಕ್ಕದಲ್ಲಿಯೂ ಕೂಡ ಚಿಕ್ಕ ಚಿಕ್ಕ ರೇಖಾಕೃತಿ ಮೀನುಗಳನ್ನು ಸಂಯೋಜನೆಗೊಳಿಸಿದ್ದಾರೆ. ಈ ಮೀನಿನ ಚಿತ್ರದ ಹಿಂಭಾಗದ ಕಲ್ಲಾಸರೆಯಲ್ಲಿ 'ಭೀರಪ್ಪ' ಎಂಬ ದೇವರ ಪೂಜೆಗೆ ಒಳಪಟ್ಟ ದೃಶ್ಯವು ಕಂಡು ಬಂದಿತು. ಈ ವಿಷಯ ನನಗೆ ಮತ್ತಷ್ಟು ಕುತೂಹಲಕಾರಿಯಾಯಿತು. ಈಗಲೂ ಈ ದೇವರು ಪೂಜೆ ಮಾಡುತ್ತಾರೆ. ಈ ದೇವರಿಗೆ ಬುಡಕಟ್ಟು ಜನಾಂಗದಿಂದ ಪೂಜೆ ಮಡಲ್ಪಡುತ್ತಿದ್ದು ಈ ಬುಡಕಟ್ಟು ಬೇಡರ ಜನಾಂಗವಾಗಿದ್ದು ಈ ಜನಾಂಗದ 'ಮೀನುಗಲರು' ಎಂಬ ಉಪಪಂಗಡವಿದೆ. ಆದ್ದರಿಂದ ಈ ಮೀನು ಮತ್ತು ಈ ಜನಾಂಗದವರಿಗೆ ಸಂಬಂಧ ಇರಬಹುದಾಗಿದೆ. ಅಂದಿನ ಕಾಲದಲ್ಲಿಯೇ ಧಾರ್ಮಿಕ ಹಿನ್ನೆಲೆಯಲ್ಲಿಯೂ ಚಿತ್ರಗಳು ಇದ್ದವು ಎನ್ನುವುದಕ್ಕೆ ಈ ಚಿತ್ರವು ಉದಾಹರಣೆಯಾಗಿದೆ.

ನೆಲೆ ಐದು :

ಈ ಚಿತ್ರದಲ್ಲಿ ಮಾನವರು ಕೈ ಕೈ ಹಿಡಿದು ಕುಣಿಯುವಂತಹ ಚಿತ್ರವಾಗಿದ್ದು ಇದು ಕುಟ್ಟಿದ ರೇಖಾ ಚಿತ್ರವಾಗಿದೆ. ಇದೇ ರೀತಿಯಲ್ಲಿ ಚಿತ್ರ ಅದರಲ್ಲಿ ಕೆಂಪು ವರ್ಣದ ನೇರಳೆಯಾಕಾರದ ಜಿಂಕೆ ಚಿತ್ರವಿದ್ದು ಇದರ ಹಿಂಬಾಗದಲ್ಲಿ ಚಿತ್ರ ಅಸ್ಪಷ್ಟವಾಗಿದೆ. ಚಿತ್ರ ಏಳರಲ್ಲಿ ಎತ್ತಿನ ಚಿತ್ರವು ಕಂಡು ಬರುತ್ತದೆ. ಇದು ಕೊರೆದ ಎಳೆದೊಯ್ಯುತ್ತಿರುವ ದೃಶ್ಯವಾಗಿದ್ದು ಗೀರು ರೇಖಾಕೃತಿಯಾಗಿದೆ. ಚಿತ್ರ ಒಂಭತ್ತರ ಚಿತ್ರದಲ್ಲಿ ಗೂಳಿ ಚಿತ್ರವು ಕಂಡು ಬರುತ್ತದೆ. ಇದು ಕೊರೆದ ಚಿತ್ರವಾಗಿದೆ. ಇವುಗಳಲ್ಲದೇ ಅರೆ-ಬರೆ ಚಿತ್ರಗಳು ಅಲ್ಲಲ್ಲಿ ಕಂಡು ಬಂದು ಹಲವು ಚಿತ್ರ ಮತ್ತು ಭಾಗಗಳು ನಾಶವಾಗಿದ್ದ ಇಲ್ಲಿ ನೋಡಬಹುದಾಗಿದೆ.

ರಾಜಪುರ :

ಇದು ಸಂಡೂರು ತಾಲೂಕಿನಲ್ಲಿ ಬರುವ ಉಬ್ಬಲಗಂಡಿ ರಾಜಾಪುರ ಎಂದೇ ಪ್ರಸಿದ್ಧಿಯಾಗಿರುವ ಈ ಪ್ರದೇಶದಲ್ಲಿ ನೂತನ ಶಿಲಾಯುಗದ ಸಂಸ್ಕೃತಿಯ ನೆಲೆ ಬೆಳಕಿಗೆ ಬಂದಿದೆ. ಇಲ್ಲಯೂ ಸಹಿತ ಉಜ್ಜಿ ನಯಗೊಳಿಸಿದ ಕೊಡಲಿಯ ತುಂಡು ಬಂಡೆ ಚಿತ್ರಗಳು [೨೭] ಸಂಶೋಧನೆಯಿಂದ ಬೆಳಕಿಗೆ ಬಂದಿವೆ.

ವಸ್ತು ವಿಷಯ :

ಕುದುರೆ, ಆಕಳು, ಎಮ್ಮೆ, ತಲೆ ಮತ್ತು ಮೇಲೆ ಕೊಡ ಹೊತ್ತಿರುವ ಮಹಿಳೆ ಚಿತ್ರಗಳು ಕಂಡು ಬರುತ್ತವೆ.


ನೆಲೆ ಒಂದು :

ಈ ಚಿತ್ರದಲ್ಲಿ ಎರಡು ಮಾನವನಾಕೃತಿಗಳು ಇದ್ದು ಒಂದು ಗಂಡು ಮತ್ತೊಂದು ಹೆಣ್ಣಿನ

ರಾಜಾಪುರ



ರಾಜಾಪುರ



ರಾಜಾಪುರ

ಚಿತ್ರವಾಗಿದೆ. ದಪ್ಪ ದೇಹಾಕೃತಿ ಪುರುಷ ಚಿತ್ರವಿರುವುದು ಇಲ್ಲಿಯೂ ವಿಶೇಷ. ಸಾಮಾನ್ಯವಾಗಿ ಆದಿ ಮಾನವ ದೈಹಿಕವಾಗಿ ಎತ್ತರದವಾಗಿ ಸ್ವಲ್ಪ ವಿಶೇಷ. ಸಾಮಾನ್ಯವಾಗಿ ಆದಿಮಾನವ ದೈಹಿಕವಾಗಿ ಎತ್ತರವಾಗಿ ಕಟ್ಟುಮಸ್ತಾದ ದೇಹ ಸಹಜವಾಗಿದೆ. ಆದರೆ ಈ ಚಿತ್ರ ಸ್ವಲ್ಪ ವಿಶೇಷ ಅನಿಸುತ್ತದೆ. ಈ ಚಿತ್ರದ ಹಿಂದಿನ ಭಿತ್ತಿಯು ಸ್ವಲ್ಪಮಟ್ಟಿಗೆ ನಯಗೊಳಿಸಿ ನಂತರ ಉಜ್ಜಿ ಚಿತ್ರ ಮಾಡಿರುವುದನ್ನು ಗಮನಿಸಬಹುದಾಗಿದೆ.. ಭಿತ್ತಿಯ ಮಧ್ಯದಲ್ಲಿ ಚಿತ್ರ ರಚನೆ ಮಾಡಿ ಹಾಳಾಗದಂತೆ ಚಿತ್ರ ರಚನೆಯಲ್ಲಿ ನಿಗಾ ವಹಿಸಲಾಗಿದ್ದು ಇದು ಕುಟ್ಟಿ ಚಿತ್ರವಾಗಿದೆ. ಸುಂದರವಾದ ಸಂಯೋಜನೆ ಎಂದು ಹೇಳಬಹುದು. ಇವುಗಳಲ್ಲದೆಯೇ ಹಲವು ಕೆಂಪು ವರ್ಣದ ಕುದುರೆ, ಗೂಳಿ, ಕೊಡ ಹೊತ್ತಿರುವ ಮಹಿಳೆ, ಈ ಮಹಿಳೆಯು ಕೊಡ ಹೊತ್ತುಕೊಂಡು ಬರುವ ಚಿತ್ರದ ಹಿನ್ನೆಲೆಯಲ್ಲಿ ಸೌಂದರ್ಯ ಕಂಗೊಳಿಸುತ್ತದೆ. ಇಂದಿಗೂ ಈ ನೈಜ ಚಿತ್ರಗಳಲ್ಲಿ ಕಲಾವಿದನ ಸಾಮಾನ್ಯ ಸೌಂದರ್ಯದ ವಸ್ತು ವಿಷಯವಾಗಿದೆ.

ಮಿಂಚೇರಿ :

ಬಳ್ಳಾರಿಯಿಂದ ಸುಮಾರು ೧೫ ಕಿ.ಮೀ ದೂರದಲ್ಲಿರುವ ಮಿಂಚೇರಿಯ ಕರೆ ಕಲ್ಲುಗುಡ್ಡ ಈ ಪ್ರದೇಶದಲ್ಲಿ ಪ್ರಾಗೈತಿಹಾಸದ ಚಿತ್ರಗಳು ಇರುವ ಸಾಧ್ಯತೆಯನ್ನು ತಿಳಿಸಿದಾರೆ. ಈ ಪ್ರದೇಶಕ್ಕೆ ಬೇಟಿ ಕೊಟ್ಟಾಗ ಹಲವು ಚಿತ್ರಗಳು ಕಂಡು ಬರುವುದು ಅವು ಗೀರು ಮತ್ತು ಕುಟ್ಟಿ ಚಿತ್ರಗಳು ಕಂಡು ಬರುವುದು ಅವುಗಳು ಕೆಳಗಿನಂತೆ ವಿವರಿಸಲಾಗಿದೆ.

ವಸ್ತು ವಿಷಯ :

ಈ ಪ್ರದೇಶದ ಕರೆಕಲ್ಲುಗಳ ಮೇಲೆ ಚಿತ್ರವು ಮೂಡಿರುವುದನ್ನು ಕಾಣಬಹುದು. ಇಲ್ಲಿ ಗೂಳಿ, ಕಾಡುಕೋಣ, ಮೇಕೆ, ಆಕಳ-ಕರು, ನವಿಲು, ಮನುಷ್ಯನಾಕೃತಿಗಳು, ಎತ್ತು ಮುಂತಾದ ಚಿತ್ರಗಳಿದ್ದು ಇವು ಕುಟ್ಟಿದ ಮತ್ತು ಕೊರೆದ ಚಿತ್ರಗಳಾಗಿ ಕಂಡು ಬರುತ್ತವೆ. ಇವುಗಳ ಕುರಿತದ ವಿವರ ಕೆಳಗಿನಂತಿವೆ.

ನೆಲೆ ಒಂದು :

ಇಲ್ಲಿ ಮೂರು ಚಿತ್ರಗಳು ಕಾಣುತ್ತೇವೆ. ಗೂಳಿಚಿತ್ರ, ಮಾನವನ ಚಿತ್ರ, ಎತ್ತಿನ ಚಿತ್ರ ಒಂದರ ಕೆಳಗೆ ಒಂದು ಚಿತ್ರಗೊಳಿಸಿದ್ದು ಈ ಚಿತ್ರಗಳ ಗುಂಡಿನ ಮಧ್ಯಭಾಗದಲ್ಲಿ ಸಂಯೋನೆ ಮಾಡಲಾಗಿದೆ. ಇಲ್ಲಿ ಮಾನವನ ಕೈಗಳು ಒಂದು ಮೇಲಿನ ಚಿತ್ರ ತೋರಿಸಿದರೆ ಮತ್ತೊಂದು ಕೈ ಕೆಳಗಿನ ಚಿತ್ರ ತೋರಿಸುತ್ತಿದ್ದಾನೆ. ಎಂದು ಅನಿಸುತ್ತಿದೆ. ಅವನು ಎರಡು ಪ್ರಾಣಿ ಬೈಟೆಯಾಡುವ ಗುರಿಯಾಗಿರ ಬೇಕು ಅಥವಾ ಬೇಟೆಯಾಡಿರಬೇಕು. ಅನಿಸುತ್ತಿದೆ. ಮತ್ತು ರೇಖೆ ವಿನ್ಯಾಸವು ಕೊರೆದ ಚಿತ್ರವಾಗಿದ್ದು ರೇಖಾ ಚಿತ್ರವನ್ನು ಸ್ಪಷ್ಟಗೊಳಿಸಲು ಪ್ರಯತ್ನಿಸಿದ್ದಾನೆ.

ಚಿತ್ರ ಎರಡು :

ಈ ಚಿತ್ರದಲ್ಲಿ ಮನುಷ್ಯನು ತನ್ನ ಎರಡು ಕೈಗಳಿಂದ ಬಿಲ್ಲನ್ನು ಹಿಡಿದುಕೊಂಡಿದ್ದು ಪ್ರಾಣಿಯತ್ತ ಗುರಿ ಇಟ್ಟಿದ್ದು ಕೊರೆದ ಗೀರು ಚಿತ್ರವಾಗಿದೆ.

ಚಿತ್ರ ಮೂರು :

ಮಿಂಚೇರಿ




ಮಿಂಚೇರಿ ೧



ಮಿಂಚೇರಿ ೨



ಮಿಂಚೇರಿ ೩



ಮಿಂಚೇರಿ ೪

ಮಿಂಚೇರಿ ೫





ಮಿಂಚೇರಿ ೬



ಮಿಂಚೇರಿ ೭



ಮಿಂಚೇರಿ ೮



ಮಿಂಚೇರಿ ೯

ಈ ಚಿತ್ರದಲ್ಲಿ ನವಿಲಿನ ಚಿತ್ರವಿದ್ದು ಇದು ಗೀರುಚಿತ್ರವಾಗಿದ್ದು ಇದರ ಮೇಲೆ ಮತ್ತೊಂದು ಚಿತ್ರಕ್ಕೆ ಪ್ರಯತ್ನಿಸಿದ್ದಾನೆ. ಒಟ್ಟಿನಲ್ಲಿ ಪರಿಪೂರ್ಣ ನವಿಲಿನ ಚಿತ್ರಣವನ್ನು ಚಿತ್ರಿಸಿದ್ದಾನೆ. ಭಿತ್ತಿಯ ನಯಗೊಳಿಸಿದ್ದು ಕಂಡು ಬರುತ್ತದೆ.

ಚಿತ್ರ ನಾಲ್ಕು :

ಈ ನೆಲೆಯಲ್ಲಿ ಆಕಳು ಮತ್ತು ಆಡು ಕುಣಿಯುತ್ತಿರುವ ಕರು ಮೇಕೆಗಳು ಗೂಳಿ, ಆನೆ ಮತ್ತು ಎತ್ತು ಚಿತ್ರಗಳು ಕಂಡು ಬರುತ್ತವೆ. ಭಿತ್ತಿಯನ್ನು ನಯಗೊಳಿಸಿ ಚಿತ್ರಗಳ ಸಂಯೋಜನೆ ಮಾಡಿದ್ದಾರೆ.

ಚಿತ್ರ ಐದು :

ಈ ಚಿತ್ರವು ಮಂಚೇರಿಯ ಚಿತ್ರಗಳಲ್ಲಿಯೇ ವಿಶೇಷವಾಗಿದೆ. ಎರಡು ಮೀಟರ್ ಉದ್ದವಾಗಿದೆ. ಇದು ಎರಡು ಕಿ.ಮೀ. ಬಾಲ ಕಾಲು ಬಾಯಿ ಕಣ್ಣುಗಳನ್ನೊಳಗೊಂಡ ಪರಿಪೂರ್ಣವಾದ ಪ್ರಾಣಿಯ ಚಿತ್ರವಾಗಿದೆ. ಇದು ಕತ್ತೆಗರಕ ಪ್ರಾಣಿಯಂತೆ ಕಾಣುತ್ತದೆ. ಇದು ಇನ್ನೂ ಹೆಚ್ಚಿನ ಅಧ್ಯಯನವನ್ನು ಬಯಸುತ್ತದೆ.

ನೆಲೆ ಆರು :

ಇಲ್ಲಿ ಎರಡು ಕುದುರೆಗಳ ಮೇಲೆ ಇಬ್ಬರು ಒಂದೊಂದು ಕುದುರೆ ಮೇಲೆ ಒಬ್ಬೊಬ್ಬ ವ್ಯಕ್ತಿ ನಿಂತುಕೊಂಡಿದ್ದು ಮುಖಾಮುಖಿಯಾಗಿ ಕಾದಾಡುತ್ತಿರುವ ದೃಶ್ಯವಾಗಿದೆ. ಇದು ಗೀರು ಚಿತ್ರವಾಗಿದೆ.

ನೆಲೆ ಏಳು :

ಚಿತ್ರ ಏಳರಲ್ಲಿ ಮಾನವ ಒಂದು ಕೈಯಲ್ಲಿ ಆಯುಧ ಮತ್ತೊಂದು ಕೈಯಲ್ಲಿ ಬೇಟೆಯ ವಸ್ತುಗಳನ್ನು ಹಿಡಿದುಕೊಂಡಿದ್ದು ಇದು ಕುಟ್ಟಿ ಚಿತ್ರವಾಗಿದೆ. ಇದೇ ರೀತಿಯಲ್ಲಿ ಹಳೆಯ ಚಿತ್ರ ಈ ಪ್ರದೇಶದಲ್ಲಿ ಕಂಡು ಬಂದಿದ್ದು ಇವುಗಳ ಮೇಲೆ ಇತ್ತೀಚಿನ ಹಲವು ರೇಖೆಗಳಿಂದ ಮುಚ್ಚಿ ಹೋಗಿವೆ. ಈ ಮಿಂಚೇರಿಯ ಚಿತ್ರಗಳು ಹೆಚ್ಚಿನ ಅಧ್ಯಯನವನ್ನು ಬಯಸುತ್ತವೆ.

ಸಂಜರಾಯನ ಕೋಟೆ :

ಈ ಪ್ರದೇಶವು ಸಂಗನಕಲ್ಲು ಪ್ರದೇಶದಿಂದ ೧೮ ಕಿ.ಮೀ. ದೂರದಲ್ಲಿ ಇರುವ ಈ ಪ್ರದೇಶದಲ್ಲಿ ಹಲವು ಕುಟ್ಟಿದ ಕೊರೆದ ಚಿತ್ರಗಳು ಕಂಡು ಬರುತ್ತವೆ. ಅ.ಸುಂದರವರು ಈ ಪ್ರದೇಶದ ಚಿತ್ರಗಳು ಇರುವ ಸಾಧ್ಯತೆಯನ್ನು ತಿಳಿಸಿದ್ದಾರೆ. ಈ ಪ್ರದೇಶಕ್ಕೆ ಬೇಟಿ ಕೊಟ್ಟಾಗ ಹಲವು ಚಿತ್ರಗಳು ಕಂಡು ಬರುತ್ತವೆ. ಅವು ಎರಡು ರೀತಿಯಲ್ಲಿ ಕಂಡು ಬಂದವು ಒಂದು ಪ್ರಾಗೈತಿಹಾಸಿಕ ಚಿತ್ರಗಳನ್ನು ಹೋಲುವ ಚಿತ್ರಗಳು ಮತ್ತು ಇತಿಹಾಸ ಪ್ರಾರಂಭದ ಚಿತ್ರಗಳು ಎಂದು ತಿಳಿದು ಬಂದಿತು. ಅವು ಕೆಳಗಿನಂತಿವೆ.

ವಸ್ತು ವಿಷಯ :

ಕುದುರೆ, ಒಂಟೆ, ಎತ್ತು, ಗೂಳಿ, ಮನುಷ್ಯ, ನಾಯಿ, ಹುಲಿ, ಚಿತ್ರಗಳು ಇಲ್ಲಿಯ ಚಿತ್ರಗಳಾಗಿವೆ. ಇಲ್ಲಿ ಕುಟ್ಟಿ ಗೀರು ಚಿತ್ರಗಳು ಕಂಡು ಬರುತ್ತವೆ.

ನೆಲೆ ಒಂದು :

ಎಲ್ಲಾ ಕಡೆಗಳಲ್ಲಿ ಕಂಡು ಬರುವ ಹಾಗೇ ಇಲ್ಲಿಯೂ ಎತ್ತಿನ ಚಿತ್ರಗಳು ಕಂಡು ಬರುತ್ತವೆ. ಸ್ವಭಾವಿಕವಾಗಿ ನೈಜವಾಗಿದೆ. ಇದರ ಪಕ್ಕದಲ್ಲಿಯೇ ಮತ್ತೊಂದು ಅಸ್ಪಷ್ಟವಾದ ಕುಟ್ಟಿ ಚಿತ್ರವಿದೆ.

ಚಿತ್ರ ಎರಡು :

ನೆಲೆಯಲ್ಲಿ ಹುಲಿಯ ಚಿತ್ರ ಕಂಡು ಬಂದಿದ್ದು ಇದು ಕಣ್ಣು ಮೂಗು ಕಿವಿ ಬಾಲ, ಕಾಲು, ಬಾಯಿ, ಮೈ, ಗಳಿಂದ ಸ್ಪಷ್ಟವಾದ ಪರಿಪೂರ್ಣ ಮಧ್ಯಮ ಗ್ರಿತ್ರದ ಎಲ್ಲಾ ಅಂಗಗಳು ರೇಖೆಯಿಚಿದ ಸಂಯೋಜಿತವಾಗಿ ಕಲಾವಿದನ ಸೌಚಿದರ್ಯ ಪ್ರಜ್ಞೆ ಜಾಗೃತಿಯಂತಿದೆ.

ಚಿತ್ರ ಮೂರು :

ಈ ನೆಲೆಯಲ್ಲಿ ಒಂಟಿಯಾಕಾರದ ಚಿತ್ರವಾಗಿದೆ. ಕಲ್ಲು ಎತ್ತರವಾಗಿದ್ದು ಕಿವಿ, ಬಾಲ, ಕಾಲು, ಮತ್ತು ಮೇಲಿನ ವನಿಯಾ ಅಥವಾ ಸವಾರನೋ ಎನ್ನುವುದು ಅಸ್ಪಷ್ಟವಾಗಿ ಕಾಣುತ್ತದೆ. ಇದು ಕುಟ್ಟಿದ ಚಿತ್ರಗಳಿದ್ದು ಚಿತ್ರವನ್ನು ಕಲ್ಲಿನಿಂದ ಪ್ರತ್ಯೇಕಿಸಿದ್ದಾನೆ. ಇದು ಸಾಮಾನ್ಯವಾಗಿ ೨೦ ಇಚಿಚಿನ ಚಿತ್ರವಾಗಿದೆ.

ಚಿತ್ರ ನಾಲ್ಕು :

ಈ ನೆಲೆಯಲ್ಲಿ ಎರಡು ಮಾನವ ಚಿತ್ರಗಳು ಇದ್ದು ಅವರು ಕೋಲು ಅಥವಾ ಈಟಿಯ ತರಹದ ಸಾದನವನ್ನು ಹಿಡಿದುಕೊಂಡಿದ್ದಾರೆ. ಒಂದೊಂದು ಸಾದನಕ್ಕೆ ಚಿತ್ರಗಳಿದ್ದು ಒಂದೊಂದು ಸಾದನಕ್ಕೆ ನವಿಲು, ಮತ್ತೊಂದಕ್ಕೆ ನಾಯಿಚು ಚಿತ್ರ ಕಂಡು ಬರುತ್ತದೆ. ಕೈ ಕಾಲು ಕಣ್ಣು, ಬಾಯಿ, ತಲೆ, ಪಾದ, ಹೊಟ್ಟೆ, ನಡೆ, ಸ್ಪಷ್ಟತೆ ಇದ್ದು ಎರಡು ಬಾಹ್ಯ ರೇಖೆಯಿಚಿದ ಚಿತ್ರದ ವಿನ್ಯಾಸವಾಗಿದೆ. ಮುಖವು ವಾರನಚಿತೆ ಕಂಡು ಬಂದು ಬೇಟೆಯಿಚಿದ ಸಂಭ್ರಮಿಸಿ ಕೈ ಹಿಡಿದು ಕುಣಿಯುವ ಚಿತ್ರದಂತೆ ತೋರುತ್ತದೆ. ಕಡ್ಡಿ ನೆರಳಿನ ಚಿತ್ರಕ್ಕಿಂತ ಭಿನ್ನವಾಗಿದೆ. ಎಂದು ಹೇಳಬಹುದು.

ಚಿತ್ರ ಐದು :

ಈ ನೆಲೆಯಲ್ಲಿ ಎರಡು ಸಮನಾದ ಕೋಡುಗಳು ಏನೆ ಇದ್ದು ಸ್ಪಷ್ಟವಾಗಿ ಗೂಳಿ ಚಿತ್ರವಾಗಿದ್ದು ಇದು ಗುಂಡಿಗೆ ಏಕಚಿತ್ರವಾಗಿದೆ.

ಚಿತ್ರ ಆರು :

ಈ ಚಿತ್ರದಲ್ಲಿ ನಾವು ಕುಳಿತ ಪಕ್ಕಧಲ್ಲಿಯೇ ಕುದುರೆ ಚಿತ್ರ ಕಂಡು ಬರುವುದು ಕೆಳಗಿನ ಗುಂಡಿನ ಚಿತ್ರವು ಇತ್ತೀಚಿನ ಹಲವು ಚಿತ್ರಗಳಿಂದ ಅಸ್ಪಷ್ಟವಾಗಿವೆ. ಕುದುರೆ ಚಿತ್ರದಲ್ಲಿ ಕಲಾವಿದನು ಕುತ್ತಿಗೆ ಕಾಲು ಕೂದಲು ಬಾಲ ಎಲ್ಲಾ ನೈಜವಾದ ಸುಂದರ ಚಿತ್ರವಾಗಿದೆ.

ಚಿತ್ರ ಏಳು :

ಈ ನೆಲೆಯಲ್ಲಿ ನಾಯಿಚಿತ್ರವು ಸ್ಪಷ್ಟರೂಪದ್ದಾಗಿದೆ. ರೇಖೆಗಳಿಂದ ಕಲಾವಿದ ಸ್ಪಷ್ಟಭಾವ ಮುದ್ರೆಯನ್ನು



ಸಂಜರಾಯನ ಕೋಟೆ ೧



ಸಂಜರಾಯನ ಕೋಟೆ ೨




ಸಂಜರಾಯನ ಕೋಟೆ ೩

ಸಂಜರಾಯನ ಕೋಟೆ



ಸಂಜರಾಯನ ಕೋಟೆ ೪



ಸಂಜರಾಯನ ಕೋಟೆ ೫



ಸಂಜರಾಯನ ಕೋಟೆ ೬

ಸಂಜರಾಯನ ಕೋಟೆ



ಸಂಜರಾಯನ ಕೋಟೆ ೭



ಸಂಜರಾಯನ ಕೋಟೆ ೮



ಸಂಜರಾಯನ ಕೋಟೆ ೯



ಸಂಜರಾಯನ ಕೋಟೆ ೧೧



ಸಂಜರಾಯನ ಕೋಟೆ ೧೨




ಸಂಜರಾಯನ ಕೋಟೆ ೧೩



ಸಂಜರಾಯನ ಕೋಟೆ ೧೦

ಸಂಜರಾಯನ ಕೋಟೆ ೧೧





ಸಂಜರಾಯನ ಕೋಟೆ ೧೨

ಕಲ್ಲಿನಾಸರೆಯಲ್ಲಿ ಸುಂದರವಾಗಿ ಚಿತ್ರಿಸಲಾಗಿದೆ.

ಈ ಪ್ರಾಗೈತಿಹಾಸಿಕ ಮಾನವನ ಜೀವನ ಸುತ್ತಮುತ್ತಲಿನ ಪರಿಸರವನ್ನು ತಮ್ಮದೇಯಾದ ರೀತಿಯಲ್ಲಿ ಚಿತ್ರಗಳನ್ನು ಚಿತ್ರಿಸಿ ಚರಿತ್ರೆ ಪ್ಮಟಗಳಲ್ಲಿ ಶಾಶ್ವತವಾಗಿ ಉಳಿದ ಇಂತಹ ಚಿತ್ರಗಳ ಮೂಲಕ ತನ್ನ ಇರುವಿಕೆ ಶೈಲಿಯನ್ನು ತೋರಿಸಿಕೊಟ್ಟು ದೃಶ್ಯ ಚರಿತ್ರೆ ಅಧ್ಯಯನಕ್ಕೆ ಹಿನ್ನೆಲೆಯಾಗಿ ಸಹಾಯಕನಾದ ಈ ಮೇಲಿನ ಚಿತ್ರದ ನೆಲೆಗಳಾದ ಹಂಪಿ ಸಂಗನಕಲ್ಲು–ಕಪ್ಪಗಲ್ಲು ಕುರುಗೋಡು, ರಾಜಪೂರ, ವೆಂಕಟಾಪೂರ, ಮಿಂಚೇರಿ ಬಳ್ಳಾರಿ ಕೋಟೆ ಸಚಿಜರಾಯನ ಕೋಟೆ ನೆಲೆಗಳಲ್ಲಿದೆಯೋ ಬೆಳಗಲ್ಲು ಹಳಕುಂದಿ ಕೋಟ್ಕಕಲ್ಲು ದಾನಪುರ ಬೈರನಾಯಕನಹಳ್ಳಿ ತೆಕ್ಕಲಕೋಟೆ ಎತ್ತಿನಬೂದಿಹಾಳ ಗಳಲ್ಲಿಯೂ ಸೂಕ್ಷ್ಮ ಶಿಲಾಯುಗ ನೂತನ ಶಿಲಾಯುಗ ಬೃಹತ್ ಶಿಲಾಯುಗ ಕಾಲದ ಚಿತ್ರಗಳು ಬೆಳಕಿಗೆ ಬಂದಿರುವುದು ನೋಡಬಹುದಾಗಿದೆ.

ಬೆಳಗಲ್ಲು, ಸಂಗನಕಲ್ಲು, ಕಪ್ಪಗಲ್ಲು, ಹಳಕುಂದಿ, ಬೈರನಾಯಕನಹಳ್ಳಿ, ಸಂಜರಾಯನ ಕೋಟೆ, ಮಿಂಚೇರಿ ವಸ್ತು ವಿಷಚಿು ಒಂದೇಯಾಗಿದ್ದು, ಸೂಕ್ಷ್ಮವಾಗಿ ಗಮನಿಸಿದಾಗ ಅಲ್ಪಸ್ವಲ್ಪ ವ್ಯತ್ಯಾಸ ಕಾಣಬಹುದು. ಕೊರೆದ ಕುಟ್ಟಿದ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದಿದ್ದು ವರ್ಣ ಚಿತ್ರಗಳು ಅಲ್ಪ ಪ್ರಮಾಣದಲ್ಲಿ ಕಾಣಬಹುದಾಗಿದೆ. ಮತ್ತು ಹಂಪಿ ಕುರುಗೋಡು ಬಳ್ಳಾರಿ ಕೋಟೆ ತೆಕ್ಕಲಕೋಟೆ ಗುಡಿ ಓಬಳಾಪುರ ಸಂಡೂರು ನೆಲೆಗಳಲ್ಲಿ ವರ್ಣಚಿತ್ರ ಹೆಚ್ಚಿನ ಮಟ್ಟದಲ್ಲಿದ್ದು ಕುಟ್ಟಿ ಕೋರೆದ ರೇಖಾ ಚಿತ್ರಗಳು ಕಡಿಮೆ ಪ್ರಮಾಣದಲ್ಲಿ ಕಂಡು ಬರುತ್ತವೆ. ಗೂಳಿ ಎತ್ತು ಜಿಂಕೆ ಮತ್ತು ಮನುಷ್ಯ ಚಿತ್ರಗಳ ವಸ್ತು ವಿಷಯ ಹೆಚ್ಚಿನ ಮಟ್ಟದಲ್ಲಿ ಕಂಡು ಬರುತ್ತವೆ.

ಎಲ್ಲಾ ನೆಲೆಗಳ ಚಿತ್ರಗಳನ್ನು ಗಮನಿಸಿದಾಗ ಮುಖ್ಯವಾಗಿ ಕಂಡು ಬರುವ ಬೇಟೆ ಚಿತ್ರಗಳು ಕುಣಿತದ ಚಿತ್ರಗಳು ತಾಂತ್ರಿಕದ ಚಿತ್ರಗಳು ಬೇಟೆಗೆ ಸಂಬಂಧಿಸಿದ ವಸ್ತು ವಿಷಯ ಹೆಚ್ಚು ಒಳಗೊಂಡ ಚಿತ್ರ ನೆಲೆಯ ಬಹುಸಂಖ್ಯೆಯಲ್ಲಿ ಕಂಡು ಬಂದರೆ ಕುಣಿತದ ಚಿತ್ರಗಳು ಎರಡನೆಯ ಸ್ಥಾನದಲ್ಲಿ ವಿಷಚಿುವಾಗಿರುವಣತಹುಗಳು ಮೂರನೇಯದು ತಾಂತ್ರಿಕ ವಿಷಯ ಚಿತ್ರಗಳು ಎಂದು ಹೇಳನಹುದು.

ಬೇಟೆಯಾಡುವುದು ಬೇಟೆಯಾಡಿದ ಪ್ರಾಣಿಯನ್ನು ಹೊತ್ತುಕೊಂಡು ಹೋಗುತ್ತಿರುವುದು ಬೇಟೆ ಬಯಸಿ ಬರೆದ ಚಿತ್ರಗಳು ಬಾಣ ಆಯುಧಗಳಿಂದ ಚುಚ್ಚಲ್ಪಟ್ಟಂತಹ ಯಶಸ್ವಿನ ಚಿತ್ರಗಳು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಮನುಷ್ಯರ ಚಿತ್ರಗಳು ಹೆಚ್ಚಾಗಿ ಗವಿ ವರ್ಣಚಿತ್ರಗಳಲ್ಲಿವೆ. ಬಯಲು ಬಂಡೆ ಗೀರು ಮತ್ತು ಕುಟ್ಟಿದ ಚಿತ್ರಗಳಲ್ಲಿ ಇವು ಬಹಳ ಕಡಿಮೆ ಹೆಚ್ಚಾಗಿ ಗುಂಪು ಮನುಷ್ಯರ ಚಿತ್ರಗಳು ಕಂಡು ಬರುತ್ತಿದ್ದು ಅವರು ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಒಂಟಿ ಮನುಷ್ಯ ಚಿತ್ರಗಳು ತುಂಬಾ ಕಡಿಮೆ ಎಂದು ಹೇಳಬಹುದು. ಮತ್ತು ಈ ಬೇಟೆಯ ಚಿತ್ರಗಳಲ್ಲಿ ಸಹಜವಾಗಿಯೇ ಪ್ರಾಣಿಗಳು ಕಂಡು ಬರುತ್ತವೆ. ಆಹಾಂವಾದ ಪ್ರಾಣಿಗಳ ಚಿತ್ರಗಳು ಬಯಸಿ ಬರೆದರೆ ಇವನ ಶತ್ರು ಪ್ರಾಣಿಗಳಾದ ಹುಲಿ, ಚಿರತೆ ಚಿತ್ರಗಳನ್ನು ನಾಶವಾಗಲಿ ಎಂದು ಬರೆದಿರುವ ಚಿತ್ರಗಳಾಗಿವೆ. ಇಂತಹ ಪ್ರಾಣಿಗಳ ಚಿತ್ರಗಳು ತುಂಬಾ ವಿರಳ. ಈ ಪ್ರಾಣಿಗಳನ್ನು ಆಯುಧದಿಂದ ಚುಚ್ಚಿದಂತಹವು ಮತ್ತು ಗುರಿಯ ಪ್ರಾಣಿಗಳು ಎಂದಾದರೆ ಪ್ರಾಣಿಯನ್ನು ಹೊತ್ತುಕೊಂಡು ಹೋಗುವ ಮತ್ತು ಚಿಕ್ಕಗಾತ್ರದ ಪ್ರಾಣಿಯನ್ನು ಕೈಯಲ್ಲಿ ಹಿಡಿದುಕೊಂಡು ಹೋಗುವ ಚಿತ್ರಗಳು ಬೇಟೆಯ ನಂತರದ ಚಿತ್ರಗಳಾಗಿವೆ. ಇನ್ನು ಆಹಾರದ ನಂತರ

ಅವರು ಮುಂದಿನ ಕಾರ್ಯ ಇತರೆ ಕುಣಿತ-ಆಚರಣೆ ಸ್ತ್ರೀ ಪುರುಷ ಬಯಕೆಯ ಚಿತ್ರಗಳು ಎಂದು ಹೇಳಬಹುದು ಜನಸಮೂಹದ ಚಿತ್ರಗಳಾಗಿವೆ. ಸಾಮಾನ್ಯವಾಗಿ ಸಾಲಿನಲ್ಲಿ ಜನರು ಒಬ್ಬರ ಪಕ್ಕದಲ್ಲಿ ಒಬ್ಬರು ಕೈ ಕ್ಯ ಹಿಡಿದುಕೊಂಡು ನಿಂತಿರುವ ಚಿತ್ರಗಳು ತಮ್ಮ ಆಚರಣೆಚಿತ್ರವು ಬೇಟೆಯ ಆಹಾರದ ನಂತರದ ಚಿತ್ರಗಳಾಗಿವೆ. ಎಂದು ಹೇಳಬಹುದು. ಆಚರಣೆ ಚಿತ್ರಗಳು ಮಾನವನ ತಲೆಗೆ ಸೂರ್ಯ ಕಿರಣಗಳಂತಹ ಬಾಣಗಳು ಇದ್ದು ಕುಣಿಯುವ ಚಿತ್ರಗಳಾಗಿವೆ. ಬೇಟೆಯು ಸಿಕ್ಕ ಸಂತಸದ ಪ್ರಾಣಿಯ ಸುತ್ತುವರೆದು ಕುಣಿಯುವ ಚಿತ್ರರೇಖೆಗಳು ಎಂದು ಹೇಳಬಹುದು. ತಾಂತ್ರಿಕದ ಚಿತ್ರಗಳು ಬೇಟೆಯ ಮತ್ತು ಕುಣಿತ ಚಿತ್ರಕ್ಕಿಂತ ಒಂದು ಹೆಜ್ಜೆ ಮುಂದಿನದು ಎಂದು ಹೇಳಬಹುದು ತಾಂತ್ರಿಕ ಚಿತ್ರಗಳು ಕೆಲವೇ ಆಗಿದ್ದರೂ ವೈವಿಧ್ಯತೆಗಳಾಗಿವೆ. ಇವು ರೇಖಾ ಪ್ರಧಾನವಾಗಿದ್ದು ಆಯತಾಕಾರ ಆಯತದ ಒಳಗೆ ಮಾನವ, ವಿಶಿಷ್ಟ ಚಿಹ್ನೆಗಳನ್ನೊಳಗೊಂಡಿರುತ್ತವೆ. ಈ ತಾಂತ್ರಿಕ ಅಥವಾ ಮಂಡಲ ಚಿತ್ರಗಳು ಬೃಹತ್ ಶಿಲಾಯುಗ ಸಂಸ್ಕೃತಿಯ ಜನರಿಗೆ ಸೇರಿದವು[೨೧] ಎಂದು ಹೇಳಲಾಗಿದೆ. ಇಚಿತಹ ಚಿತ್ರಗಳನ್ನು ವಸಿಕರಣಕ್ಕೆ ಸಂದಿಸಿದವು ಎಂಬ ಅಭಿಪ್ರಾಯವಿದೆ. ಇವುಗಳಲ್ಲದೆಯೇ ಉಳಿವಿನಾಕಾರ ಚಿತ್ರಗಳು ಮಂಡಲವಂತ ಚಿತ್ರಗಳು ಬಾಣಂತಿಯ ಚಿತ್ರಗಳು ಈ ಚಿತ್ರಗಳಲ್ಲಿ ಕೋಡು ತ್ರಿಕೋನ, ಮುಂತಾದವುಗಳನ್ನು ಸಂಕೇತವಾಗಿ ಬಳಸಿರಿವುದು ಕಲಾವಿದನ ಕೌಶಲ್ಯ ಎಂದು ಹೇಳಬಹುದು ಇವುಗಳ ಬಗ್ಗೆ ಅಧ್ಯಯನ ನಡೆಯುತ್ತಿರುವುದು ಸಂತಸದ ಸಂಗತಿಯಾಗಿದೆ.

ಟಿಪ್ಪಣಿಗಳು :

೧. ಡಾ. ಬಿ.ಕೆ.ಶಾಸ್ತ್ರಿ, ಚಿತ್ರಕಲಾ ಪ್ರಪಂಚ ಪು.೧೧

೨. – ಅದೇ –

೩. – ಅದೇ –

೪. ಡಾ. ಶರಣಪ್ಪ ಕೋಲ್ಕಾರ, ಹಂಪಿ ಸಂಪುಟ ಪು.೨೧

೫. – ಅದೇ –

೬. ಡಾ. ಅ. ಸುಂದರ , ಕರ್ನಾಟಕ ಪ್ರಾಗಿತಿಹಾಸಿಕ ಕಲೆ, ಪು.೧೬

೭. ಡಾ. ಯದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿ ಚಿತ್ರ, ಪು.೧೭೬

೮. ಡಾ. ಯದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿ ಚಿತ್ರ, ಪು.೧೭೮

೯. ಡಾ. ಶರಣಪ್ಪ ಕೋಲ್ಕಾರ , ಹಂಪಿ ಸಂಪುಟ, ಪು.೫

೧೦. ಡಾ. ಯದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿ ಚಿತ್ರ, ಪು.೧೮೧

೧೧. ಡಾ. ಶರಣಪ್ಪ ಕೋಲ್ಕಾರ , ಹಂಪಿ ಸಂಪುಟ, ಪು.೪

೧೨. – ಅದೇ –

೧೩. – ಅದೇ –

೧೪. ಡಾ. ವೈ ಹನುಮಂತರೆಡ್ಡಿ , ಕುರುಗೋಡಿನ ಸಾಂಸ್ಕೃತಿಕ ಇತಿಹಾಸ, ಪು. ೪

೧೫. ಡಾ. ವೈ ಹನುಮಂತರೆಡ್ಡಿ , ಕುರುಗೋಡಿನ ಸಾಂಸ್ಕೃತಿಕ ಇತಿಹಾಸ, ಪು. ೫

೧೬. ಡಾ. ವೈ ಹನುಮಂತರೆಡ್ಡಿ , ಕುರುಗೋಡಿನ ಸಾಂಸ್ಕೃತಿಕ ಇತಿಹಾಸ, ಪು. ೬

೧೭. – ಅದೇ –

೧೮. – ಅದೇ –

೧೯. – ಅದೇ –

೨೦. ಪುರಾತತ್ವ ಇಲಾಖೆ ಬಳ್ಳಾರಿ, ಕೋಟೆ ಪರಿಚಯ, ಲೇಖನ,

೨೧. ಡ. ಅ. ಸುಂದರ, ಕರ್ನಾಟಕದ ಪ್ರಾಗೈತಿಹಾಸಕ ಕಲೆ, ಪು.೫೧

ಅಧ್ಯಾಯ : ಐದು
ಶೈಲಿ

ಪ್ರಾಗೈತಿಹಾಸಿಕ ಕಾಲದ ಚಿತ್ರಗಳು ಮೊದಲ ನೋಟಕ್ಕೆ ಚಿಕ್ಕ ಮಕ್ಕಳಂತೆ ತೋರಿದರೂ ಇವು ತಮ್ಮ ವೈಶಿಷ್ಟ್ಯತೆಯನ್ನು ಗುರುತಿಸಿಕೊಂಡು ಮೌಲ್ಯಯುತವಾದ ಕಲಾಪ್ರಕಾರವಾಗಿದೆ. ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಅವುಗಳ ಶೈಲಿ, ಭಾವ, ಮತ್ತು ಭಂಗಿಯ ದೃಷ್ಟಿಯಿಂದ ಸಮರ್ಥವಾದ ರಚನೆಗಳೆಂದು ತಿಳಿಯುತ್ತದೆ.[೧] ಒಂದು ಕಲಾ ಶೈಲಿಯು ಅಂದಿನ ಆಯಾ ಕಾಲದ ಬೌದ್ಧಿಕತೆ ಪರಿಸರ ಪರಿಕರ ಈ ಎಲ್ಲಾ ಆಧಾರಿತವಾಗಿರುತ್ತದೆ. ಎಲ್ಲಾ ನೆಲೆಗಳ ಸ್ಥಳಗಳಲ್ಲಿ ಚಿತ್ರದ ಶೈಲಿಯು ಒಂದೇಯಾಗಿದ್ದು, ನೋಡಿದ ತಕ್ಷಣವೇ ಪ್ರಾಗೈತಿಹಾಸಿಕ ಚಿತ್ರ ಎಂಬುವಷ್ಟು ಮಟ್ಟಿಗೆ ಪ್ರತ್ಯೇಕತೆಯನ್ನು ಹೊಂದಿದೆ. ಚಿತ್ರಗಳಲ್ಲಿ ಕೇವಲ ಆಕೃತಿಯಷ್ಟೇ ಮುಖ್ಯವಲ್ಲ. ಜೀವಂತಿಕೆ ಎದ್ದು ಕಾಣುತ್ತದೆ.[೨] ಸಾಮಾನ್ಯವಾಗಿ ಚಿತ್ರ ಶೈಲಿ ಎಂದರೆ ಚಿತ್ರ ರಚನಾ ಕೌಶಲ್ಯವೆಂತಲೂ ಸಚಿತ್ರ ಆಕಾರಗಳನ್ನು ರೇಖೆ ಹಾಗೂ ಬಣ್ಣಗಳಿಂದ ಹೊರಹೊಮ್ಮಲು ಬಳಸುವಂತವ ತಂತ್ರ ಈ ಪ್ರಾಗೈತಿಹಾಸಿಕದ. ಚಿತ್ರದಲ್ಲಿ ಬಣ್ಣರೇಖೆಯ, ಗೀರು ರೇಖೆಯ ಚಿತ್ರವಾಗಿರುವುದು ಈ ಚಿತ್ರ ಶೈಲಿಯ ವೈಶಿಷ್ಟ್ಯತೆ ಈ ಚಿತ್ರಗಳಲ್ಲಿ ಮನುಷ್ಯ ಮತ್ತು ಪ್ರಾಣಿಯ ಬಿಡಿ ಚಿತ್ರಗಳಾಗಲಿ ನೃತ್ಯ ಬೇಟೆ ಮುಂತಾದ ದೃಶ್ಯ ಚಿತ್ರಗಳಾಗಲಿ ಅವುಗಳ ರಚನಾ ಉದ್ದೇಶ ಸಶಕ್ತವಾಗಿ ಚಿತ್ರಗಳಲ್ಲಿ ಬಿಂಬಿತವಾಗಿದೆ. ಸಾಮಾನ್ಯವಾಗಿ ಕಣ್ಣು, ಮೂಗು, ಕಿವಿ, ಹಸ್ತ, ಪಾದಗಳಂತ ಸೂಕ್ಷ್ಮ ಅಂಗಗಳ ರಚನೆಯ ಗೋಜಿಗೆ ಪ್ರಾಗೈತಿಹಾಸಿಕ ಕಾಲದ ಕಲಾವಿದ ಹೋಗದೇ ಇದ್ದರೂ ಚಿತ್ರಗಳು ಭಾವ ಪ್ರಧಾನವಾಗಿವೆ. ಎಂದು

ಹೇಳುತ್ತಾರೆ.[೩] ಮತ್ತು ಬಳ್ಳಾರಿ ಪ್ರದೇಶದ ಕೆಲವು ಚಿತ್ರಗಳ ಶೈಲಿಯನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಮನುಷ್ಯ ಚಿತ್ರಗಳು:

ಅನೇಕ ಬಿಡಿ ಇಲ್ಲವೇ ಸಮೂಹದ ಮನುಷ್ಯ ಚಿತ್ರಗಳಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಮನುಷ್ಯ ಚಿತ್ರಗಳಲ್ಲಿ ಕೆಲವು ಶೈಲಿಯ ದೃಷ್ಟಿಯಿಂದ ಕ್ರೀಯಾಶೀಲತೆಯನ್ನು ಬಿಂಬಿಸುವಲ್ಲಿ ಸಮರ್ಥವಾಗಿದೆ. ಎಂದು ಗುರುತಿಸಬಹುದು.[೪] ವಿರೂಪಾಕ್ಷ ದೇವಾಲಯದ ಹಿಂಭಾಗದಲ್ಲಿ ಚಿತ್ರದ ನೆಲೆ ಕಂಡು ಬಂದು ಈ ನೆಲೆಯಲ್ಲಿ ಮನುಷ್ಯರ ಚಿತ್ರಗಳನ್ನು ದ್ವಿ ತ್ರಿಕೋನಾಕೃತಿಯ ಶೈಲಿಯಲ್ಲಿದೆ. ಕೈ ಕಾಲುಗಳು ಕೇವಲ ಸಾಂಕೇತಿಕವಾಗಿದೆ. ಈ ಚಿತ್ರಕಲಾವಿದನು

ಪರಿಪೂರ್ಣ ಚಿತ್ರದ ರಚನೆಗೆ ಪ್ರಯತ್ನಿಸಿದ್ದು ಕಂಡು ಬರುತ್ತದೆ. ಒಂದು ಗಂಡು ಮತ್ತೊಂದು ಹೆಣ್ಣು ಎಂಬ ಭಿನ್ನತೆಯ ಲಕ್ಷಣಗಳನ್ನು ತೋರಿಸಲು ಪ್ರಯತ್ನಿಸಿದ್ದಾನೆ. ಈ ಚಿತ್ರಗಳಲ್ಲಿ ಕ್ರೀಯೆಯನ್ನು ಸ್ಪಷ್ಟವಾಗಿ ತೋರುತ್ತದೆ. ಸಾಮಾನ್ಯವಾಗಿ ಮುಖವು ಒಂದು ಗುಂಡಾಕಾರವಾದ ಚುಕ್ಕೆ ಅಥವಾ ಕೋನಾಕಾರದಲ್ಲಿ ತೋರಿಸುವುದು ಶೈಲಿಯ ಮುಖ್ಯವಾದ ಅಂಶವಾಗಿದೆ.

ಕೆಲವು ಕಡೆಗಳಲ್ಲಿ ಚಿತ್ರಗಳ ಗುಂಪುಗಳಲ್ಲಿಯೇ ಭಿನ್ನ ಎಂಬುವಂತಹ ಚಿತ್ರಗಳು ಗೋಚರಿಸಿ ಆಶ್ಚರ್ಯವಾಗುವಂತಹ ಕೆಲ ಚಿತ್ರದ ಶೈಲಿಯನ್ನು ನೋಡಬಹುದು. ಬಳ್ಳಾರಿಯ ಗುಡ್ಡದ ಚಿತ್ರದ ಒಂದು ನೆಲೆಯಲ್ಲಿ ಬಿಳಿ ವರ್ಣದ ಶಿರಿಂದ ೬ ಇಂಚಿನ ಚಿತ್ರವಾಗಿದ್ದು ಕತ್ತಿನಿಂದ ಭಾಗದಲ್ಲಿ ಸೊಂಟದ ಭಾಗದವರೆಗೆ ಸೊಂಟದಿಂದ ಕಾಲಿನ ಮಂಡೆಯವರೆಗೆ ಉಡುಪು ಇದ್ದು ನೋಡಲು ಆಧುನಿಕ ಮಹಿಳೆಯಂತೆ ಕಂಡು ಬರುತ್ತದೆ. ಇದನ್ನು ಇತ್ತೀಚಿನದಂತೆ ಕಂಡರೂ ಇದರ ಚಿತ್ರಗಳ ಜೊತೆಯಲ್ಲಿನ ಚಿತ್ರಗಳ ವರ್ಣದ ಲೇಪನವು ಸಮಕಾಲೀನವಾಗಿದೆ. ಇಂತಹ ಚಿತ್ರಗಳ ಶೈಲಿಯು ಪರಿವರ್ತನೆಯ ಹಂತ ಎಂದು ಹೇಳಬಹುದು. ನಡೆಯುವಾಗ ಮುಂದಿನ ಕಾಲನ್ನು ಊರಿ ಹಿಂದಿನ ಕಾಲನ್ನು ಮೇಲಕ್ಕೆತ್ತಿರುವ ಭಂಗಿ ತುಂಬಾ ಸಹಜವಾಗಿ ಎಲ್ಲಾ ನಡೆಗೆಯ ಮನುಷ್ಯನ ಚಿತ್ರವಾಗಿದ್ದು ಕೈಯಲ್ಲಿ ಉದ್ದವಾದ ಕೋಲು ಅಥವಾ ಭರ್ಚಿಯನ್ನು ಹಿಡಿದುಕೊಂಡು ಪಶುಗಳನ್ನು ತೆಗೆದುಕೊಂಡು ಹೊರಟಿರುವ ಚಿತ್ರ (ಮಿಂಚೇರಿ) ಅತ್ಯಂತ ಸಹಜವಾಗಿದೆ. ಹಿಂದಿನ ಕಾಲು ಎತ್ತಿನ ಭಂಗಿಯಲ್ಲಿದ್ದು ಓಟದ ಶೈಲಿಯನ್ನು ತುಂಬಾ ಸಮರ್ಥವಾಗಿ ಬಿಂಬಿಸುವಂತಹವು. ಎಲ್ಲಾ ತಜ್ಞರ ಸಹಜ ಗ್ರಹಿಕೆ.

ಬಳ್ಳಾರಿ ಗುಡ್ಡದ ಚಿತ್ರಗಳಲ್ಲಿ ಸ್ತ್ರೀಯರ ಚಿತ್ರಗಳನ್ನು ಭುಜಗಳು ಸಣ್ಣದಾಗಿದ್ದು ಅದು ಸ್ವಲ್ಪ ಬಾಗಿದಂತೆ ರೇಖೆಗಳು ಸ್ತನಗಳನ್ನು ಎರಡು ಗುಂಡಾಕಾರವಾದ ರೇಖೆ ಸೊಂಟದ ಭಾಗವನ್ನು ಕಡ್ಡಿಯ ಆಕಾರವಾಗಿ ಚಿತ್ರಿಸಿರುವುದು ಸ್ತ್ರೀ ಪ್ರತ್ಯೇಕತೆಯನ್ನು ಈ ಶೈಲಿಯಲ್ಲಿ ನೋಡಬಹುದಾಗಿದೆ. ಸ್ತ್ರೀ–ಪುರುಷರ ಚಿತ್ರಗಳನ್ನು ಸ್ಪಷ್ಟವಾಗಿ ಗುರುತಿಸುವಂತೆ ಆ ಕಾಲದ ಚಿತ್ರ ರಚನೆಕಾರ ಯೋಚಿಸಿದ ರೇಖೆ ಅಪೂರ್ವವಾಗಿದೆ.[೫] ಎರಡು ಕೈಗಳನ್ನು ಮೇಲಕ್ಕೆತ್ತಿ ಕಾಲುಗಳನ್ನು ಅಗಲಿಸಿದ ಭಂಗಿಯ ವ್ಯಕ್ತಿ ಚಿತ್ರದಲ್ಲಿ ಕಾಲುಗಳ ನಡುವೆ ಶಿಶ್ನವನ್ನು (ಸಾಂಕೇತಿಕವಾಗಿ) ತೋರಿಸಿದರಾಯ್ತು ಪುರುಷ ನಗ್ನನಾಗಿ ಕುಣಿಯುತ್ತಿದ್ದಾನೆ[೬] ಎಂದು ತೋರುತ್ತದೆ. ಹೀಗೆ ಮನುಷ್ಯನ ಚಿತ್ರ ಶೈಲಿಯು ಭಿನ್ನತೆಯನ್ನು ಗುರುತಿಸಬಹುದಾಗಿದೆ. ಮುಖವಾಡ

ಧರಿಸಿದ ಮತ್ತು ಮೈಗಳ ಮೇಲೆ ಕೆಲ ರೇಖೆಗಳನ್ನು ಬರೆದುಕೊಂಡ ಮತ್ತು ಕುಣಿತದಲ್ಲಿ ಸಾಲು ಮಾನವನ ಚಿತ್ರಗಳ ಶೈಲಿಯು ಮತ್ತೊಂದು ಲಕ್ಷಣವಾಗಿದೆ.

ಪ್ರಾಣಿ – ಪಕ್ಷಿಗಳ ಚಿತ್ರಗಳು :

ಈ ಪ್ರಾಣಿಯ ಚಿತ್ರಗಳಲ್ಲಿ ಕಂಡು ಬರುವ ಪ್ರಾಣಿ–ಪಕ್ಷಿಗಳೆಂದರೆ ಎತ್ತು, ಗೂಳಿ, ಜಿಂಕೆ, ಹಸು, ಟಗರು, ಮೊಲ, ನಾಯಿ, ನವಿಲು ಮುಂತಾದವು. ಹಲವು ನೆಲೆಗಳಲ್ಲಿನ ಚಿತ್ರದಲ್ಲಿ ಹೆಚ್ಚಿನ ಚಿತ್ರಗಳು ಗೂಳಿ ಎತ್ತು ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿ ಕಂಡು ಬರುವ ಸಹಜ ಚಿತ್ರಗಳಾಗಿವೆ. ಎತ್ತಿನ ಕೋಡುಗಳು ಉದ್ದವಾಗಿದ್ದು ಒಂದೇ ರೇಖೆಯ ಮೇಲೆ ಬಾಗಿರುತ್ತದೆ.[೭] ನಿಸರ್ಗದಲ್ಲಿ ಬೆಳೆದ ಬಲಶಾಲಿ ತಳಿ ಎಂಬಂತೆ ಎದ್ದು ಅವುಗಳ ತಲೆಯ ಸ್ವಲ್ಪ ಮಟ್ಟಿಗೆ ಬಾಗಿರುವ ವಿನ್ಯಾಸವಾಗಿದೆ. ಸಂಜರಾಯನ ಕೋಟೆಯಲ್ಲಿ ಚಿತ್ರಗಳ ಇಲ್ಲಿನ ಶೈಲಿಯು ಕೊಂಚ ಅಭಿವೃದ್ಧಿಯನ್ನು ಹೊಂದಿದೆ. ಇತಿಹಾಸ ಪ್ರಾರಂಭದ ಚಿತ್ರಗಳು ಪ್ರಾಗೈತಿಹಾಸಿಕ ಚಿತ್ರಗಳು ಅಕ್ಕಪಕ್ಕದ ಗುಂಡುಗಳಲ್ಲಿ ಕಂಡು ಬರುತ್ತವೆ. ಇಲ್ಲಿ ಹುಲಿ ಚಿತ್ರವು ಕೈಕಾಲು, ಬಾಲ, ಕಿವಿ, ಕಣ್ಣು, ಬಾಯಿ, ಮೈಮೇಲೆ ರೇಖೆಗಳಿಂದ ಕೂಡಿದ್ದು ಇದು ಪರಿಪೂರ್ಣವಾಗಿ ಇರುವ ಚಿತ್ರವಾಗಿದೆ. ಇದು ಸುಮಾರು ಒಂದೂವರೆ ಮೀಟರ್ ಉದ್ದವಾದೊಂದೇ ಚಿತ್ರವಾಗಿದೆ. ಚಿತ್ರವು ಒಂಟಿ ದೊಡ್ಡ ಚಿತ್ರಗಳು ಎಲ್ಲಿ ಕಂಡು ಬರುತ್ತವೆಯೋ ಅಲ್ಲಿ ಸ್ಪಷ್ಟತೆ ಹೆಚ್ಚು ತೋರಿಸಲು ಕಲಾವಿದ ಪ್ರಯತ್ನಿಸಿದ್ದಾನೆ.

ಸಮೂಹ ಚಿತ್ರಗಳನ್ನು ಚಿತ್ರಿಸುವ ಕಲಾವಿದನ ಚಿತ್ರಗಳು ಚಿಕ್ಕ ಚಿಕ್ಕ ರೇಖೆಯನ್ನು ಹಲವು ಚಿತ್ರಾಕೃತಿಗಳು ತಮ್ಮದಾಗಿಸಿಕೊಂಡಿರುತ್ತವೆ. ಆದರೆ ಒಂಟಿ ದೊಡ್ಡ ಮಟ್ಟದ ಚಿತ್ರಗಳು ಚಿಕ್ಕ ಚಿಕ್ಕ ರೇಖೆಗಳನ್ನು ಮೈಗೂಡಿಸಿಕೊಂಡು ಪರಿಪೂರ್ಣ ಚಿತ್ರಗಳಾಗಿ ಮೇರಿ ಯಾವ ಚಿತ್ರ ಶೈಲಿಯಲ್ಲಿಯೂ ಪ್ರತ್ಯೇಕತೆಯನ್ನು ತೋರುತ್ತದೆ. ಬರಮ ದೇವರ ಗುಂಡಿನ ದೊಡ್ಡ ಮನುಷ್ಯಕೃತಿಯ ಚಿತ್ರಗಳು ಮಿಂಚೇರಿಯಲ್ಲಿ ಸಿಗುವ ಕತ್ತೆಗರಕ ಪ್ರಾಣಿಯ ಚಿತ್ರ ಇದೆ. ಇದೇ ರೀತಿಯ ದೊಡ್ಡ ದೊಡ್ಡ ಚಿತ್ರಗಳ ಶೈಲಿಯಲ್ಲಿ ಭಿನ್ನತೆಯನ್ನು ಗುರುತಿಸಬಹುದು. ಗೂಳಿಯ ಚಿತ್ರಗಳ ಕೋಡುಗಳು ಎತ್ತುಗಳ ಚಿತ್ರಕ್ಕಿಂತ ಸ್ವಲ್ಪ ಚಿಕ್ಕವಾಗಿದ್ದು ಎತ್ತಿನ ಕೋಡುಗಳಿಗಿಂತ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಬಾಗಿರುತ್ತವೆ. ಗೂಳಿಯ ಮೇಲೆ ಬರುವಂತ ಇಣಿಯ ಗೂಳಿಯ ಕೋಡುಗಳ ಹಿಂಭಾಗದಲ್ಲಿ ಬಂದರೆ ಎತ್ತಿನ ಬೆನ್ನಿನ ಭಾಗದಲ್ಲಿ ಚಿತ್ರಿಸಿ ಈ ಎರಡರ ಮಧ್ಯದ ಚಿತ್ರದ ಭಿನ್ನತೆ ಕಲಾವಿದ ತೋರಿಸಿದ್ದಾನೆ. ಗೂಳಿಯ ಚಿತ್ರ ರಚನೆಯ ದೃಷ್ಟಿಯಿಂದ ಒಂದು ಉತ್ತಮ ಕಲಾಕೃತಿ ಎನ್ನಬಹುದು.[೮] ಇದು ರೇಖಾ ವರ್ಣ ನೆರಳಿನಂತ ಚಿತ್ರದಲ್ಲಿರುತ್ತವೆ. ಮುಂಡ, ಕಾಲು, ಮುಖ, ಕತ್ತು, ಕೋಡು ಮತ್ತು ಕಿವಿ ಎಲ್ಲವೂ ಪ್ರಮಾಣಬದ್ಧವಾಗಿವೆ.

ಜಿಂಕೆಗಳ ಸಾಲಿನಲ್ಲಿ ಪ್ರತಿಯೊಂದು ಜಿಂಕೆಯು ಆಕಾರ ದೇಹದ ಪ್ರಮಾಣ ಬದ್ಧತೆ ಒಂದೇ ರೀತಿಯಲ್ಲಿರುವುದು ನಿಜಕ್ಕೂ ಆಶ್ಚರ್ಯಕರ[೯] ಎಂದು ಕುದುರೆ ಸವಾರರು ಮತ್ತು ಜಿಂಕೆಗಳು ಒಂದರ ಹಿಂದೆ ಒಂದರಂತೆ ನೇರ ಸಾಲಿನಲ್ಲಿ ಚಿತ್ರಿಸಿರುವುದು ಒಂದು ತಗಡಿನಲ್ಲೊ ರಟ್ಟಿನಲ್ಲೋ ಬೇಕಾದ ಚಿತ್ರವನ್ನು ಕತ್ತರಿಸಿ ಅದನ್ನು ಗೋಡೆಯ ಮೇಲಿಟ್ಟು ಕತ್ತರಿಸಿದ ಭಾಗವನ್ನು ಬಣ್ಣದಿಂದ ಬಳಿದು ತೆಗೆದ ಚಿತ್ರಗಳಂತಿವೆ[೧೦] ಎಂಬುದು ಸತ್ಯವಾದ ಸಂಗತಿಯಾಗಿದೆ. ಈ ಕ್ರಮದಲ್ಲಿ ತೆಗೆದ ಎಲ್ಲಾ ಚಿತ್ರಗಳು ಒಂದೇ ಪ್ರಕಾರವಾಗಿರುತ್ತವೆ. ಮೇಲೆ ಹೇಳಿದ ಸಾಲಿನಲ್ಲಿರುವ ಜಿಂಕೆ ಚಿತ್ರಗಳು ಮೇಲ್ನೋಟಕ್ಕೆ ಈ ರೀತಿ

ಒಂದೇ ತರಹ ಇದ್ದರೂ ಇವುಗಳನ್ನು ಬಹು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅಲ್ಲೊಂದು ಇಲ್ಲೊಂದು ಸ್ವಲ್ಪ ವ್ಯತ್ಯಾಸಗಳನ್ನು ಕಾಣಬಹುದು[11] ಮತ್ತು ಕೆಂಪೊತ್ತಿದ ಬಣ್ಣ ಸಾಲಿನ ಜಿಂಕೆಗಳ ದೇಹ ದೊಡ್ಡ ಹಾಗೂ ತೆಳ್ಳಗೆ ಕಾಲುಗಳು ಕಡ್ಡಿಯಂತೆ ಕೋಡುಗಳು ಕವಲೊಡೆದ ರೆಂಬೆಯಂತಿವೆ. ಬಾಲ ಸಣ್ಣದಿದ್ದು ಮೇಲಕ್ಕೆತ್ತಿದೆ. ಕುತ್ತಿಗೆ, ನೀಳ ಸಣ್ಣ ಹಾಗೂ ನೆಟ್ಟಗಿದ್ದು ತಲೆಯೆತ್ತಿ ನೋಡುತ್ತಿರುವ[12] ಚಿತ್ರ ಶೈಲಿಯಲ್ಲಿನ ಜಿಂಕೆಯ ಚಿತ್ರದ ವಿಶೇಷತೆಯನ್ನು ಕಾಣಬಹುದು. ಕುರುಗೋಡಿನಲ್ಲಿ ಒಂದು ಗರ್ಭ ಧರಿಸಿದ ಜಿಂಕೆಯು ಸಾಮಾನ್ಯ ಜಿಂಕೆಗಳಿಗಿಂತ ಭಿನ್ನವಾಗಿ ತೋರಿಸಿರುವುದು ಕಲಾವಿದನ ಕಲಾಕೌಶಲ್ಯವೇ ಎಂದು ಹೇಳಬಹುದು.

ಪಕ್ಷಿಗಳ ಚಿತ್ರಗಳು :

ಪಕ್ಷಿಗಳಲ್ಲಿ ನವಿಲಿನ ಚಿತ್ರಗಳು ಹೆಚ್ಚಿನ ರೀತಿಯಲ್ಲಿ ಕಂಡು ಬರುತ್ತವೆ. ಮುಖ, ಕಣ್ಣು, ತಲೆಯ ಜುಟ್ಟು, ಕಾಲು ಹಿಂದಿನ ಗರಿಗಳನ್ನೊಳಗೊಂಡ ಮಿಂಚೆರಿ ನೈಜತೆಯನ್ನು ಒಳಗೊಂಡ ರೇಖಾ ಚಿತ್ರವಾಗಿದೆ. ಬಳ್ಳಾರಿಯ ಗುಡ್ಡದಲ್ಲಿ ಇಲ್ಲಿಯೂ ಎರಡು ನವೀನ ಚಿತ್ರಗಳು ಕಂಡು ಬಂದಿದ್ದು ವರ್ಣಮಯವಾಗಿದೆ. ಈ ಚಿತ್ರಗಳಿಗೆ ಮಿಶ್ರಣವನ್ನು ಲೇಪಿಸಿದ್ದಾರೆ. ಸುತ್ತಲೂ ಬಿಳಿ ವರ್ಣದಿಂದ ಬಾಹ್ಯ ರೇಖೆಯನ್ನು ಮೊದಲು ಹಾಕಿಕೊಂಡು ನಂತರ ಒಳಬಾಗದಲ್ಲಿ ಹಳದಿ ಬಣ್ಣವನ್ನು ಲೇಪನ ಮಾಡಿದ್ದು ಈ ಚಿತ್ರ ಶೈಲಿಯು ಪ್ರಗತಿಯ ಮತ್ತೊಂದು ಹೆಜ್ಜೆ ಎಂದು ಹೇಳಬಹುದು.

ಶೈಲಿಯ ಮತ್ತೊಂದು ಅಂಗ ಪ್ರಮಾಣದಲ್ಲಿ ಚಿಕ್ಕ ಪ್ರಮಾಣದ ಚಿತ್ರಗಳು ಮಧ್ಯಮ ಪ್ರಮಾಣದ ಚಿತ್ರಗಳು ದೊಡ್ಡ ಪ್ರಮಾಣದ ಚಿತ್ರಗಳು ಬೃಹತ್ ಪ್ರಮಾಣದ ಚಿತ್ರಗಳು ಎಲ್ಲಾ ನೆಲೆಯಲ್ಲಿಯೂ ಸಹಜವಾಗಿದೆ.

ಸಾಮಾನ್ಯವಾಗಿ ಬಿಡಿ ಚಿತ್ರಗಳಿಗಿಂತ ಗುಂಪಿನ ಚಿತ್ರಗಳು ಸಣ್ಣ ಪ್ರಮಾಣದಲ್ಲಿ ಕಂಡು ಬರುತ್ತವೆ. ಅನೇಕ ಚಿತ್ರಗಳು ಬಿಡಿಸುವ ಉದ್ದೆಶ ಇರುವುದರಿಂದ ಚಿತ್ರಗಳನ್ನು ಸಣ್ಣ ಪ್ರಮಾಣದ ಚಿತ್ರಗಳನ್ನು ನೋಡನಹುದಾಗಿದೆ. ಅದೇ ರೀತಿಮಧ್ಯಮ ಪ್ರಮಾಣದಲ್ಲಿ ಚಿತ್ರಗಳು ಇವುಗಳ ಸಣಂಖ್ಯೆಗಳ ಕಡಿಮೆ. ಮಿಂಚೇರಿಯಲ್ಲಿ ಕತ್ತೆಗಾರಕ ಪ್ರಾಣಿ ಚಿತ್ರವು ಸುಮಾರು ಎರಡುವರೆಯಿಂದ ಮೂರು ಮೀಟರ್ ಉದ್ದವಿದೆ. ಬೃಹತ್ ಪ್ರಮಾಣದ ಚಿತ್ರವು ತುಂಬಾ ವಿರಳವಾಗಿ ಕಂಡು ಬರುತ್ತವೆ.

ಹಸುವಿನ ಚಿತ್ರಗಳು :

ಹಸುವಿನ ಚಿತ್ರಗಳು ಇವು ಶೈಲಿಭಂಗಿಯಲ್ಲಿ ಎತ್ತಿನಂತೆ ಕಂಡುಬಂದರೂ ಈ ಹಸುವಿನ ಹಾಲು ಕುಡಿಯುತ್ತಿರುವ ಕರುವನ್ನು ಕೆಳಭಾಗದಲ್ಲಿಚಿತ್ರಿತವಾಗಿರುವುದು ಕಂಡುಬರುತ್ತದೆ. ಆದ್ದರಿಂದ ಹಸು ಎಂದು ಗುರುತಿಸಬಹುದಾಗಿದೆ.

ಎದುರು ಬದುರಾಗಿ ನಿಂತ ಚಿತ್ರಗಳು :

ಸಾಮಾನ್ಯವಾಗಿ ಎದುರುಬದುರಾಗಿ ನಿಂತ ಪ್ರಾಣಿಗಳಲ್ಲಿ ಕುದುರೆ ಮತ್ತು ಎತ್ತುಗಳು ಹೆಚ್ಚಿನ ಮಟ್ಟದಲ್ಲಿ ಕಂಡುಬರುತ್ತವೆ. ಮಿಂಚೇರಿಯಲ್ಲಿ ಕೆಲ ಪ್ರಾಣಿಗಳ ಮೇಲೆ ಒಬ್ಬೊಬ್ಬ ಮನುಷ್ಯನನ್ನು ಕೂಡ ನೋಡಬಹುದಾಗಿದೆ ಅದೇ ರೀತಿ ಸಂಜೀವರಾಯನಕೋಟೆಯಲ್ಲಿ ಇಬ್ಬರ ಮನುಷ್ಯ ಚಿತ್ರಗಳಿದ್ದು ಎದುರು

ಬದುರಾಗಿ ನಿಂತಿರುವುದರ ಜೊತೆಗೆ ಒಬ್ಬೊಬ್ಬರ ಕೈಯಲ್ಲಿ ಒಂದೊಂದು ಕೋಲುಗಳಿವೆ. ಒಂದು ಪ್ರಾಣಿ ಮತ್ತು ಪಕ್ಷಿ ಕಂಡುಬರುತ್ತಿದ್ದು ಈ ಶೈಲಿಯ ಭಂಗಿಯು ಕಾಪಾಡುತ್ತಿರುವಂತೆ ಗೋಚರಿಸುತ್ತದೆ.

ಕಡ್ಡಿಯಾಕಾರದ (ರೇಖೆಯ) ಚಿತ್ರಗಳು :

ಈ ಕಡ್ಡಿಯಾಕಾರಾದ ರೇಖೆಯ ಚಿತ್ರಗಳು ಶೈಲಿಯಲ್ಲಿ ಪ್ರಥಮ ಆರಂಭಿಕ ಚಿತ್ರಗಳೆಂದು ತೋರುತ್ತವೆ. ಉದಾಹರಣೆಗೆ, ಒಂದು ಲಂಬರೇಖೆ ಆ ರೇಖೆಗೆ ಅಡ್ಡವಾಗಿ ಮತ್ತೊಂದು ರೇಖೆ ಸಂಯೋಜನೆಗೊಳಿಸಿದರಾಯಿತು ಅದು ಮಾನವನ ಚಿತ್ರವಾಗಿರುತ್ತದೆ. ಈ ತರಹದ ಚಿತ್ರಗಳು ವರ್ಣರೇಖೆಯಲ್ಲಿ ಮತ್ತು ಕೊರೆದ ಚಿತ್ರಗಳಲ್ಲಿ ಕಂಡುಬರುವುದು ಈ ಶೈಲಿಯ ಸಾಮಾನ್ಯ ಲಕ್ಷಣವಾಗಿದೆ.

ಸಂಯುಕ್ತ (ಮನುಷ್ಯ–ಪ್ರಾಣಿ–ಪಕ್ಷಿ) ಚಿತ್ರಗಳು: :

ಸಾಮಾನ್ಯವಾಗಿ ಸವಾರರ ಚಿತ್ರಗಳು ಹೆಚ್ಚಿನ ಮಟ್ಟದಲ್ಲಿ ಕಂಡುಬರುತ್ತವೆ. ಸಂಜರಾಯನ ಕೋಟೆಯಲ್ಲಿ ಅಶ್ವಸವಾರರು ಚಿತ್ರಗಳಲ್ಲಿ ಚಾವಟಿ ಅಥವಾ ಕೋಲು ಹಿಡಿದು ಸವಾರಿ ಮಾಡುತ್ತಿರುತ್ತಾರೆ. ಇಲ್ಲಿ ರೇಖಾ ವಿನ್ಯಾಸವು ಬಾಲ ಮತ್ತು ಕತ್ತುಗಳಲ್ಲಿ ಕೇಶ ವಿನ್ಯಾಸದ ಸ್ಪಷ್ಟತೆಯನ್ನು ತೋರಿಸಿದ್ದಾನೆ. ಇದು ಅಲ್ಲದೇ ದನದ ಮೇಲೆ ಮನುಷ್ಯ ನಿಂತು ಅಥವಾ ಕುಳಿತಿರುವ ಕೆಲವು ಚಿತ್ರಗಳು ಕಪ್ಪಗಲ್ಲು ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಅವರಣದಲ್ಲಿ ಕಂಡುಬರುತ್ತವೆ. ನಾಯಿಯ ಜೊತೆಗಿನ ಚಿತ್ರಗಳು ಕೂಡ ಕಪ್ಪಗಲ್ಲಿನಲ್ಲಿ ಇವೆ. ಸಾಮಾನ್ಯವಾಗಿ ಈ ಪ್ರಾಗೈತಿಹಾಸಿಕ ಚಿತ್ರಗಳಲ್ಲಿ ಪ್ರಾಣಿ–ಪಕ್ಷಿ–ಮನುಷ್ಯ ಈ ಮೂರರ ಸಂಯೋಜನೆಯ ಗುಂಪುಗಳ ಚಿತ್ರಶೈಲಿಯಾಗಿದೆ.

ಇತರೆ: :

ಈ ಪ್ರಾಗೈತಿಹಾಸ ಕಾಲದ ಚಿತ್ರಶೈಲಿಯೇ ವಿಶಿಷ್ಟವಾಗಿದೆ.ಆ ಕಾಲದ ಜೀವನದ ಕೆಲವು ಅಂಶಗಳೇ ಪ್ರಧನವಾಗಿವೆ. ಹಡಗು, ಗಿಡಗಳು, ಹಸ್ತ ಮುದ್ರಿಕೆ ಸೂರ್ಯಚಿನ್ಹೆಗಳು, ವೃತ್ತಾಕೃತಿಗಳು, ಸಾಲುಕುಣಿತ, ಲೈಂಗಿಕ ಕ್ರಿಯೇ, ಶವ ಸಂಸ್ಕಾರ, ಯಾಂತ್ರಿಕ ಆರಾಧನೆ. ಗವಿವರ್ಣ, ಮತ್ತು ಬಯಲು ಬಂಡೆ ಚಿತ್ರಗಳಲ್ಲಿ ಅಪರೂಪವಾಗಿ ಅಲ್ಲಲ್ಲಿ ಕುತೂಹಲಕಾರಿಯಾದ **ಕ್ಯೊಡಿನ** ರೇಖಾಕೃತಿಗಳು, ಉಡ, ಹಂದಿ, ಆನೆ, ಚಿರತೆ, ಹಾವು, ಮಂಗ, ಮೀನು ಮತ್ತು ವಿಚಿತ್ರ ಪ್ರಾಣಿ ಆಕೃತಿ (ಹಂಪಿ) ಗಳು ಮುಂತಾದವು ಚಿತ್ರ ರೇಖೆಗಳು ಸ್ಪಷ್ಟವಾಗಿ ವಸ್ತುವಿನ ನಿಖರತೆಯನ್ನು ಒಳಗೊಂಡ ಲಕ್ಷಣವಾಗಿದೆ ಎಂದು ಹೇಳಬಹುದು. ಕೆಲವು ಮಾತ್ರ ಗೊಂದಲಕ್ಕೆ ಎಡೆ ಮಾಡಿಕೊಡುವವು. ಇವುಗಳು ಅಂದಿನ ಸ್ಪಷ್ಟ ರೇಖೆಯಾಗಿದ್ದು ಇತ್ತೀಚಿನ ದಿನಗಳಲ್ಲಿ ಮಾಸಿ ಅಥವಾ ಕೆಲವು ಭಾಗ ಮಾತ್ರ ಉಳಿದುಕೊಂಡ ವಿಚಿತ್ರ ಚಿತ್ರಗಳಿಗೆ ಎಡೆಮಾಡಿರಬಹುದು. ಅಥವಾ ಅಂದಿನ ದಿನದಲ್ಲಿ ಆ ತರಹದ ಪ್ರಾಣಿ–ಪಕ್ಷಿಗಳು ಇರಬಹುದು. ಉದಾ: ಯೆತಿ, ಡೈನಾಸರ್‌ನಂತಹ ಪ್ರಾಣಿಗಳು ಇಂದಿನ ದಿನಗಳಲ್ಲಿ ಇಲ್ಲವಾಗಿವೆ.

ತಂತ್ರಗಾರಿಕೆ: :

ಪ್ರಾಗೈತಿಹಾಸಿಕ ಚಿತ್ರ ರಚನಾ ತಂತ್ರ ಸಾಮಗ್ರಿಗಳು ಕುತೂಹಲಗಳಿಂದ ಬಣ್ಣ, ಕುಂಚ, ಉಳಿ, ಅಂಚು, ಮಾಧ್ಯಮಗಳಂತ ಪರಿಕರಗಳನ್ನು ತಯಾರಿಸಿಕೊಂಡು ಚಿತ್ರ ರಚನೆ ಮಾಡಿದ್ದಾನೆ[೧೩] ನಿಸರ್ಗದಲ್ಲಿ

ಸ್ವಾಭಾವಿಕವಾಗಿ ದೊರೆಯುತ್ತಿದ್ದ ಮಣ್ಣಿನ ಗಟ್ಟಿಗಳಿಂದ ಬಣ್ಣ, ಗಿಡದ ಟೊಂಗೆ ಪ್ರಾಣಿಗಳ ಕೋಡುಗಳಿಂದ ಕುಂಚ ರಕ್ತದಿಂದ ಅಂಚು ಮಾಧ್ಯಮ ಕಲ್ಲಿನಿಂದ ಚೂಪಾದ ಸಾಧನ ತಯಾರಿಸಿಕೊಂಡು ತನ್ನ ಚಿತ್ರರಚನೆಯ ತಂತ್ರಗಾರಿಕೆಯನ್ನು ಪೋರೈಸಿಕೊಂಡಿದ್ದಾನೆ[೧೪] ಎಂದು ವಿದ್ವಾಂಸರು ಗುರುತಿಸುತ್ತಾರೆ. ಇವನು ಆಯ್ದುಕೊಳ್ಳುವ ಸ್ಥಳ (ಭಿತ್ತಿ)ಜಾಣ್ಮೆಯನ್ನು ಉಪಯೋಗಿಸಿದ್ದಾನೆ ಎನ್ನಬಹುದು. ಬಣ್ಣ ಲೇಪನ ವಿಧಾನವು ಕೂಡ ವಿಶೇಷವಾಗಿ ಅಂದೇ ತಿಳಿದುಕೊಂಡಿದ್ದ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಪ್ರಾಗೈತಿಹಾಸಿಕ ಚಿತ್ರರಚನೆಯ ತಂತ್ರಗಾರಿಕೆಯಲ್ಲಿ ಒಳಗೊಂಡಿದ್ದು ಕೆಲ ಅಂಶಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಳ್ಳಲಾಗಿದೆ.

೧. ಸ್ಥಳ

ಚೂಪಾದ ಸಾಧನ

ಬಣ್ಣ

ಅಂಚುಮಾಧ್ಯಮ

ಬಣ್ಣ ಮಿಶ್ರಗೊಳಿಸುವ ಬಟ್ಟಲು

ಕುಂಚ

ಬಣ್ಣ ಲೇಪನ ವಿಧಾನ

ಸ್ಥಳ :

ಪ್ರಾಗೈತಿಹಾಸಿಕ ಚಿತ್ರಕಲಾವಿದ ಆಯ್ದುಕೊಳ್ಳುವ ಸ್ಥಳವು ಬಹು ಮುಖ್ಯವಾದುದ್ದು, ಇವರು ಮುಖ್ಯವಾಗಿ ಎರಡು ತರಹದ ಕಲ್ಲುಗಳನ್ನು ಆಯ್ದುಕೊಂಡಿದ್ದಾರೆ. ೧. ಕರೆಕಲ್ಲು ೨. ಬಿಳಿಪದರು ಕಲ್ಲು ಕರೆ ಕಲ್ಲು ಕೊರೆದು ಕುಟ್ಟಿ ಚಿತ್ರಗಳಿಗೆ ತುಂಬಾ ಅನುಕೂಲವಾದಂತದ್ದು. ಇದು ತುಂಬಾ ಗಟ್ಟಿ ಇರುವುದರಿಂದ ಕೊರೆಯಲು ಬೇಕಾದ ಸುತ್ತಮುತ್ತಲಿನ ಸ್ಥಳವು ಯಾವುದೇ ಪದರು(ಚಕ್ಕಳ) ಬಂದು, ರೇಖೆ ಕೆಡುವುದಿಲ್ಲ ಈ ಕಲ್ಲುಗಳ ಮೇಲಿನ ಚಿತ್ರವು ತುಂಬಾ ದಿನಗಳ ಕಾಲ ಹಾಳಾಗದಂತಿರುವುವು. ಈ ಕಲ್ಲನ್ನು ನಯಗೊಳಿಸಿ ಭಿತ್ತಿ ತಯಾರಿಸಿಕೊಳ್ಳುತ್ತಿದ್ದ ನಂತರ ಚಿತ್ರ ಬರೆಯುತ್ತಿದ್ದ ಇಂತಹ ಚಿತ್ರಗಳು ಸಂಗನಕಲ್ಲು, ಬೆಳಗಲ್ಲು, ಮಿಂಚೇರಿ, ಹಲಕುಂದಿ ಮುಂತಾದವುಗಳಲ್ಲಿ ಕಂಡು ಬರುತ್ತವೆ.

ಬಿಳಿ ಪದರಕಲ್ಲು :

ಈ ಕಲ್ಲಿನ ಸ್ಥಳದಲ್ಲಿ ವರ್ಣಚಿತ್ರಗಳು ಹೆಚ್ಚಾಗಿ ಕಂಡು ಬರುತ್ತವೆ. ಈ ಕಲ್ಲುಗಳು ಬೃಹತ್ ಗಾತ್ರದ ಕಲ್ಲುಗಳಲ್ಲಿ ಸಹಜವಾಗಿಯೇ ಆಸಕ್ತಿಯುಕ್ತವಾದಂತವುಗಳು ಈ ಆಸಕ್ತಿಯಲ್ಲಿ ಚಿತ್ರಗಳ ಕಂಡು ಬರುತ್ತವೆ. ಈ ಆಸಕ್ತಿಯ ಭಾಗವನ್ನು ಸ್ವಲ್ಪ ಅಂಚು ಬಿಟ್ಟು ಉಳಿದ ಭಾಗವನ್ನು ಸ್ವಲ್ಪ ಮಟ್ಟಿಗೆ ತಗ್ಗು ಮಾಡಿಕೊಂಡು ಚಿತ್ರ ಮಾಡುವುದು ಈ ಚಿತ್ರದ ಪ್ರದೇಶಕ್ಕೆ ಮಳೆ ನೀರು ತಾಕದೇ ಇರುವುದು ಕಂಡು ಬರುತ್ತದೆ. ಈ ಒಂದು ವಿಧಾನವು ಅವನು ತಾಂತ್ರಿಕತೆಗೆ ಹಿಡಿದ ಕೈಗನ್ನಡಿಯಾಗಿದೆ. 'ಬಳ್ಳಾರಿಗುಡ್ಡದ' ಮೂರನೆಯ ನೆಲೆಯಲ್ಲಿ, ಕಪ್ಪಗಲ್ಲು ಕಂಡು ಬರುತ್ತದೆ. 'ಬರಮದೇವರ'ಗುಡಿಯ ಹತ್ತಿರದ ಚಿತ್ರಗಳು ಅರ್ಧ ಚಂದ್ರಾಯ ಪೊಳ್ಳು ಭಾಗದ ಬಂಡೆಯ ಒಳಗೆ ಮತ್ತು ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಪೂರ್ವಕ್ಕಿರುವ

ಕೋಡುಗಲ್ಲೊಂದರ ಮೇಲೆ ಬಾಗಿಕೊಂಡಂತಿರುವ ಭಾಗದಲ್ಲಿ ಚಿತ್ರವಿದೆ[೨೫] ಸ್ವಾಭಾವಿಕವಾಗಿ ಇರುವಂತ ಕುಳಿಗಳು ಕೈ ಕಣ್ಣುಗಳಿಗೆ ಬರುವಂತೆ ಚಿತ್ರಿಸಿದ್ದಾರೆ. ಹೀಗೆ ಪ್ರಾಗೈತಿಹಾಸಿಕ ಚಿತ್ರ ರಚನೆ ಕಂಡು ಬರುವ ತಾಂತ್ರಿಕ ಅಂಶವಾಗಿದೆ. ಹೀಗೆ ಪ್ರಾಗೈತಿಹಾಸಿಕ ಚಿತ್ರ ರಚನೆಯು ವೈವಿಧ್ಯತೆಯಿಂದ ಕೂಡಿರುವುದು ಚೂಪಾದ ಸಾಧನ, ಕಡ್ಡಿ, ಬಣ್ಣ, ಕುಂಚಗಳನ್ನು ಬಳಸಿ ಚಿತ್ರ ರಚನೆ ಮಾಡಿದ್ದಾರೆ.

೩. ಬಣ್ಣ :

ಪ್ರಾಗೈತಿಹಾಸಿಕ ಕಾಲದ ಮಾನವನು ಬಂಡೆಗಳ ಮೇಲೆ ಚೂಪಾದ ಸಾಧನದಿಂದ ಕುಟ್ಟಿಗೀರಿ, ಕೊರೆದು ಚಿತ್ರ ರಚಿಸಿದಂತೆಯೇ ಸ್ವಭಾವಿಕವಾಗಿ ಪ್ರಕೃತಿಯಲ್ಲಿ ದೊರೆಯುತ್ತಿದ್ದ ವಸ್ತುಗಳಿಂದ ಬಣ್ಣಗಳನ್ನು ತಯಾರಿಸಿಕೊಂಡು ಆ ಬಣ್ಣದಿಂದಲೂ ಚಿತ್ರರಚನೆ ಮಾಡಿದ್ದಾನೆ. ಗವಿ ಮತ್ತು ಕಲ್ಲಾಸರೆಗಳು ಹೆಚ್ಚಿನ ಮಟ್ಟದ ಬಣ್ಣದ ಚಿತ್ರಗಳು ಕಂಡು ಬರುತ್ತವೆ. ಆತ ಈ ಚಿತ್ರಗಳ ಬಣ್ಣಕ್ಕಾಗಿ ಬಿಳಿ ಮಣ್ಣಿನ ಗಟ್ಟಿ ಹುರಿ ಮಂಜಿನಂತಹ ಸ್ವಾಭಾವಿಕ ಕೆಮ್ಮಣ್ಣಿನ ಗಡ್ಡಿ 'ವನಸೂತಿ' ಪ್ರಾಗೈತಿಹಾಸಿಕ ಬಂಡೆ ವರ್ಣಚಿತ್ತರಗಳಲ್ಲಿ ಉಪಯೋಗಿಸಲಾದ ವರ್ಣಗಳು ಸಾಮಾನ್ಯವಾಗಿ ಖನಿಜ ಮೂಲದವು ಗಳಾಗಿವೆ. (Minerals)ಇಲ್ಲದ ಈ ಖನಿಜ ಮೂಲ ವರ್ಣಗಳಲ್ಲೇ ಅತಿ ಹೆಚ್ಚು ಬಳಕೆಯಾದ ವರ್ಣವೆಂದರೆ 'ಹೆಡ್ಡೆಮಟೈಟ್' ಈ ಕಿಡ್ ಹೆಮಟೈಟ್‌ನಿಂದ ಕೆಂಪು ವರ್ಣ ತಯಾರಿಸಿ ಉಪಯೋಗಿಸುವುದನ್ನು ಕಂಡು ಕೊಂಡಿದ್ದರು. ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಮತ್ತು ಬಳ್ಳಾರಿಯ ಗುಡ್ಡದ ಎರಡನೆಯ ನೆಲೆಯಲ್ಲಿ ಪ್ರಾಣಿ ಬಣ್ಣದ ಕೆಂಪುಗಡ್ಡಿಗಳು ಎತೇಚ್ಚವಾಗಿ ಸಿಗುತ್ತವೆ. ಇಂತಹ ಗಡ್ಡೆಗಳಿಂದ ಉದ್ದೇಶರಹಿತವಾಗಿ ರೇಖೆಗಳನ್ನು ಹಾಕಿರಬೇಕು. ನಂತರ ಅವುಗಳು ಪ್ರಾಣಿಗಳನ್ನು ಕೊಂದ ನಂತರ ಕೈಗೆ ಹತ್ತಿದ ಕೆಂಪಾದ ರಕ್ತದಕೈಗಳಿಂದ ಹಸ್ತ ಒತ್ತಿ ಪ್ರತಿ ಹಸ್ತ, ಸ್ಪೂರ್ತಿಯಾಗಿರಬಹುದು. ಇದು ಮುಂದೆ ಚಿತ್ರಕಲೆ ಬೆಳೆಯುವುದಕ್ಕೆ ಬಣ್ಣದ ಬಳಕೆಗೆ ಮೊದಲ ಹೆಜ್ಜೆಯಾಗಿರಬಹುದು. ಕೊಬ್ಬನ್ನು ಬಿಳಿವರ್ಣ-ಹಳದಿಗಳಲ್ಲಿ ಕರಗಿಸಿ, ವರ್ಣವನ್ನು ತಯಾರಿಸಿಕೊಂಡು ಚಿತ್ರಗಳನ್ನು ಚಿತ್ರಿಸಿದ್ದಾರೆ. ಈ ಚಿತ್ರಗಳ

ಸುತ್ತಲಿನ ಜಿಡ್ಡಿನಾಂಶವೇ ಈ ತಂತ್ರಕ್ಕೆ ಕಾರಣವಾಗಿದೆ. ಇವುಗಳಲ್ಲದೇ ಕೆಲವೆಡೆ ಭಿಂಬೇಟ್ಕಾ ಆಕಾರವರ್ಣ ಚೆಂಬಲ್ಕಣಿವೆಯ ಪ್ರದೇಶದಲ್ಲಿ ಉತ್ಖನನದಲ್ಲಿ ಹೆಮಟೈಟ್ ವರ್ಣದ ತುಂಡುಗಳು ವರ್ಣ ಕಲೆಸುವ ಕಲ್ಲಿನ ಪ್ಯಾಲೀಟ್‌ಗಳನ್ನು ಮಡಿಕೆ ಮೇಲೆ ಆಕರ್ ವರ್ಣ ಪತ್ತೆಯಾಗಿವೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಈಗಲೂ ಕಲಾವಿದರು ಉಪಯೋಗಿಸುವಂತಹ ಕೆಲವು ಬಣ್ಣಗಳು ಈ ವಿಧಾನವನ್ನು ಹೋಲುತ್ತವೆ. ವಿಶ್ವದಾದ್ಯಾಂತ ಪ್ರಧಾನವಾಗಿ ಕೆಮ್ಮಣ್ಣು ವರ್ಣ (Red ochere) ವನ್ನು ಬಳಸಲಾಗಿದೆ. ಎಂದು ನೀರಿನಲ್ಲಿ ಗಂಧದಂತೆ ತೇಯ್ದು ಬಣ್ಣ ತಯಾರಿಸಿಕೊಳ್ಳುತ್ತಿದ್ದರು[೨೬] ಎಂಬ ಅಭಿಪ್ರಾಯವಿದೆ.

೪. ಅಂಟು ಮಾಧ್ಯಮ :

ಮುಖ್ಯವಾಗಿ ಭಿತ್ತಿಯನ್ನು ಅಂಟಿಕೊಳ್ಳಲು ಮತ್ತು ಹೆಚ್ಚು ದಿನ ಬಾಳಿಕೆಯಲ್ಲಿರುವಂತೆ, ಹಾಳಾಗದಂತೆ ಇಡುವುದರಕೋಸ್ಕರ ಉಪಯೋಗಿಸುತ್ತಿದ್ದರು. ಆಸ್ಟ್ರೇಲಿಯಾದ ಪ್ರಾಚೀನ ಬಂಡೆ ಚಿತ್ರಗಳಲ್ಲಿ ತತ್ತಿಯೊಳಗಿನ ಹಳದಿ ಲೋಳೆ(Yolk of egg) ಯನ್ನು ಮತ್ತು ಯುರೋಪಿನ ಪ್ರಾಣಿಗಳ ರಕ್ತ, ವರ್ಣಬಂಧಕವಾಗಿ ಬಳಸಿದ್ದಾರೆ. ಎಂದು ಸೌತ್ ಆಫ್ರಿಕಾದ ಪ್ರಾಚೀನ ಬಂಡೆ ಚಿತ್ರಗಳ ರಚನೆಗಾಗಿ ವರ್ಣ ತಯಾರಿಕೆಯಲ್ಲಿ

ಎಲುಬಿನೊಳಗಿನ ಜಿಗುಟು ಪದಾರ್ಥ ಕೊಬ್ಬು ಮತ್ತು ಪ್ರಾಣಿಗಳ ಮೂಲಕ ಇವುಗಳನ್ನು ಬಳಸಿರುವ ಸಾಧ್ಯತೆ ಇದೆ.[೧೬] ಎನ್ನುವ ಅಭಿಪ್ರಾಯವಿದೆ. ಜೊತೆಗೆ ಪ್ರಾಣಿಯ ರಕ್ತವನ್ನು ಕೂಡ ಉಪಯೋಗಿಸುತ್ತಿದ್ದ ಕೆಲ ಸ್ಥಳಗಳಲ್ಲಿ ಕಂಡು ಬರುತ್ತದೆ.

೫. ಬಣ್ಣ ಮಿಶ್ರಗೊಳಿಸುವ ಬಟ್ಟಲು :

ಈ ಪ್ರಾಗೈತಿಹಾಸಿಕ ಕಲಾವಿದನು ಮೊದಲಿಗೆ ಕಲ್ಲಿನ ಕುಣಿಗಳನ್ನು ಉಪಯೋಗಿಸಿ ಕೊಂಡಿರಬೇಕು. ನಂತರ ಗಟ್ಟಿಪುಡಿ ಮಾಡಿಕೊಂಡ ಇಲ್ಲವೇ ಮಂದವಾಗಿ ತೇಯ್ದುಕೊಂಡ ವರ್ಣ ವನ್ನು ಬಂಧಕದೊಡನೆ ಚೆನ್ನಾಗಿ ಬೆರಕೆ ಮಾಡಲು ಬಟ್ಟಲುಗಳಂತಹ ಸಾಧನವನ್ನು[೧೭] ಉಪಯೋಗಿಸಿ ರಬೇಕು. ವಾಕಣ್‌ಕರ್ ಅವರು ಚೆಂಬಲ್ ಕಣಿವೆಪ್ರದೇಶದಲ್ಲಿನ ಉತ್ಖನನದಲ್ಲಿ ಕಲ್ಲಿನಲ್ಲಿ ಕಡೆದು ರೂಪಿಸಿದ ವರ್ಣ ಕಲೆಸಿಕೊಂಡು ಪಾತ್ರೆಗಳನ್ನು ಪತ್ತೆ ಮಾಡಿದರು. ನಂತರದಲ್ಲಿ ಎಲೆಯ ದೋಣೆಗಳು ಎಲುಬಿನ ಡೊಳ್ಳುಗಳು, ಸೋರೆಕಾಯಿ, ಬಿಲ್ಪತ್ರಿಕಾಯಿಯಂತಹ ಜಾತಿಯ ಕಾಯಿಗಳ ಬಳಕೆ [೧೯] ಮಾಡಿವೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

೬. ಕುಂಚಗಳು :

ಪ್ರಾಗೈತಿಹಾಸಿಕ ಕಲಾವಿದ ಪ್ರಥಮವಾಗಿ ಕೈಗಳ ಬೆರಳಿನಿಂದ ಬಣ್ಣದ ದ್ರವದಲ್ಲಿ ಅದ್ದಿ ಚಿತ್ರ ಬರೆದಿರಬಹುದು ನಂತರ ಕಡ್ಡಿ, ಬೇರೆ ಬೇರೆಯಾದ ಕುಂಚಗಳನ್ನು ಬಳಸಿಕೊಂಡಿರಬೇಕು. ಗಿಡದ ಟೊಂಗೆಯ ತುದಿಯನ್ನು ಸರಿಯಾಗಿ ಜಜ್ಜಿ ತೊಗಟೆಯು ಹೋಗುವಂತೆ ಮಾಡಿ ಕೂದಲಿನಂತಹ ನಾರುಗಳನ್ನು ಬಿಡಿಸಿ ಅದನ್ನು ಕುಂಚದಂತೆ ಬಣ್ಣದ ರೇಖೆಗಳನ್ನು ಎಳೆಯಲು ಉಪಯೋಗಿಸಲು ಚಿತ್ರಗಳ ಪ್ರಮಾಣಕ್ಕನುಗುಣವಾಗಿ ಬೇರೆ ಬೇರೆ ಅಳತೆಯ ಕುಂಚಗಳನ್ನು ಉಪಯೋಗಿಸುತ್ತಿದ್ದರು. ಎಂಬ ಅಭಿಪ್ರಾಯವಿದೆ. ಬಳ್ಳಾರಿಯ ಗುಡ್ಡದ ಒಂದನೆಯ ನೆಲೆಯಲ್ಲಿ ಒಂದು ಚಿತ್ರಕ್ಕೆ ಎರಡು ಬಣ್ಣದ ಲೇಪನ ಇಲ್ಲಿ ಎರಡು ಕುಂಚಗಳು ಉಪಯೋಗಿಸಿರಬಹುದು. ಮತ್ತು ಬೆರಳಿನಿಂದ ಎಳೆದಂತೆ ಕಾಣುವ ಚಿತ್ರ ಪ್ರಮಾಣ ರೇಖೆಗಳು ಕೂಡ ಕಂಡು ಬರುತ್ತವೆ, ಒಂದನೆಯ ನೆಲೆಯಲ್ಲಿ ನಸುಗಂಪು ಬಣ್ಣದ ಚಿತ್ರಗಳು ನೆರಳು ಚಿತ್ರಗಳ ಮೇಲೆ ಮನುಷ್ಯರ ಮತ್ತು ಜಿಂಕೆಯ ಚಿತ್ರಗಳು ಬಿಳಿವರ್ಣದ ಚಿತ್ರಗಳು ಮಧ್ಯ ಮಧ್ಯದಲ್ಲಿ ತೆಳುವಾದ ರೇಖೆಗಳನ್ನು ಸಂಯೋಜನ ಗೊಳಿಸಲಾಗಿದೆ. ಇವುಗಳಲ್ಲಿ ಎರಡು ಮೂರು ತರಹದ ಕುಂಚಗಳನ್ನು ಉಪಯೋಗಿಸಿರುವಂತೆ ಕಂಡು ಬರುತ್ತದೆ.

೭. ಬಣ್ಣ ಲೇಪನ ವಿಧಾನ :

ಪ್ರಾಗೈತಿಹಾಸಿಕ ಮಾನವನ ಚಿತ್ರಗಳು ಸ್ಥಳ ಅಥವಾ ಭಿತ್ತಿಯ ಮಾಧ್ಯಭಾಗದಲ್ಲಿ ಕಂಡು ಬರುತ್ತವೆ. ಆಯ್ದುಕೊಂಡ ಕೊನೆಯಲ್ಲಿ ಲೇಪನ ಮಾಡಿರುವುದರಿಂದ ಮಳೆ ಮತ್ತು ಸವೆತದಿಂದ ಹಾಳಾಗುವ ಸಂಭವ ಇರುವುದರಿಂದ ಮಧ್ಯದಲ್ಲಿ ಇರುವ ಚಿತ್ರ ಸುರಕ್ಷಿತವಾಗಿ ಇರುವ ತಾಂತ್ರಿಕತೆಯು ತಿಳಿದುಕೊಂಡಿದ್ದ ಎನ್ನುವುದು ಸಾಮಾನ್ಯವಾಗಿ ಎಲ್ಲಾ ನೆಲೆಗಳಲ್ಲಿ ಕಂಡು ಬರುತ್ತದೆ. ಇವುಗಳಲ್ಲದೇ ಕೆಲವು ಕಡೆಗಳಲ್ಲಿ ಮೊದಲಿಗೆ ಚಿತ್ರಗಳ ಹೊರರೇಖೆಯಲ್ಲಿ ಹಾಕಿಕೊಂಡು ಒಳಭಾಗದಲ್ಲಿ ಅಂಟು ಪದಾರ್ಥವನ್ನು ಲೇಪಿಸಿ ಅದು ಹಸಿ ಇರುವಾಗಲೇ ಅದರ ಮೇಲೆ ಪಣದಾದ ಬಣ್ಣದ ಪುಡಿಯನ್ನು ಒತ್ತುತ್ತಿದ್ದನು.[೨೦] ಎನ್ನುವ ಅಭಿಪ್ರಾಯ ಎಷ್ಟೋ ವರ್ಷಗಳಾದರೂ ಹಾಳಾಗದಿರುವುದನ್ನು ನೋಡಿದರೆ ಸತ್ಯ ಎನಿಸುತ್ತದೆ. ಸಂಗನಕಲ್ಲು

ಮತ್ತು ಕಪ್ಪಗಲ್ಲುಗಳ ಚಿತ್ರಗಳು ತೇಳುವಾದ ರಕ್ತದ ಲೇಪನಗಳು ಕಂಡು ಬರುತ್ತವೆ. ಇವುಗಳಲ್ಲದೇ ಅಚ್ಚು ತಂತ್ರದಿಂದ ರಚನೆ ಮಾಡಿರಬಹುದಾದ ಚಿತ್ರಗಳಿಗೆ ಪ್ರಾಣಿಯ ಚರ್ಮ ಇಲ್ಲವೇ ಗಿಡದ ತೊಗಟೆ ಅಥವಾ ಎಲೆಯಲ್ಲಿ ಮೊದಲು ಚಿತ್ರಿಸಿದ ಚಿತ್ರಗಳ ಭಾಗವನ್ನು ಕತ್ತರಿಸಿಕೊಂಡು ಅದನ್ನು ಬಂಡೆಯ ಮೇಲಿಟ್ಟು ಕತ್ತರಿಸಿದ ಭಾಗಕ್ಕೆ ಬಣ್ಣ ತುಂಬಿ ರಚಿಸಲಾಗಿರಬಹುದು ಎಂದು[೨೧] ಅಭಿಪ್ರಾಯವಿದೆ. ಇವುಗಳಲ್ಲದೆಯೇ ಜಾಮಿತಿಯ ಆಕೃತಿಗಳು ಅಲ್ಲಲ್ಲಿ ಕಂಡು ಬರುವುದರಿಂದ ಇವುಗಳನ್ನು ಸಹ ಉಪಯೋಗಿಸುತ್ತಾ ಚಿತ್ರಾಕೃತಿಯನ್ನು ಮೂಡಿಸಿದ್ದಾನೆ.

ಮುಖ್ಯವಾಗಿ ಚಿತ್ರಗಳ ಪ್ರಮಾಣ ಮತ್ತು ರಚನಾ ತಾಂತ್ರಿಕ ವಿಧಾನಗಳಿಂದ ಕೂಡ ಅವುಗಳ ಕಾಲ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಹಂಪೆ, ಮಿಂಚೇರಿ, ಸಂಜರಾಯನಕೋಟೆಗಳಲ್ಲಿ ದೊಡ್ಡ ಪ್ರಮಾಣದ ಚಿತ್ರಗಳಾಗಿದ್ದು ಅಳತೆ ಪ್ರಮಾಣಕ್ಕೆ ಕೈ ಅಥವಾ ಬಣ್ಣದಿಂದ ಮಾರ್ಕ್ ಮಾಡಿಕೊಳ್ಳುತ್ತಿರಬೇಕು. ಏಕೆಂದರೆ ದೊಡ್ಡ ಪ್ರಮಾಣದ ಚಿತ್ರಗಳು ಕೂಡ ಪ್ರಮಾಣ ಬದ್ಧವಾಗಿವೆ. ಸ್ವಲ್ಪ ಸೂಕ್ಷ್ಮದಿಂದ ನೋಡಿದಾಗ ಅಲ್ಲೊಂದು ಇಲ್ಲೊಂದು ವ್ಯತ್ಯಾಸ ಕಾಣಬಹುದು. ಸಾಲು ಕುಣಿತದ ಚಿತ್ರಗಳು, ಜಿಂಕೆ ಚಿತ್ರಗಳು ತಾಂತ್ರಿಕವಾಗಿ ಅಚ್ಚೆಗಳನ್ನು ಉಪಯೋಗಿಸುತ್ತಿದ್ದರು ಎನ್ನುವುದು ತಿಳಿದು ಬಂದರೂ ಈ ದೊಡ್ಡ ಪ್ರಮಾಣದ ಕೊರೆದ ರೇಖಾ ಚಿತ್ರಗಳಾಗಿದೆ ಮತ್ತು ಎತ್ತರವಾದ ಸ್ಥಳಗಳಲ್ಲಿ ನಿಂತುಕೊಳ್ಳಲು ಕೂಡ ಆಸರೆ ಇಲ್ಲದ (ಬಳ್ಳಾರಿ ಕೋಟೆ) ಸ್ಥಳಗಳಲ್ಲಿ ಚಿತ್ರ ಬಿಡಿಸುವುದು ಪ್ರಯಾಸದ ಕೆಲಸವೇ ಸರಿ. ಸಾಮಾನ್ಯವಾಗಿ ಚಿತ್ರವೇ ಪ್ರಧಾನವಾದ ಅಭಿವ್ಯಕ್ತಿ ಮಾಧ್ಯಮವಾಗಿದ್ದ ಸಂದರ್ಭದಲ್ಲಿ ಮಾತ್ರ ಚಿತ್ರರಚನಕಾರರು ತಮ್ಮೆಲ್ಲ ಬೌದ್ಧಿಕ ಮತ್ತು ದೈಹಿಕ ಶ್ರಮವನ್ನು ವಿನಿಯೋಗಿಸಿ ಇಂಥ ಚಿತ್ರಗಳನ್ನು ಬಿಡಿಸಿರಲು ಸಾಧ್ಯ[೨೨]. ಎತ್ತರವಾದ ಸ್ಥಳದಲ್ಲಿ ಚಿತ್ರಗಳನ್ನು ಬಿಡಿಸಬೇಕಾದ ಸಂದರ್ಭದಲ್ಲಿ ಎಂತಹದೋ ಅಟ್ಟಣೆಗೆಯನ್ನು ಕಟ್ಟಿಕೊಂಡಿರಬೇಕೆಂದು ಊಹಿಸಬಹುದು[೨೩].ಇವುಗಳಲ್ಲದೇ ಗುಹೆಯ ಕತ್ತಲು ಪ್ರದೇಶಗಳಲ್ಲಿ ಬೆಳಕೆ ಇರದ ಸ್ಥಳಗಳಲ್ಲಿಯು ಸಹಿತ ಚಿತ್ರಗಳನ್ನು ಬಿಡಿಸಲಾಗಿದ್ದು ಅವರು ಚಿತ್ರ ಬಿಡಿಸುವಾಗ ಸ್ವಲ್ಪಮಟ್ಟಿಗೆ ಬೆಳಕು ಇರಬಹುದು ನಂತರ ಕಾಲ ಕಳೆದ ಹಾಗೆ ಭೂಮಿಯ ವೈಪರಿತ್ಯದಿಂದ ಎಲ್ಲ ಬೆಳಕಿನ ಭಾಗವನ್ನು ಗುಂಡು ಅಥವಾ ಮಣ್ಣಿನಿಂದ ಮುಚ್ಚಿ ಕತ್ತಲಾಗಿರಬೇಕು ಅಥವಾ ಕೆಲವು ಬೆಳಕಿನ ದೀಪಗಳನ್ನು ಉಪಯೋಗಿಸಿರಬೇಕೆಂದು ಊಹಿಸಬಹುದು.

ಸಾಮಾನ್ಯವಾಗಿ ಬೃಹತ್ ಚಿತ್ರ ನೆಲೆಗಳ ಸುತ್ತ ಮುತ್ತ ಬೃಹತ್ ಶಿಲಾಯುಗದ ಶಿಲಾ ಸಮಾಧಿಗಳನ್ನು ಕಾಣಬಹುದು. ಅವು ಕೂಡ ಅಚ್ಚರಿಯ ನಿರ್ಮಾಣಗಳು ದೊಡ್ಡ ದೊಡ್ಡ ಬಂಡೆಗಳನ್ನು ಎಬ್ಬಿಸಿ ನಿರ್ದಿಷ್ಟ ಆಕಾರದಲ್ಲಿ ಕತ್ತರಿಸಿ ಮನೆಯಂತೆ ನಿಲ್ಲಿಸಿರುವ ರೀತಿ ಆಶ್ಚರ್ಯದಾಯಕ ಅವುಗಳ ನಿರ್ಮಿತಿಯ ಶ್ರಮದ ಹಿನ್ನೆಲೆಯಲ್ಲಿ, ಬೃಹತ್ ಶಿಲಾ ಸಂಸ್ಕೃತಿ ಕಾಲದ ಜನರ ನಿರ್ಮಾಣಗಳೆಂದು ಸ್ಪಷ್ಟವಾಗಿ ಹೇಳಲಾಗಿದೆ[೨೪] ಚಿತ್ರಗಳ ರಚನಾ ಶೈಲಿಯಿಂದ ಕಾಲಮಾನವನ್ನು ಗುರುತಿಸಬಹುದು. ಕುರುಗೋಡು ದೇವಾಲಯದ ಎದುರಿನಲ್ಲಿ ಅನೇಕ ಗವಿಗಳಿವೆ(ಇತ್ತೀಚೆಗೆ ಹಲವು ನಾಶವಾಗಿವೆ) ಅಲ್ಲೆಲ್ಲಾ ಸಾಕಷ್ಟು ಸಂಖ್ಯೆಯಲ್ಲಿ ತಾಮ್ರ ಶಿಲಾಯುಗದ ಕಾಲದ ಜನರು ಕೆಂಪು, ಕಪ್ಪು, ಕಂದು ಬಣ್ಣದ ಚಿತ್ರಗಳ ಜೊತೆಯಲ್ಲಿ ಜನರ ಗುಹೆಯಲ್ಲಿ ವಾಸವಾಗಿದ್ದ ಕುರುಹುಗಳನ್ನು ಇಲ್ಲಿ ಕಾಣಬಹುದಾಗಿತ್ತು[೨೫] ಎತ್ತು ಹಲವು ನೆಲೆಗಳಲ್ಲಿ

ಸಿಕ್ಕಂತ ಕುರಹುಗಳು ಚಿತ್ರ ತಂತ್ರ ಮತ್ತು ಶೈಲಿಯನ್ನು ಆಧರಿಸಿ ಕಾಲವನ್ನು ನಿರ್ಧರಿಸಲಾಗುತ್ತದೆ. ರಾಜಮರ ನೆಲೆಯಲ್ಲಿ ಉಜ್ಜಿ ನಯಗೊಳಿಸಿದ ಕೊಡಲಿಯ ತುಂಡೊಂದು ದೊರೆತಿದೆ. ಜೊತೆಯಲ್ಲಿಯೇ ಸಮಕಾಲದ ಚಿತ್ರಗಳು ಕೂಡ ದೊರೆತಿದೆ. ನೂತನ ಶಿಲಾಯುಗಕ್ಕೆ ಸೇರಿದವು ಎಂದು ಹೇಳಲಾಗಿದೆ. ಅದೇ ರೀತಿ ಕುಪ್ಪಗಲ್ ನೆಲೆಯ ಸಂಸ್ಕೃತಿಯ ಗೋರಿ ಮತ್ತು ವರ್ಣಚಿತ್ರಗಳು ದೊರೆತಿದ್ದು, ಬೃಹತ್ ಶಿಲಾಯುಗ ಮತ್ತು ಇತಿಹಾಸ ಆರಂಭಯುಗ ಕಾಲವೆಂದು ಹೇಳಲಾಗಿದೆ. ಮತ್ತು ತೆಕ್ಕಲಕೋಟೆ ನೆಲೆ ಶಿಲಾ–ತಾಮ್ರಯುಗ ಕಾಲಕ್ಕೆ ಸೇರಿದರೆ, ಭೈರನಾಯಕನಹಳ್ಳಿ ನೆಲೆಯ ಚಿತ್ರಗಳು ಶಿಲಾ–ತಾಮ್ರಯುಗ, ಬೃಹತ್ ಶಿಲಾಯುಗಕ್ಕೆ, ಬೆಳಗಲ್ಲು ಹಳಕುಂದಿ, ಹಂಪಿ, ಮಿಂಚೇರಿ ಸಂಜರಾಯನಕೋಟೆ. ಎತ್ತಿನಬೂದಿಯಾಳ್, ಶಿಲಾ–ತಾಮ್ರಯುಗ, ಬೃಹತ್ ಶಿಲಾಯುಗ, ಇತಿಹಾಸ ಆರಂಭಕ್ಕೆ, ಬಳ್ಳಾರಿ ಕೋಟೆ (ಗುಡ್ಡ), ಬೃಹತ್ ಶಿಲಾಯುಗ ಇತಿಹಾಸ ಆರಂಭದ ಯುಗಕ್ಕೆ ಸೇರಿದವುಗಳಾಗಿವೆ. ಆಯಾ ಯುಗದ ಚಿತ್ರ ತಂತ್ರಿಕವಾಗಿ ಆಯುಧಗಳು, ವಸ್ತುಗಳು, ಚಿತ್ರ ರಚನಾ ಪರಿಕರಗಳಾಗಿವೆ. ಶೈಲಿ ಮತ್ತು ತಂತ್ರ ವಿಶಿಷ್ಟವಾಗಿದೆ. ಆದರೂ ಈ ಪ್ರಾಗೈತಿಹಾಸದ ಕಲಾ ಪ್ರಕಾರವು ತುಂಬಾ ಪ್ರಾಮುಖ್ಯತೆಯನ್ನು ಹೊಂದಿದೆ. ಈ ಚಿತ್ರಗಳು ಅಳಿದುಹೋದರೆ ಈ ಪ್ರಕಾರವೇ ಇಲ್ಲದಂತಾಗುತ್ತದೆ. ಈ ಕಲೆಯನ್ನು ನಕಲು ಮಾಡಿ ಪುಸ್ತಕಗಳಲ್ಲಿ ಉಳಿಸಬಹುದು. ಆದರೆ ಸ್ವಲ್ಪ ಮಟ್ಟಿನ ಪ್ರಯತ್ನ ಎನ್ನಬಹುದು. ಆದರೆ ನೆಲೆಯಲ್ಲಿನ ಚಿತ್ರದ ನಿಜತ್ವವವೇ ಬೇರೆಯಲ್ಲವೇ, ಆದ್ದರಿಂದ ಆದರೂ ಇದನ್ನು ಉಳಿಸುವ ಪ್ರಾಮಾಣಿಕ ಪ್ರಯತ್ನ ನಮ್ಮದಾಗಬೇಕು. ಈ ಪ್ರಾಗೈತಿಹಾಸ ಚಿತ್ರ ಪ್ರಾಕಾರವನ್ನು ಈ ಕೆಳಗಿನಂತ ಅಂಶಗಳನ್ನು ನೋಡಬಹುದು.

೧. ನೇರ ಕ್ರಮಗಳು :

ಚಿತ್ರದ ನೆಲೆಗಳಿಗೆ ಕಾವಲು, ರಕ್ಷಣೆ ಒದಗಿಸುವುದು.

ಪುನಃ ರೂಪಿಸುವುದು.

ಪ್ರತಿ ಮಾಡುವುದು.

ಛಾಯಾಚಿತ್ರ ಮಾಡುವುದು.

ಸ್ಲೈಡ್ಸ್ ಮಾಡುವುದು.

ವಿಡಿಯೋ ಚಿತ್ರೀಕರಣ ಮಾಡುವುದು.

ಮೈಕ್ರೋ ಫಿಲಂನಲ್ಲಿ ಅಳವಡಿಸುವುದು.

೨) ಪೂರಕ ಕ್ರಮಗಳು :

i)ಮುಸ್ತಕಗಳಲ್ಲಿ ಪ್ರಾಗೈತಿಹಾಸ ಚಿತ್ರಗಲನ್ನು ಮುದ್ರಿಸುವುದು.

ii) ಅಲಂಕಾರಿಕ ವಾಣಿಜ್ಯ ವಸ್ತುಗಳನ್ನು ಚಿತ್ರಗಳನ್ನು ರೂಪಿಸುವುದು.

ಸಾವಿರಾರು ವರ್ಷಗಳ ಹಿಂದೆ ರಚಿಸಿದ ಶಿಥಿಲಗೊಂಡ ಅಥವಾ ಬಹುತೇಕ ವಿನಾಶಕ್ಕೀಡಾದ ಚಿತ್ರ ಶಿಲ್ಪ ಮುಂತಾದ ಕಲಾಕೃತಿಗಳನ್ನು ಇನ್ನೂ ಅನೇಕ ತಲೆಮಾರುಗಳ ಕಾಲ ಉಳಿಸಿ ಕಾಪಾಡುವುದು ಹೇಗೆನ್ನುವ ಪ್ರಶ್ನೆ ಇಂದು ನಿನ್ನೆಯದಾಗದೇ ಅನೇಕ ವರ್ಷಗಳಿಂದಲೂ ಕಾಡುತ್ತಿದೆ. ವಿಜ್ಞಾನ ಮತ್ತು

ತಂತ್ರಜ್ಞಾನ ಕ್ಷೇತ್ರಗಳಲ್ಲಿ ಈ ಶತಮಾನದ ಮೊದಲಿನಿಂದಾಗಿ ತೀವ್ರ ಮುನ್ನಡೆ ಕಲಾ ಪ್ರಪಂಚದಲ್ಲೂ ತನ್ನ ಪ್ರಭಾವ ಬೀರಿ ಈ ಪ್ರಶ್ನೆಗೆ ಸ್ವಲ್ಪ ಮಟ್ಟಿಗೆ ಉತ್ತರವನ್ನೊದಗಿಸಿದೆ. ಆದರೂ ನಮ್ಮ ಸುತ್ತಮುತ್ತಲಿನ ಅನೇಕ ನೆಲೆಗಳಿಗೆ ವೈಜ್ಞಾನಿಕ ವಿಧಾನದಿಂದ ಮೂಲತಃ ಇದ್ದ ಸ್ಥಿತಿಗೆ ಇರುವ ಹಾಗೆ ಚಿತ್ರಗಳನ್ನು ಕೆಲ ರಸಾಯನಿಕಗಳ ಮೂಲಕ ಸಾಧ್ಯವಾಗಬೇಕಾಗಿದೆ.

ಮೂಲಕ ಸಾಧ್ಯವಾಗಬೇಕಾಗಿದೆ.

ಟಿಪ್ಪಣಿಗಳು :

೧. ಡಾ. ಶರಣಪ್ಪ ಕೋಲ್ಕಾರ, ಹಂಪಿ ಸಂ. ಪು.ಸಂ-೧೫

೨. – ಅದೇ –

೩. – ಅದೇ –

೪. – ಅದೇ –

೫. ಶರಣಪ್ಪ ಕೋಲ್ಕಾರ, ಹಂಪಿ ಸಂಪು ಪು ೧೬

೬. ಶರಣಪ್ಪ ಕೋಲ್ಕಾರ, ಹಂಪಿ ಸಂಪು ಪು ೧೭

೭. ಡಾ. ಅ. ಸುಂದರ, ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆ ಪು. ೨೪

೮. ಡಾ. ಶರಣಪ್ಪ ಕೋಲ್ಕಾರ, ಹಂಪಿ ಸಂಪುಟ, ಪು. ೧೭

೯. ಶರಣಪ್ಪ ಕೋಲ್ಕಾರ, ಹಂಪಿ ಸಂಪು ಪು ೧೬

೧೦. – ಅದೇ –

೧೧. ಡಾ. ಅ. ಸುಂದರ, ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆ ಪು. ೨೪.

೧೨. – ಅದೇ –

೧೩. ಡಾ. ಯಾದಪ್ಪ ಪರದೇಶಿ: ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪು. ೧೭೧

೧೪. – ಅದೇ –

೧೫. ಡಾ. ಯಾದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪು. ೧೭೨

೧೬. ಡಾ. ಯಾದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪು. ೧೭೩

೧೭. ಡಾ. ಯಾದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪು. ೧೭೪

೧೮. – ಅದೇ –

೧೯. – ಅದೇ –

೨೦. ಡಾ. ಯಾದ್ಪ ಪರದೇಶಿ , ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪು. ೧೭೫

೨೧ . ಡಾ. ಯಾದ್ಪ ಪರದೇಶಿ , ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಪು. ೧೭೬

೨೨. – ಅದೇ –

ಅಧ್ಯಾಯ : ಆರು

ಸಮಾರೋಪ

ನಾಡಿನ ಸಂಸ್ಕೃತಿಯ ಅಧ್ಯಯನದಲ್ಲಿ ಪ್ರಾಗೈತಿಹಾಸಿಕ ಚಿತ್ರಗಳ ಪಾತ್ರ ಮಹತ್ವವಾಗಿದೆ. ಈ ಒಂದು ಕಲಾಪ್ರಕಾರ ಇಂದಿನವರೆಗೆ ಉಳಿದು ಬಂದಿರುವುದು ನಿಜವಾಗಿಯೂ ಸಂತಸದ ವಿಷಯವಾಗದೆ. ಕಲೆ ಎನ್ನುವುದು ನಿಂತ ನೀರಲ್ಲ, ಇತ್ತೀಚಿನ ಕಲಾ ಪ್ರಕಾರಗಳಲ್ಲಿ ಹಲವು ಪ್ರಯೋಗಗಳು ಇರುವಂತೆ, ಪ್ರಾಗೈತಿಹಾಸಿಕ ಚಿತ್ರಕಲೆಯ ರಚನಾ ವಿಧಾನ, ತಂತ್ರಗಾರಿಕೆ, ಶೈಲಿ ಪರಿಕರ, ವಸ್ತು ವಿಷಯ ಮುಂತಾದ ಹಲವು ಆಯಾಮಗಳಲ್ಲಿ ಅಂದಿನ ಪ್ರಯೋಗ ತನ್ನದೇಯಾದ ವಿಶಿಷ್ಟವಾದ ಮಹತ್ವವನ್ನು ಪಡೆದುಕೊಂಡಿದೆ. ಈ ಒಂದು ಕಿರು ಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯದಲ್ಲಿ ಈ ಕೆಳಗಿನ ಪ್ರಮುಖ ಅಂಶಗಳ ವಿವೇಚನಗೊಂಡಿದೆ.

ಮೊದಲನೆಯ ಅಧ್ಯಯನದಲ್ಲಿ ಅಧ್ಯಯನದ ಉದ್ದೇಶ ಸ್ವರೂಪ ವ್ಯಾಪ್ತಿ ಮತ್ತು ವೈದಾನಿಕತೆಯನ್ನು ಯಾವುದೇ ಕಾಲದ ಕಲೆಯು ಆಯಾ ಕಾಲದ ಜನ ಜೀವನದ ಸಾಂಸ್ಕೃತಿಕ ವಿವರಗಳನ್ನು ಒಳಗೊಂಡಿರುತ್ತವೆ. ಪ್ರಾಚೀನ ಇತಿಹಾಸ ತಿಳಿಯಲು ಇವು ಮಹತ್ವದ ಆಕರಗಳಾಗಿವೆ.

ಎರಡನೆಯ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳ ಬಗೆಗೆ ಹೇಳಲಾಗಿದೆ. ಈ ಜಿಲ್ಲೆಯ ಸಾಂಸ್ಕೃತಿಕ ಪರಿಸರವು ಹಲವು ಕಲೆಗಳ ಬೆಳವಣಿಗೆಯ ಬೀಡಾಗಿದೆ. ಕಲಾ ಸಂಸ್ಕೃತಿಯ ಸಂಪತ್ತು, ಕಲಾ ಬೆಳವಣಿಗೆಗೆ ಬಳ್ಳಾರಿ ಜಿಲ್ಲೆ ಹೇಗೆ ಪೂರಕವಾಗಿದೆ ಎಂಬುವುದನ್ನು

ಕಂಡುಕೊಳ್ಳಲಾಗಿದೆ.

ಅಧ್ಯಯನ ಮೂರರಲ್ಲಿ ಪ್ರಾಗೈತಿಹಾಸಿಕ ಚಿತ್ರಕಲೆಯ ಐತಿಹಾಸಿಕ ಹಿನ್ನೆಲೆಯನ್ನು ದೇಶ-ವಿದೇಶ-ರಾಜ್ಯದ ಸಂಶೋಧನೆಯ ಐತಿಹಾಸಿಕ ಹಿನ್ನೆಲೆಯನ್ನು ಕುರಿತು ಚರ್ಚಿಸಲಾಗಿದೆ. ಈ ಜಿಲ್ಲೆಯ ಪ್ರಾಗೈತಿಹಾಸಿಕ ಸಂಶೋಧನಾ ಇತಿಹಾಸಕ್ಕೆ ದೇಶ-ವಿದೇಶದ ಪ್ರಾಗೈತಿಹಾಸದ ಚಿತ್ರಗಳ ಇತಿಹಾಸ ಪೂರಕವಾಗಿರುವುದು ಕಂಡು ಬರುತ್ತದೆ.

ನಾಲ್ಕನೆಯ ಅಧ್ಯಯನದಲ್ಲಿ ಜಿಲ್ಲೆಯ ಪ್ರಾಗಿತಿಹಾಸದ ಚಿತ್ರಕಲೆ ನೆಲೆಗಳ ವರ್ಗೀಕರಣವನ್ನು, ವಸ್ತು ವಿಷಯದ ಬಗೆಗೆ ಹೇಳಲಾಗಿದೆ. ಅಂದಿನ ಸಾಂಸ್ಕೃತಿಕ ಕಲಾ ಪ್ರಜ್ಞೆಯ ಮಾಧ್ಯಮದ ರಚನಾ ವಿಧಾನಗಳ ಮೂಲಕ ಕೌಶಲ್ಯ, ಸೃಜನಾತ್ಮಕತೆ ಕಲಾ ಜಾಣ್ಮೆಯ ಅಭಿವ್ಯಕ್ತತೆಯ ಸಾಮರ್ಥ್ಯ ಹಿನ್ನಲೆಯ ಕಲಾತ್ಮಕ ಅಂಶಗಳನ್ನು ವಿವೇಚಿಸಲಾಗಿದೆ.

ಐದನೆಯ ಅಧ್ಯಾಯನದಲ್ಲಿ ಶೈಲಿಯ ವಿಶಿಷ್ಟತೆ ವಿನ್ಯಾಸ ಅಪರೂಪವಾದದ್ದು. ಬಣ್ಣ, ಬಿತ್ತಿ, ಕುಂಚ, ಅಂಚು, ಮಾದ್ಯಮ, ಲೇಪನ ವಿಧಾನಗಳಲ್ಲಿ ಪ್ರಾಯೋಗಿಕತೆಯ ತಾಂತ್ರಿಕತೆ ಮಹತ್ವ ಪೂರ್ಣವಾದದ್ದು ಇಂದಿಗೂ ಈ ಕಲೆ ಉಳಿದು ಬಂದಿರುವುದರ ಮಹತ್ವವನ್ನು ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯ ಸಮಾರೋಪವಾಗಿದ್ದು ಎಲ್ಲ ಅಧ್ಯಾಯಗಳ ಒಟ್ಟು ಫಲಿತಗಳ ಸಮೀಕ್ಷೆಯಾಗಿದೆ.

ಅಧ್ಯಯನ ಫಲಿತಗಳು :

೧. ಈ ಚಿತ್ರಕಲೆ ಹಲವು ವೈಶಿಷ್ಯಗಳಿಂದ ಕೂಡಿದ್ದು ನಾಡಿನ ಕಲ ಇತಿಹಾಸದಲ್ಲಿ ತನ್ನದೇ ಆದ ಒಂದು ಪ್ರತ್ಯೇಕ ಛಾಪನ್ನು ಬೀರಿದೆ.

೨. ಅಳಿದು ಹೋದ ಒಂದು ಸಂಸ್ಕೃತಿಯನ್ನು ಈ ಚಿತ್ರಗಳು ಪ್ರತಿನಿಧಿಸುವುದರಿಂದ ಇಂದಿನವರೆಗೆ ಹಿಂದಿನವರ ಪರಿಚಯವಾಗುವಲ್ಲಿ ಈ ಪ್ರಾಗೈತಿಹಾಸದ ಚಿತ್ರಗಳು ಒಂದು ಪ್ರಮುಖವಾದ ದೃಶ್ಯ ಮಾಧ್ಯಮವಾಗಿದೆ.

೩. ಈ ಪ್ರಾಗಿತಿಹಾಸದ ಚಿತ್ರಗಳು ಎದ್ದು ಕಾಣುವುದು ಶಕ್ತಿಯುತವಾದ ರೇಖೆಗಳಾಗಿದ್ದು ಪ್ರಥಮ ಯುಗದ ಕಲಾವಿದನ ಕೌಶಲ್ಯದೊಂದಿಗೆ ಈ ಕಲಾಕೃತಿಗಳು ಪರಿಚಯಿಸುತ್ತವೆ.

೪. ಈ ಪ್ರಾಗಿತಿಹಾಸದ ಚಿತ್ರಗಳು ಅಂದಿನ ಜನಜೀವನದ ಉಪಯೋಗಿಕ ಪರಿಕರ ಜೊತೆಗಿನ ಸಂಬಂಧ ಹೊಂದಿದಂತವುಗಳಲ್ಲದೇ ಪ್ರಥಮ ತಹ ಚಿತ್ರ ಪ್ರತ್ಯಕ್ಷವಾಗಿ ನೆಲೆಗಳ ಸಂಸ್ಕೃತಿಯ ಫಲಕದಂತೆ ಕಂಗೊಳಿಸುವಂತಹುಗಳಾಗಿವೆ.

೫. ನಂತರ ಸಂಸ್ಕೃತಿಯ ಉತ್ಪನನಕ್ಕೆ ನಾಂದಿಯಂತಿರುವವು ಮತ್ತು ಚಿತ್ರಗಳ ಸುತ್ತ ಮುತ್ತ ಸಂಸ್ಕೃತಿಯ ಜನಜೀವನದ ಅವಶೇಷ ಕುರುಹು ಇರುವವು ಎಂಬ ಪ್ರಥಮ ಸಂದೇಶದಂತೆ ಮೇಲೆ ಇರುವವು.

೬. ಈ ಪ್ರಾಗೈತಿಹಾಸದ ಚಿತ್ರವು ಜನಪದ ಚಿತ್ರಕಲೆಯ ಮೂಲ ಎಂದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೭. ಈ ಅಧ್ಯಯನದಲ್ಲಿ ಚಿತ್ರಗಳು ಪ್ರಧಾನವಾಗಿ ವೃತ್ತಿಯ (ಆಹಾರ) ಹಿನ್ನೆಲೆಯುಳ್ಳವಾಗಿದ್ದು, ನಂತರ ಸೌಂದರ್ಯ, ಧಾರ್ಮಿಕವಾಗಿದ್ದುವು ಎಂದು ಹೇಳಬಹುದು.

೮. ಒಬ್ಬ ಕಲಾವಿದನು ತನ್ನ ಕಾಲದ ವಿಶಿಷ್ಟ ಜೀವಧ್ವನಿಗೆ ಸ್ಪಂದಿಸಿ ಅಭಿವ್ಯಕ್ತಿಸುವ ಮೂಲಕ ಆ ಕಾಲದ ಆಗುಹೋಗುಗಳನ್ನು ಜನರ ಮನೋಭಾವವನ್ನು ದಾಖಲಿಸುವ ಸಾಧ್ಯತೆಗಳಿರುವುದರಿಂದ ಸಮಕಾಲೀನ ದಾಖಲೆಗಳಾಗಿ ಇತಿಹಾಸ ರಚಿಸುವಲ್ಲಿ ಈ ಕೃತಿಗಳು ಹೆಚ್ಚಿನ ಸಹಾಯವನ್ನು ಒದಗಿಸುವ ಸಾಧ್ಯತೆಯನ್ನು ಇಲ್ಲಿ ಮನಗಾಣಲಾಗಿದೆ.

೯. ಜಗತ್ತಿನ ಇತಿಹಾಸದ ಅಧ್ಯಯನದಲ್ಲಿ ಈ ಚಿತ್ರಕಲೆಯು ಅಲ್ಲಲ್ಲಿಯೆ ನಾಗರೀಕತೆಯ ಹೆಚ್ಚು ಬೆಳವಣಿಗೆ ಸಮಕಾಲೀನತೆ ಹೋಲಿಕೆ, ಅನುಕೂಲವಾಗಿದ್ದು, ಈ ಪ್ರಾಗೈತಿಹಾಸದ ಚಿತ್ರಗಳು ಸಮಕಾಲೀನ (ಜಗತ್ತಿನ) ಹೋಲುವಂತವು ಎಂದು ಅಧ್ಯಯನದಿಂದ ತಿಳಿದು ಬರುತ್ತದೆ.

೧೦. ಈ ಅಧ್ಯಯನವನ್ನು ಕಲಾತ್ಮಕ ಮತ್ತು ಐತಿಹಾಸಿಕ ಹೀಗೆ ಎರಡನ್ನು ಸಮಾನ ದೃಷ್ಟಿಕೋನದಿಂದ ನೋಡಲಾಗಿದೆ. ಇಲ್ಲಿ ಚಿತ್ರಗಳು ಕಲಾತ್ಮಕ ಅಂಶಗಳಂತೆ, ಐತಿಹಾಸಿಕವಾಗಿಯೂ ಕೂಡಾ ಹೆಚ್ಚಿನ ಮಹತ್ವ ಪಡೆದಿದ್ದು ನಾಶದ ಹಾದಿಯಲ್ಲಿರುವ ಇಂತಹ ಕಲಾಸಂಪತ್ತನ್ನು ಮುಂದಿನ ಜನಾಂಗಕ್ಕೆ ಉಳಿಸಿ ಹೆಚ್ಚು ದಿನಗಳವರೆಗೆ ಬದುಕಿಸುವಂತೆ ಮಾಡುವುದು ಇಂದು ಪ್ರಮುಖವಾದ ಕಾರ್ಯವಾಗಿದೆ.ಇದು ಕಾಲಮಿತಿಯ ಅಧ್ಯಯನವಾಗಿರುವುದರಿಂದ ಈ ಅಧ್ಯಯನವು ಒಂದು ಪಕ್ಷಿನೋಟದ ಚಿತ್ರಣವನ್ನು ಕೊಟ್ಟಿದೆ. ಸಮಯದ ಮಿತಿಯಲ್ಲಿ ಮತ್ತು ಬರವಣಿಗೆಯ ಪುಟಗಳ ಮಿತಿಯಲ್ಲಿ ಹಲವು ಅಂಶಗಳನ್ನು ಇಲ್ಲಿ ಅತ್ಯಂತ ಸ್ಥೂಲವಾಗಿ ಚರ್ಚಿಸಲಾಗಿದೆ.

ಈ ಪ್ರಾಗೈತಿಹಾಸಿಕ ಮಾನವನ ನೆಲೆಯಾಗಿದ್ದು ಇಲ್ಲಿಯ ಪರಿಸರ ಆ ಕಾಲದ ಮಾನವನ ನೆಲೆಗೆ ಎಲ್ಲ ರೀತಿಯಲ್ಲಿ ಪೂರಕವಾಗಿದ್ದು, ನದಿ, ನೀರು, ಆಹಾರ, ಆಶ್ರಯಕ್ಕಾಗಿ ನೈಸರ್ಗಿಕ ಕಲ್ಲಿನ ಗುಹೆಗಳು ಬೇಟೆಗಾಗಿ ಪ್ರಾಣಿಗಳು ಹೀಗೆ ಆ ಕಾಲಕ್ಕೆ ಬೇಕಾದ ಮೂಲಭೂತ ಸೌಕರ್ಯಗಳು ಪ್ರಾಗೈತಿಹಾಸಿಕ ಮಾನವನಿಗೆ ಸಿಕ್ಕ ಕಾರಣವಾಗಿ, ಇಲ್ಲಿ ಹೇರಳವಾದ ಜನವಸತಿ ಇರಬೇಕು. ಸಾವಿರಾರು ಕಡೆಗೆ ಇರುವ ಈ ಚಿತ್ರಗಳ ನೆಲೆಗಳು ಈ ಮಾತನ್ನು ಪುಷ್ಠೀಕರಿಸುತ್ತವೆ. ಹೀಗೆ ಬಳ್ಳಾರಿ ಜಿಲ್ಲೆ ಪ್ರಾಗೈತಿಹಾಸಿಕ ಕಾಲದ ಮಾನವರ ಮಹತ್ವದ ನೆಲೆವೀಡಾಗಿರುವುದು ಕಂಡು ಬರುತ್ತದೆ. ಈ ಪ್ರದೇಶದಲ್ಲಿ ಇನ್ನೂ ಅನೇಕ ಪ್ರಾಗಿತಿಹಾಸದ ಚಿತ್ರಕಲೆಯ ನೆಲೆಗಳು ಸಿಗುವ ಸಾಧ್ಯತೆ ಇದ್ದು ಇದೊಂದು ಸಣ್ಣ ಪ್ರಯತ್ನ ಈ ದಿಸೆಯಲ್ಲಿ ಅಧ್ಯಯನಕಾರರು ಪ್ರಯತ್ನ ಮಾಡಬಹುದಾಗಿದೆ.

ಗ್ರಂಥ ಋಣ :

೧. ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ, ಡಾ.ಅ.ಸುಂದರ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು ೧೯೯೪,

೨. ಕಲೆಯ ನೆಲೆ, ಡಾ. ವಿ.ಕೆ. ಗೋಕಾಕ್
ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ,
ಮೈಸೂರು

೩. ಬಳ್ಳಾರಿ ಜಿಲ್ಲಾ ದರ್ಶನ, ಸಂ. ಡಾ. ಕೆ.ರವೀಂದ್ರನಾಥ
ಪ್ರಸಾರಾಂಗ, ಗುಲಬರ್ಗ ವಿಶ್ವವಿದ್ಯಾಲಯ,
ಗುಲಬರ್ಗ

೪. ಕಲೆ ಮತ್ತು ರಸಾಸ್ವಾದನೆ, ಪ್ರೊ. ಎಂ.ಎಚ್. ಕೃಷ್ಣಯ್ಯ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು ೧೯೮೯,

೫. ಕರ್ನಾಟಕ ಭಿತ್ತಿ ಚಿತ್ರ ಪರಂಪರೆ ಡಾ. ಅ.ಲ. ನರಸಿಂಹನ್
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು ೧೯೯೮,

೬. ಚಿತ್ರಕಲಾ ಚಿಂತನೆ, ಶಂಕರ ಪಾಟೀಲ
ಕಲಾಭವನ, ವಿದ್ಯಾನಗರ
ದಾವಣಗೇರೆ ೧೯೯೫,

೭. ಭಾರತೀಯ ಚಿತ್ರಕಲೆ, ಡಾ. ಶಿವರಾಮಕಾರಂತ
ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

೮. ವಿಜಯನಗರ ಸಾಮ್ರಾಜ್ಯ ಚರಿತೆ, ಡಾ. ಬಸವರಾಜ ಮಲಶೆಟ್ಟಿ
ಹಂಪೆ, ಒಂದು ಪರಿಚಯ, ಬೇಲೂರು ಕೃಷ್ಣಮೂರ್ತಿ
ಮಹಾಕವಿ ಹರಿಹರ ಸ್ಮಾರಕ ಪರಿಷತ್ತಿನ ಕೇಂದ್ರ
ಹೊಸಪೇಟೆ ೧೯೮೧

೯.	ವಿಜಯನಗರದ ಭಿತ್ತಿಚಿತ್ರಕಲೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಸಂಪ್ರಬಂಧ	ಸುಚಿತ್ರ ಲಿಂಗದಹಳ್ಳಿ
೧೦.	ಸೌಂದರ್ಯಶಾಸ್ತ್ರ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.	ಅನು.ಡಾ. ಕಾಶಿನಾಥಅಂಬಲಿಗೆ ಮೂಲ : ಡಾ.ಮಮತಾ ಚತುರ್ವೇದಿ
೧೨.	ಹಂಪಿ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.	ಡಾ. ದೇವರಕೊಂಡರೆಡ್ಡಿ
೧೫.	ಕರ್ನಾಟಕ ಜಾನಪದ ಚಿತ್ರಕಲೆ ವೀರಶೈವ ಅಧ್ಯಯನ ಸಂಸ್ಥೆ ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ	ಡಾ. ಎಸ್.ಸಿ.ಪಾಟೀಲ
೧೬.	ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೬,	ಡಾ. ಎಚ್. ಈ. ಬಸವರಾಜಪ್ಪ
೧೭.	ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ ಒಂದು ಅಧ್ಯಯನ ಅ.ಪ್ರ ಪಿಎಚ್.ಡಿ. ಮ.ಪ್ರ ಕನ್ನಡ ವಿಶ್ವವಿದ್ಯಾಲಯ, ಹಂಪಿ.	ಡಾ. ಯಾದಪ್ಪ ಪರದೇಶಿ
೧೮.	ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.	ಮಹಾದೇವ ಸಿ, ಸುಬ್ಬಣ್ಣ ರೈ, ಮಾಧವ ಪೆರಾಜೆ.
೧೯.	ಚಿತ್ರಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ೧೯೯೩	ಪ್ರ. ಸಂ. ತಿಪ್ಪೇಸ್ವಾಮಿ
೨೦.	ಸ್ಟೋನೇಜ್ ಪೇಂಟಿಂಗ್ಸ್ ಇನ್ ಇಂಡಿಯಾ, ಮುಂಬೈ ೧೯೭೬,	ವಿಷ್ಣು ಎಸ್.ವಾಕಣೀಕರ, & ರಾಬರ್ಟ್ ಆರ್. ಬ್ರೈಶ್
೨೧.	ವಿಜಯನಗರ ಪೇಂಟಿಂಗ್ಸ್, ನವದೆಹಲಿ ೧೯೮೫,	ಶಿವರಾಮಮೂರ್ತಿ ಸಿ
೨೩.	ಕನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.	ಶಿವತಾರಕ. ಕೆ.ಬಿ.

೨೪. ಕರ್ನಾಟಕದ ಭಿತ್ತಿಚಿತ್ರಗಳು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೭೬ — ಶಾಸ್ತ್ರಿ ಬಿ.ವಿ.ಕೆ

೨೫. ಕೊಪ್ಪಳ ಹಂಪಿ ಪ್ರದೇಶದ ಪ್ರಾಗೈತಿಹಾಸಕಾಲದ ಕಲೆ ಪಿಎಚ್.ಡಿ. ಅ.ಪ್ರ., ಮ.ಪ್ರ ಕನ್ನಡ ವಿಶ್ವವಿದ್ಯಾಲಯ, ಹಂಪಿ. — ಶರಣಬಸಪ್ಪ ಪಿ. ಕೊಲ್ಕಾರ್

೨೬. ಬಳ್ಳಾರಿ ಜಿಲ್ಲೆಯ ದೇವಾಲಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. — ಸಂ. ಸುರೇಶ ಕೆ.ಎಂ, ವಾಸುದೇವ ಬಡಿಗೇರ, ಎಸ್.ವೈ, ಸೋಮಶೇಖರ, ಕೊಟ್ರೇಶ್ ಎಮ್

ಪತ್ರಿಕೆಗಳಲ್ಲಿ ಬಂದ ಲೇಖನಗಳು :

೧. ಪ್ರಜಾವಾಣಿಕ ಪತ್ರಿಕೆ, ೨೦೦೮

೨. ಬಳ್ಳಾರಿಕೋಟೆಯ ಪರಿಚಯ ಲೇಖನ, ೧೯೯೮ — ಪುರಾತತ್ವ ಇಲಾಖೆ ಬಳ್ಳಾರಿ

೩. ಈ ನಮ್ಮ ಕನ್ನಡನಾಡು, ೭ ಆಗಸ್ಟ್ ಲೇಖನ ೧೯೯೮.

೪. ಕಲಾವಾರ್ತೆ ಜುಲೈ-ಸೆಪ್ಪಂಬರ್-೨೦೦೩ ಲಲಿತಕಲಾ ಅಕಾಡೆಮಿ, — ದಿಲೀಪ್‌ಕುಮಾರ್ ಕಾಳೆ

ಬಳ್ಳಾರಿ ಜಿಲ್ಲೆ



ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆ
ಪ್ರಾಗೈತಿಹಾಸಿಕ ಚಿತ್ರಕಲೆ
ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆ
ಸಂಗನಕಲ್ಲು ಮತ್ತು ಕಪ್ಪುಗಲ್ಲು
ಬಳ್ಳಾರಿ ಕೋಟೆ (ಗುಡ್ಡ)
ಸಂಜರಾಯನ ಕೋಟೆ
ಮಿಂಚೇರಿ
ಹಂಪಿ
ರಾಜಾಪುರ
ಕಮಲಾಪುರ
ವೆಂಟಾಪುರ (ಆಸುಂದರ.ಕೃಪೆ)

AKSHARA GRANTHALAYA
ACC.NO. 130025

